ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 13 | ಸಂಚಿಕೆ 12 | ಮಾರ್ಚ್ 18–24, 2019 | ಪುಟ 16 | ರೂ.10/-

Web : www.janashakthi.co.in, e-mail : js_weekly@yahoo.com

ಲೋಕಸಭಾ ಚುನಾವಣೆ ಒಂದು ನಿರ್ಣಾಯಕ ಸಮರ



ಕೂಲಿ ಕೇಳಲು ಹೋದವರ ಸಾವು





ಭಾರತ ಮನುವಾದ ಮುಕ್ತವಾಗಲಿ



ಹಾಸ್ಟೆಲ್ ಹೊರಗುತ್ತಿಗೆ ನೌಕರರಿಗೆ ಮುಖ್ಯಮಂತ್ರಿ ಭರವಸೆ

17ನೇ ಲೋಕಸಭಾ ಚುನಾವಣೆಯ ಪ್ರಕ್ರಿಯೆ ಆರಂಭ

ಮಾರ್ಚ್ 10 ರಂದು ಭಾರತದ ಚುನಾವಣಾ ಆಯೋಗ 17ನೇ ಲೋಕಸಭಾ ಚುನಾವಣೆಗಳ ವೇಳಾಪಟ್ಟಿಯನ್ನು ಪ್ರಕಟಿಸುವುದರೊಂದಿಗೆ ಇನ್ನೊಂದು ಸಾರ್ವತ್ರಿಕ ಚುನಾವಣೆಯ ಪ್ರಕ್ರಿಯೆ ಆರಂಭವಾಗಿದೆ.

ಮತದಾನ ಎಪ್ರಿಲ್ 11ರಂದು ಆರಂಭವಾಗಿ ಮೇ 19ರ ವರೆಗೆ ಏಳು ಹಂತಗಳಲ್ಲಿ ನಡೆಯಲಿದೆ, ಮತಗಣನೆ ಮೇ 23ರಂದು ನಡೆಯಲಿದೆ.

ಸುಮಾರು 90 ಕೋಟಿ ಮತದಾರರು ಈ ಸಾರ್ವತ್ರಿಕ ಚುನಾವಣೆಗಳಲ್ಲಿ ಭಾಗವಹಿಸಲಿದ್ದಾರೆ ಎಂದು ಮುಖ್ಯ ಚುನಾವಣಾ ಆಯುಕ್ತರು ಹೇಳಿದ್ದಾರೆ. ಇವರಲ್ಲಿ 1.5 ಕೋಟಿ ಮೊದಲ ಬಾರಿಗೆ ಮತದಾನ ಮಾಡುತ್ತಿರುವವರು. ಮತದಾನಕ್ಕೆ ಸುಮಾರು 10ಲಕ್ಷ ಮತಗಟ್ಟೆಗಳನ್ನು ಏರ್ಪಡಿಸಲಾಗುವುದು ಎಂದೂ ಅವರು ಹೇಳಿದ್ದಾರೆ. ಎಲ್ಲ ಮತಯಂತ್ರಗಳೊಂದಿಗೆ ವಿ.ವಿ.ಪಿ.ಎ.ಟಿ. ಅಂದರೆ ಮತದಾರರು ತಾವು ಮತ ಚಲಾಯಿಸಿದ ನಂತರ ಅದು ಯಂತ್ರದಲ್ಲಿ ದಾಖಲಾಗಿದ್ದನ್ನು ತೋರಿಸುವ ಕಾಗದದ ಜಾಡು ಇರುತ್ತದೆ ಎಂದು ಹೇಳಲಾಗಿದೆಯಾದರೂ, ಅವುಗಳಲ್ಲಿ ಎಷ್ಟನ್ನು ಗಣನೆಗೆ ತಗೊಳ್ಳಲಾಗುವುದು ಎಂಬ ಬಗ್ಗೆ ಆಶ್ವಾಸನೆಯನ್ನೇನೂ ಕೊಟ್ಟಿಲ್ಲ. ಭಾರತೀಯ ಸಂಖ್ಯಾಶಸ್ತ್ರ ಸಂಸ್ಥೆ(ಐಎಸ್ಐ) ಎಷ್ಟು ಪ್ರಮಾಣದಲ್ಲಿ ಇವುಗಳ ಗೆಣನೆ ನಡೆಸಬೇಕು ಎಂಬ ವಿಷಯವನ್ನು ಪರಿಶೀಲಸುತ್ತಿದ್ದು, ಬೇಗನೇ ಅದರ ವರದಿ ಬರಲಿದೆ, ಅದನ್ನು ಚರ್ಚಿಸಿ ಚುನಾವಣಾ ಆಯೋಗ ಈ ಬಗ್ಗೆ ಒಂದು ನಿರ್ಣಯಕ್ಕೆ ಬರುತ್ತದೆ ಎಂದು ಮುಖ್ಯ ಚುನಾವಣಾ ಅಯುಕ್ತರು ಹೇಳಿದ್ದಾರೆ.

•**ಮೊದಲ ಹಂತ: ಎಪ್ರಿಲ್ 11**	20 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳ	91 ಕ್ಷೇತ್ರಗಳು
ಎರಡನೇ ಹಂತ: ಎಪ್ರಿಲ್ 18	13–97	ಕ್ಷೇತ್ರಗಳು
ಮೂರನೇ ಹಂತ:ಎಪ್ರಿಲ್ 23	14– 115	ಕ್ಷೇತ್ರಗಳು
ನಾಲ್ಕನೇ ಹಂತ: ಎಪ್ರಿಲ್ 29	9– 71	ಕ್ಷೇತ್ರಗಳು
ಐದನೇ ಹಂತ: ಮೇ 6	7– 51	ಕ್ಷೇತ್ರಗಳು
ಆರನೇ ಹಂಂತ: ಮೇ 12	7– 59	ಕ್ಷೇತ್ರಗಳು
ಏಳನೇ ಹಂತ: ಮೇ 19	8– 59	ಕ್ಷೇತ್ರಗಳು
ಮತಗಣನೆ	**ಮೇ 23**	

• ಬಿಹಾರ, ಉತ್ತರಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಎಲ್ಲ ಏಳು ಹಂತಗಳಲ್ಲಿ ಮತದಾನ ನಡೆಯಲಿದೆ.

• ಜಮ್ಮು ಮತ್ತು ಕಾಶ್ಮೀರದಲ್ಲಿ ಎಪ್ರಿಲ್ 11 ರಿಂದ ಮೇ 6ರ ನಡುವೆ 5 ಹಂತಗಳಲ್ಲಿ ಮತದಾನ ನಡೆಯಲಿದೆ.



• ಮಹಾರಾಷ್ಟ್ರ ಮತ್ತು ಒಡಿಶಾದಲ್ಲಿ ಎಪ್ರಿಲ್ 11ರಿಂದ ಎಪ್ರಿಲ್ 29ರ ನಡುವೆ ಹಾಗೂ ಝಾರ್ಖಂಡ್ ಮತ್ತು ಮಧ್ಯಪ್ರದೇಶದಲ್ಲಿ ಎಪ್ರಿಲ್ 29ರಿಂದ ಮೇ 19ರ ನಡುವೆ ನಾಲ್ಕು ಹಂತಗಳಲ್ಲಿ ಮತದಾನ ನಡೆಯುತ್ತದೆ.

• ಅಸ್ಸಾಂ ಮತ್ತು ಛತ್ತೀಸ್‌ಗಡದಲ್ಲಿ ಎಪ್ರಿಲ್ 11 ರಿಂದ ಎಪ್ರಿಲ್ 23 ರ ನಡುವೆ ಮೂರು ಹಂತಗಳಲ್ಲಿ ಮತದಾನ ನಡೆಯುತ್ತದೆ.

• ಕರ್ನಾಟಕ, ಮಣಿಪುರ, ರಾಜಸ್ಥಾನ ಮತ್ತು ತ್ರಿಪುರಾದಲ್ಲಿ ಎರಡು ಹಂತಗಳಲ್ಲಿ ಮತದಾನ ನಡೆಯುತ್ತದೆ.

• ಉಳಿದ 21 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಂದೇ ಹಂತದ ಮತದಾನ ಇರುತ್ತದೆ.

• **ಕರ್ನಾಟಕದಲ್ಲಿ ಎಪ್ರಿಲ್18ರಂದು ದಕ್ಷಿಣ ಭಾಗದ 14 ಕ್ಷೇತ್ರಗಳಲ್ಲಿ ಮತ್ತು ಎಪ್ರಿಲ್ 23ರಂದು ಉತ್ತರ ಭಾಗದ 14 ಕ್ಷೇತ್ರಗಳಲ್ಲಿ ಮತದಾನ ನಡೆಯಲಿದೆ.**

ಜಮ್ಮು ಮತ್ತು ಕಾಶ್ಮೀರದಲ್ಲಿ ವಿಧಾನಸಭಾ ಚುನಾವಣೆಗಳೇಕಿಲ್ಲ?

ಚುನಾವಣಾ ಆಯೋಗ ಗಂಭೀರವಾಗಿ ಪರಿಶೀಲಿಸಬೇಕು–ಸಿಪಿಐ(ಎಂ) ಪೊಲಿಟ್‌ಬ್ಯುರೊ

ಜಮ್ಮು ಮತ್ತು ಕಾಶ್ಮೀರದಲ್ಲಿ ಸುಭದ್ರತೆಯ ಪರಿಸ್ಥಿತಿ ಲೋಕಸಭಾ ಚುನಾವಣೆಗಳನ್ನು ನಡೆಸಲು ಉತ್ತಮವಾಗಿದೆ, ಆದರೆ ಈಗಾಗಲೇ ನಡೆಯಬೇಕಾಗಿದ್ದ ವಿಧಾನಸಭಾ ಚುನಾವಣೆಗಳಿಗೆ ಇಲ್ಲ ಎಂಬುದು ಸೋಜಿಗದ ಸಂಗತಿ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಹೇಳಿದೆ. ಈ ರಾಜ್ಯದ ವಿಧಾನಸಭೆಯನ್ನು ವಿಸರ್ಜಿಸಿದ್ದು, ಸದ್ಯಕ್ಕೆ ಇಲ್ಲಿ ಕೇಂದ್ರೀಯ ಆಳ್ವಿಕೆ ಇದೆ.

ಈ ಹಿಂದೆ ಕೇಂದ್ರ ಗೃಹ ಮಂತ್ರಿಗಳು ವಿಧಾನ ಸಭೆಗೂ ಚುನಾವಣೆಗಳನ್ನು ನಡೆಸಲಾಗುವುದು ಎಂದು ಜಮ್ಮು ಮತ್ತು ಕಾಶ್ಮೀರದ ಜನತೆಗೆ ಆಶ್ವಾಸನೆ ನೀಡಿದ್ದರು. ಪೂರ್ಣ ಚುನಾವಣಾ ಆಯೋಗ ರಾಜ್ಯಕ್ಕೆ ಭೇಟಿ ನೀಡಿದ್ದಾಗ ನಡೆದ ಸಭೆಯಲ್ಲಿ ಎಲ್ಲ ಬಿಜೆಪಿಯೇತರ ಪಕ್ಷಗಳು ಲೋಕ ಸಭೆಯೊಂದಿಗೇ ವಿಧಾನ ಸಭೆಗೂ ಚುನಾವಣೆಗಳನ್ನು ನಡೆಸಬೇಕು ಎಂದು ಮನವಿ ಮಾಡಿದ್ದವು. ಈ ಪ್ರಶ್ನೆಯನ್ನು ಚುನಾವಣಾ ಆಯೋಗ ಗಂಭೀರವಾಗಿ ಪರಿಗಣಿಸಬೇಕು, ಮತ್ತು ಲೋಕಸಭಾ ಚುನಾವಣೆಗಳೊಂದಿಗೇ ವಿಧಾನಸಭೆಗೂ ಚುನಾವಣೆಯ ಕಾರ್ಯಕ್ರಮವನ್ನು ಪ್ರಕಟಿಸಬೇಕು ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಆಗ್ರಹಿಸಿದೆ.

ರಾಜ್ಯದ ಒಳಗೆ ಮತ್ತು ಹೊರಗೆ ತಪ್ಪು ಸಂಕೇತಗಳನ್ನು ನೀಡುತ್ತದೆ–ತರಿಗಾಮಿ

ಲೋಕಸಭಾ ಚುನಾವಣೆಯೊಂದಿಗೆ ರಾಜ್ಯದ ವಿಧಾನಸಭೆಗೆ ಚುನಾವಣೆಗಳನ್ನು ನಡೆಸಲಾಗುವುದಿಲ್ಲ ಎಂದು ಚುನಾವಣಾ ಆಯೋಗ ಪ್ರಕಟಿಸಿರುವುದು ರಾಜ್ಯದ ಜನತೆಯಲ್ಲಿ ನಿರಾಸೆ ಉಂಟು ಮಾಡಿದೆ ಎಂದು ಹಿರಿಯ ಸಿಪಿಐ(ಎಂ) ಮುಖಂಡ ಮತ್ತು ಶಾಸಕರೂ ಆಗಿದ್ದ ಮಹಮ್ಮದ್ ಯುಸುಫ್ ತರಿಗಾಮಿ ಹೇಳಿದ್ದಾರೆ. ಇದು ರಾಜ್ಯದ ಒಳಗೂ ಮತ್ತು ಹೊರಗೂ ತಪ್ಪು ಸಂಕೇತಗಳನ್ನು ನೀಡುತ್ತದೆ ಎಂದು ಅವರು ಹೇಳಿದ್ದಾರೆ.

ನವದೆಹಲಿಯಲ್ಲಿ ತಮ್ಮ ಪತ್ರಿಕಾ ಸಮ್ಮೇಳನದಲ್ಲಿ ಮುಖ್ಯ ಚುನಾವಣಾ ಆಯುಕ್ತರು ಕಾಶ್ಮೀರದಲ್ಲಿನ ಇತ್ತೀಚಿನ ಹಿಂಸಾಚಾರದ ಘಟನೆಗಳು ಇದಕ್ಕೆ ಕಾರಣ ಎಂದು ಮತ್ತೆ–ಮತ್ತೆ ಹೇಳಿದರು. ಅದು ನಿಜವಾಗಿದ್ದರೆ, ಲೋಕಸಭಾ ಚುನಾವಣೆಗಳು ಹೇಗೆ ನಡೆಯುತ್ತವೆ ಎಂದು ಪ್ರಶ್ನಿಸಿರುವ ಅವರು, ಇತ್ತೀಚೆಗೆ ಜಮ್ಮು ಮತ್ತು ಕಾಶ್ಮೀರ ರಾಜ್ಯಪಾಲರು ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳನ್ನು "ಯಶಸ್ವಿಯಾಗಿ" ನಡೆಸಿದ್ದಕ್ಕೆ ಪ್ರಧಾನ ಮಂತ್ರಿ ಮೋದಿಯವರು ತನ್ನನ್ನು ಅಭಿನಂದಿಸಿದ್ದರು ಎಂದು ಹೇಳಿದ್ದರು, ಆ ಚುನಾವಣೆಗಳನ್ನು ನಡೆಸಲು ಸಾಧ್ಯವಾಗಿದ್ದರೆ, ವಿಧಾನಸಭಾ ಚುನಾವಣೆಗಳನ್ನು ಮುಂದಕ್ಕೆ ಹಾಕುವುದರ ಹಿಂದಿರುವ ತರ್ಕವಾದರೂ ಏನು ಎಂದು ಪ್ರಶ್ನಿಸಿದ್ದಾರೆ.

"ಆರ್ಥಿಕ ಅಂಕೆ–ಸಂಖ್ಯೆಗಳು ಗೊಂದಲದ ಗೂಡಾಗಿವೆ, ಒಂದು ದನಿಯೆತ್ತುವ ಅಗತ್ಯವಿದೆ"

ದೇಶದಲ್ಲಿ ಅಂಕಿ–ಅಂಶಗಳ ಋಜುತ್ವ ಮತ್ತೆ ನೆಲೆಗೊಳ್ಳಲಿ–108 ಅರ್ಥಶಾಸ್ತ್ರಜ್ಞರು, ಸಮಾಜ ವಿಜ್ಞಾನಿಗಳ ಮನವಿ

ಭಾರತದಲ್ಲಿ ಸುಖಕರವೆನಿಸದ ಮಾಹಿತಿಗಳನ್ನು ದಮನ ಮಾಡುವ ಪ್ರವೃತ್ತಿ ಕಾಣಿಸಿಕೊಂಡಿದೆ ಎನ್ನುತ್ತ ಅದನ್ನು ವಿರೋಧಿಸಿರುವ ಜಗತ್ತಿನ ಹಲವಾರು ಅರ್ಥಶಾಸ್ತ್ರಜ್ಞರು ಮತ್ತು ಸಮಾಜ ವಿಜ್ಞಾನಿಗಳು ಸಾರ್ವಜನಿಕ ಅಂಕೆ–ಸಂಖ್ಯೆಗಳ ಲಭ್ಯತೆ ಮತ್ತು ಋಜುತ್ವವನ್ನು ಮತ್ತೆ ಸ್ಥಾಪಿಸಬೇಕು, ಮತ್ತು ಸಾಂಖ್ಯಿಕ ಸಂಘಟನೆಗಳ ಸಾಂಸ್ಥಿಕ ಸ್ವಾತಂತ್ರ್ಯ ಮತ್ತೆ ನೆಲೆಗೊಳ್ಳಬೇಕು ಎಂದು ಒಂದು ಮನವಿಯ ಮೂಲಕ ಆಗ್ರಹಿಸಿದ್ದಾರೆ.

"ಯಾವುದೇ ಅಂಕೆ–ಸಂಖ್ಯೆ ಸರಕಾರದ ಸಾಧನೆಯ ಬಗ್ಗೆ ತುಸುವಾದರೂ ಸಂದೇಹ ಉಂಟುಮಾಡುವಂತಿದ್ದರೆ ಅದನ್ನು ಪ್ರಶ್ನಾರ್ಹ ವಿಧಾನಗಳಿಂದ ಪರಿಷ್ಕರಿಸುವಂತೆ, ದಮನ ಮಾಡುವಂತೆ ಕಾಣುತ್ತಿದೆ" ಎಂದು 108 ಅಧ್ಯಯನಕಾರರು ಸಹಿ ಹಾಕಿದ "ಆರ್ಥಿಕ ಅಂಕೆ–ಸಂಖ್ಯೆಗಳು ಗೊಂದಲದ ಗೂಡಾಗಿವೆ, ಒಂದು ದನಿಯೆತ್ತುವ ಅಗತ್ಯವಿದೆ" ಎಂಬ ಶಿರೋನಾಮೆಯ ಈ ಮನವಿಯಲ್ಲಿ ಖೇದ ವ್ಯಕ್ತಪಡಿಸಲಾಗಿದೆ.

ಜಗತ್ತಿನ ಕೆಲವು ಅತ್ಯಂತ ಗೌರವಾನ್ವಿತ ಅರ್ಥಶಾಸ್ತ್ರಜ್ಞರು, ಸಂಖ್ಯಾಶಾಸ್ತ್ರಜ್ಞರು, ಎಂ.ಐ.ಟಿ.ಯ ಪ್ರೊ. ಅಭಿಜಿತ್ ಬ್ಯಾನರ್ಜಿ, ಅಲಹಾಬಾದ್ ವಿಶ್ವವಿದ್ಯಾಲಯದ ಪ್ರೊ. ಜೀನ್ ಡ್ರೇಝ್, ಯು.ಸಿ.ಬರ್ಕ್‌ಲೀಯ ಪ್ರೊ. ಪ್ರಣಬ್ ಬರ್ಧನ್ ಮತ್ತಿತರರು ಈ ಮನವಿಯನ್ನು ಅನುಮೋದಿಸಿದ್ದಾರೆ.



ಎಡಪಂಥೀಯ ವಿಚಾರಧಾರೆಯ ಪ್ರಕಟಣೆಗಳನ್ನು ಹೊರತರುತ್ತಿರುವ ನವದೆಹಲಿಯ 'ಲೆಫ್ಟ್‌ವರ್ಡ್' ಪ್ರಕಟಣಾ ಸಂಸ್ಥೆಗೆ 20 ವರ್ಷಗಳು ತುಂಬಿದ ಸಂದರ್ಭದಲ್ಲಿ ಮಾರ್ಚ್ 15ರಂದು 'ಕಮ್ಯುನಿಸ್ಟ್ ಮ್ಯಾನಿಫೆಸ್ಟೋ'ದ ದ್ವಿಭಾಷಾ ಆವೃತ್ತಿಯನ್ನು ಬಿಡುಗಡೆ ಮಾಡಲಾಯಿತು. ಸುಭಾಷಿಣಿ ಅಲಿ ಇದರ ಅನುವಾದ ಮಾಡಿದ್ದಾರೆ. ಸೀತಾರಾಂ ಯೆಚುರಿ, ಪ್ರಕಾಶ ಕಾರಟ್, ಸುಭಾಷಿಣಿ ಅಲಿ ಮತ್ತು ಸುಧನ್ವ ದೇಶಪಾಂಡೆ ಈ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿದ್ದರು.

ಚುನಾವಣೆಗೆ ಸಿದ್ಧತೆಗಳು ನಡೆಯುತ್ತಿರುವಾಗ, ರಾಷ್ಟ್ರವಾದ ಮತ್ತು ಇತರ ಭಾವನಾತ್ಮಕ ವಿಷಯಗಳನ್ನು ಬಡಿದೆಬ್ಬಿಸುವುದರೊಂದಿಗೆ, ಉದ್ಯೋಗ ನಿರ್ಮಾಣಕ್ಕೆ ಸಂಬಂಧಪಟ್ಟ ಚರ್ಚೆಗಳನ್ನು, ಮಾಹಿತಿಗಳನ್ನು ಮಸುಕುಗೊಳಿಸುವ ಪ್ರಯತ್ನಗಳು ನಡೆಯುತ್ತಿರುವ ಸಂದರ್ಭದಲ್ಲಿ ಅರ್ಥಶಾಸ್ತ್ರಜ್ಞರು ಮತ್ತು ಸಮಾಜವಿಜ್ಞಾನಿಗಳ ಈ ಮನವಿ ಬಂದಿದೆ. ಇದು ಪ್ರಸಕ್ತ ಸರಕಾರಕ್ಕೆ ಮಾತ್ರವಲ್ಲ, ಮುಂದೆ ಬರುವ ಸರಕಾರಗಳಿಗೂ ಮಾಡುತ್ತಿರುವ ಮನವಿ ಎಂದು ಈ ಸಮಾಜವಿಜ್ಞಾನಿಗಳು ಹೇಳಿದ್ದಾರೆ. ಇತರ ವೃತ್ತಿಪರ ಅರ್ಥಶಾಸ್ತ್ರಜ್ಞರು, ಸಂಖ್ಯಾಶಾಸ್ತ್ರಜ್ಞರು ಮತ್ತು ಸ್ವತಂತ್ರ ಸಂಶೋಧಕರಿಗೂ, ತಮ್ಮ ರಾಜಕೀಯ, ಸೈದ್ಧಾಂತಿಕ ಒಲವುಗಳು ಏನೇ ಇರಲಿ, ಇಂತಹ ಪ್ರವೃತ್ತಿಯ ವಿರುದ್ಧ ದನಿಯೆತ್ತಬೇಕು ಎಂದೂ ಅವರು ವಿನಂತಿಸಿಕೊಂಡಿದ್ದಾರೆ.

ಜನವರಿ ಅಂತ್ಯದ ವೇಳೆಗೆ ರಾಷ್ಟ್ರೀಯ ಸಾಂಖ್ಯಿಕ ಆಯೋಗ(ಎನ್‌ಎಸ್‌ಸಿ)ಯ ಹಂಗಾಮಿ ಅಧ್ಯಕ್ಷರು ಉದ್ಯೋಗ ಮಾಹಿತಿಯನ್ನು ಬಿಡುಗಡೆ ಮಾಡುವಲ್ಲಿ ವಿಳಂಬವನ್ನು ಪ್ರತಿಭಟಿಸಿ ರಾಜೀನಾಮೆ ನೀಡಿದರು. ಈಗ ಮೂರನೇ ಬಾರಿಗೆ ಸರಕಾರ ಉದ್ಯೋಗ–ನಿರುದ್ಯೋಗದ ಅಂಕಿ–ಅಂಶಗಳ ಪ್ರಕಟಣೆಯನ್ನು ತಡೆಹಿಡಿದಿದೆ(ಪುಟ 12 ನೋಡಿ).

"ದಶಕಗಳ ಕಾಲ ಭಾರತದ ಸಂಖ್ಯಾಶಾಸ್ತ್ರ ವ್ಯವಸ್ಥೆ ಹಲವಾರು ಆರ್ಥಿಕ ಮತ್ತು ಸಾಮಾಜಿಕ ವಿಷಯಗಳ ಮೇಲೆ ಸಿದ್ಧಗೊಳಿಸಿದ ಮಾಹಿತಿಗಳ ಋಜುತ್ವಕ್ಕೆ ಒಂದು ಉನ್ನತ ಮಟ್ಟದ ಹೆಸರನ್ನು ಗಳಿಸಿಕೊಂಡಿದೆ. ಅದರ ಅಂದಾಜುಗಳ ಬಗ್ಗೆ ಕೆಲವೊಮ್ಮೆ ಟೀಕೆಗಳು ಬಂದಿರಬಹುದು, ಆದರೆ ಈ ಅಂದಾಜುಗಳನ್ನು ಮಾಡುವಲ್ಲಿ ಅಥವ ನಿರ್ಧಾರ ಕೈಗೊಳ್ಳುವಲ್ಲಿ ಎಂದೂ ರಾಜಕೀಯ ಹಸ್ತಕ್ಷೇಪದ ಆರೋಪಗಳು ಬಂದಿರಲಿಲ್ಲ" ಎಂದು ಈ ಮನವಿಯಲ್ಲಿ ಗಮನಿಸಲಾಗಿದೆ.

"ಆದರೆ, ಇತ್ತೀಚೆಗೆ, ಭಾರತೀಯ ಅಂಕೆ–ಸಂಖ್ಯೆಗಳು ಮತ್ತು ಅದಕ್ಕೆ ಸಂಬಂಧಪಟ್ಟ ಸಂಸ್ಥೆಗಳು ರಾಜಕೀಯ ಪರಿಗಣನೆಗಳ ಪ್ರಭಾವಕ್ಕೆ ಒಳಗಾಗಿವೆ, ಅವುಗಳ ಹತೋಟಿಗೂ ಒಳಗಾಗಿವೆ.. ಭಾರತದ ಸಾಂಖ್ಯಿಕ ಸಂಸ್ಥೆಗಳ ರಾಷ್ಟ್ರೀಯ ಮತ್ತು ಜಾಗತಿಕ ಖ್ಯಾತಿ ಪಣಕ್ಕೊಡ್ಡಲ್ಪಟ್ಟಿದೆ" ಎಂದು ಈ ಮನವಿ ಮುಂದುವರೆದು ಹೇಳಿದೆ. ಸಾಂಸ್ಥಿಕ ಸಮಗ್ರತೆಗೆ ಭಾರೀ ಹಾನಿಯುಂಟು ಮಾಡಿರುವ ಕೆಲವು ಕ್ರಮಗಳ ವಿವರವಾದ ಪಟ್ಟಿಯನ್ನೂ ಉದಾಹರಣೆಯಾಗಿ ಕೊಟ್ಟಿದೆ.

ಆರ್ಥಿಕ ಅಂಕೆ–ಸಂಖ್ಯೆಗಳು ಒಂದು ಸಾರ್ವಜನಿಕ ಒಳಿತಿನ ಸಂಗತಿ. ನಾಗರಿಕರು ಸರಕಾರದಿಂದ ಜವಾಬುದರಿಕೆಯನ್ನು ನಿರೀಕ್ಷಿಸುವ ಪ್ರಜಾಪ್ರಭುತ್ವಗಳಲ್ಲಿ ಧೋರಣೆಗಳನ್ನು ರೂಪಿಸಲು ಮತ್ತು ಸಾರ್ವಜನಿಕ 'ಸಂವಾದ– ಪರಿಚರ್ಚೆಗಳಿಗೆ ಇವು ಬಹುಮುಖ್ಯ. ಆದ್ದರಿಂದ ಮಾಹಿತಿಗಳ ಸಂಗ್ರಹ, ಅಂದಾಜುಗಳು, ಅವುಗಳನ್ನು ಸಮಯಕ್ಕೆ ಸರಿಯಾಗಿ ಪಸರಿಸುವುದು ಇವೆಲ್ಲ ಮಹತ್ವದ ಸಾರ್ವಜನಿಕ ಸೇವೆಗಳಾಗಿವೆ ಎಂದು ನೆನಪಿಸಿರುವುದರೊಂದಿಗೆ ಆರಂಭವಾಗಿರುವ ಈ ಮನವಿ ಒಂದು ಪ್ರಾಮಾಣಿಕ ಮತ್ತು ಪ್ರಜಾಸತ್ತಾತ್ಮಕ ಸಾರ್ವಜನಿಕ ಪರಿಚರ್ಚೆಗೆ, ಸಂವಾದಕ್ಕೆ ಮತ್ತು ಆರ್ಥಿಕ ಧೋರಣೆಗಳನ್ನು ರೂಪಿಸುವುದಕ್ಕೆ ಸಾಂಖ್ಯಿಕ ಋಜುತ್ವ ಅನಿವಾರ್ಯವಾಗುತ್ತದೆ ಎಂದು ಒತ್ತಿ ಹೇಳಿದೆ.

ಸಂಪಾದಕೀಯ

ನಮಗೆಂತಹ ಸರ್ಕಾರ ಕಾದಿದೆ?

ಜ್ಯೋತಿಷ್ಯಗಳ ಹಾವಳಿ ತುಸು ಕಮ್ಮಿ ಆಗಿದೆ. ಕೋಡಿಮಠದ ಶ್ರೀಗಳಿಗೆ ನೋಟಿಸ್ ಜಾರಿಯಾದ ನಂತರವಂತೂ ಭವಿಷ್ಯ ಹೇಳುವವರಿಗೆ ಭವಿಷ್ಯ ಇಲ್ಲದಂತಾಗಿದೆ. ಅದರಲ್ಲೂ ಕೋಡಿಮಠದ ಸ್ವಾಮೀಜಿಯವರಂತೂ ಹೇಳಿದೆಂದೂ ಸುಳ್ಳಾಗುವುದಿಲ್ಲ ಎನ್ನುತ್ತಾರೆ ಅವರ ಶಿಷ್ಯ ಗಣಗಳು. ಅವರ ಬಗ್ಗೆ ಆಕ್ಷೇಪ ನುಡಿಯಲು ಜನ ಭೀತಿ ಪಡುತ್ತಾರೆ. ಈ ಸಲದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ನರೇಂದ್ರ ಮೋದಿಯವರೇ ಪ್ರಧಾನಿಯಾಗಿ ಮುಂದುವರೆಯಲಿದ್ದಾರೆ ಎಂದು ಶ್ರೀಗಳು ಭವಿಷ್ಯ ನುಡಿದಿದ್ದಾರೆ. ಇದರಿಂದಾಗಿ ಸ್ವಾಮೀಜಿಯವರು ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಾರೆ ಎನ್ನಲಾಗುತ್ತಿದೆ. ಚುನಾವಣಾ ಆಯೋಗವು ಜಾರಿಗೊಳಿಸಿರುವ ಈ ನಿಯಮವು ಎಲ್ಲಾ ಚುನಾವಣಾ ಪೂರ್ವದ ಪುಟ ಗೋಸಿ ಸಮೀಕ್ಷೆಗಳಿಗೂ ಅನ್ವಯಿಸುತ್ತಿರಬೇಕು. ಯಾವುದೇ ವ್ಯಕ್ತಿ ಅಥವಾ ಪಕ್ಷದ ಪರವಾಗಿ ಹೇಳಿಕೆ ನೀಡಿ ಸಾರ್ವಜನಿಕರ ಮನಸ್ಸಿನ ಮೇಲೆ ಪರಿಣಾಮ ಬೀರುವುದು ಚುನಾವಣಾ ನೀತಿ ಸಂಹಿತೆಯ ಉಲ್ಲಂಘನೆಯಾಗಲಿದೆ.

ಆದರೆ 2019 ರ ಲೋಕಸಭಾ ಚುನಾವಣೆಯ ನಂತರ ಕೇಂದ್ರದಲ್ಲಿ ನಮಗೆ ಎಂಥ ಸರ್ಕಾರ ಬರಲಿದೆ ಎಂಬುದನ್ನು ತಿಳಿಯಲು ಯಾವ ಜ್ಯೋತಿಷಿಗಳ ಲೆಕ್ಕಚಾರವೂ ಬೇಕಾಗಿಲ್ಲ. ಅದು ಅಷ್ಟೊಂದು ಜಟಿಲವಾದ ಪ್ರಶ್ನೆಯೇ ಅಲ್ಲ. ಅದಕ್ಕಾಗಿ ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಿ ಅಪರಾಧ ಎಸಗುವ ಅಗತ್ಯವೂ ಇಲ್ಲ.

ಈ ಸಲದ ಲೋಕಸಭಾ ಚುನಾವಣೆಯ ನಂತರ ಅಧಿಕಾರಕ್ಕೆ ಬರುವ ಸರ್ಕಾರ ರೈತರು ಕಷ್ಟ ಪಟ್ಟು ಬೆಳೆಯುವ ಫಸಲಿಗೆ ನ್ಯಾಯವಾದ ಬೆಲೆ ಕೊಡಿಸುವ ಸರ್ಕಾರ ಆಗಿರುವ ಸಾಧ್ಯತೆ ಇಲ್ಲ. ಗ್ರಾಮೀಣ ಬಡವರಿಗೆ, ಕೂಲಿಕಾರರಿಗೆ ಅವರವರ ಗ್ರಾಮಗಳಲ್ಲಿ ವರ್ಷವಿಡೀ ಕೆಲಸ ಒದಗಿಸಿ ಜೀವನಾವಶ್ಯಕ ಗರಿಷ್ಠ ವೇತನ ನೀಡುವ ಸರಕಾರವಂತೂ ಬರುವುದಿಲ್ಲ. ದೇಶದ ಸಂವಿಧಾನವನ್ನು ತಿದ್ದುಪಡಿ ಮಾಡಿ ಉದ್ಯೋಗವನ್ನು ಭಾರತದ ಪ್ರಜೆಗಳ ಮೂಲಭೂತ ಹಕ್ಕುಗಳಲ್ಲಿ ಒಂದೆಂದು ಘೋಷಣೆ ಮಾಡುವ ಸರಕಾರವಂತೂ ಬರುವುದಿಲ್ಲ. ಸಾರ್ವಜನಿಕ ರಂಗದ ಕೈಗಾರಿಕೆಗಳನ್ನು ಬಲಪಡಿಸಿ, ಅವುಗಳನ್ನು ಲಾಭದಾಯಕವಾಗಿ ನಡೆಸಿ ಉದ್ಯೋಗದ ಅವಕಾಶಗಳನ್ನು ಯೋಜನಾ ಬದ್ಧವಾಗಿ ಹೆಚ್ಚಿಸುವ ಸರ್ಕಾರ ಈ ಚುನಾವಣೆಯ ನಂತರವಂತೂ ರಚನೆಯಾಗುವ ಸಾಧ್ಯತೆ ಇಲ್ಲ. ಬೃಹತ್ ಬಂಡವಾಳಗಾರರಾಗಿ ಬೆಳೆದಿರುವ ಈ ದೇಶದ ಪಾಳೇಗಾರಿ ಭೂಮಾಲಕರ ವಶದಲ್ಲಿರುವ ಲೆಕ್ಕವಿಲ್ಲದ ಭೂಮಿಯನ್ನು ಕ್ರಾಂತಿಕಾರಿ ಭೂ ಸುಧಾರಣಾ ಕ್ರಮಗಳ ಮೂಲಕ ಈ ದೇಶದ ಭೂರಹಿತ ದಲಿತ, ಆದಿವಾಸಿ ಕುಟುಂಬಗಳಿಗೆ ವಿತರಣೆ ಮಾಡುವ ಇಚ್ಛಾಶಕ್ತಿಯುಳ್ಳ ಸರ್ಕಾರ ಈ ಚುನಾವಣೆಯ ನಂತರ ನಾವು ನಿರೀಕ್ಷಿಸಬಹುದೆ? ಇಲ್ಲ. ಹಾಗಾದರೆ ಮೇ 23ರ ನಂತರ ಈ ದೇಶದಲ್ಲಿ ಎಂತಹ ಸರ್ಕಾರ ಬರಲಿದೆ ಎಂದು ಹೇಳಲು ಭವಿಷ್ಯ ಹೇಳುವವರು ಬೇಕಾ?

ಮುಂದಿನ ಸರಕಾರ ಈ ದೇಶವನ್ನು ಲೂಟಿಕೋರ ಕಾರ್ಪೋರೇಟ್ ಕಂಪನಿಗಳ ಗುಲಾಮಗಿರಿಯಲ್ಲಿ ಮುಂದುವರಿಸುವ ಸರ್ಕಾರವಾಗಲಿದೆ. ಅದು ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವೇ ಆಗಲಿ, ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವೇ ಆಗಲಿ ಅಥವಾ ಯಾವುದಾದರೂ ಹೊಸ ಹೆಸರು ಇಟ್ಟುಕೊಂಡು ಬರಬಹುದಾದ ಪಕ್ಷಗಳ ಗುಂಪಾಗಲಿ, ಅದು 1990 ರದಶಕದಲ್ಲಿ ಆರಂಭಗೊಂಡ ಉದಾರೀಕರಣ, ಖಾಸಗೀಕರಣ ನೀತಿಗಳ ಮುಂದುವರಿಕೆಗೆ ಬದ್ಧವಾದ ಸರ್ಕಾರ ಆಗಿರಲಿದೆ. ಈ ಬಂಡವಾಳಶಾಹಿ–ಭೂಮಾಲಕ ರಾಜಕೀಯ ಪಕ್ಷಗಳ ನಡುವೆ, ಅಥವಾ ಪಕ್ಷಗಳ ಒಕ್ಕೂಟಗಳ ನಡುವೆ ಮೇಲ್ನೋಟಕ್ಕೆ ಭಿನ್ನತೆಗಳು ಕಂಡರೂ ಆಳದಲ್ಲಿ ಅವುಗಳ ಧೋರಣೆಗಳು ಒಂದೇ ಆಗಿವೆ. ಕಮ್ಯುನಿಸ್ಟ್ ಪಕ್ಷಗಳ ನೀತಿಗಳು ಬಿನ್ನವಾಗಿವೆ. ಉದಾರೀಕರಣ, ಖಾಸಗೀಕರಣದ ನೀತಿಗಳನ್ನು ಕಮ್ಯುನಿಸ್ಟ್ ಪಕ್ಷಗಳು ನಿರಂತರವಾಗಿ ವಿರೋಧಿಸುತ್ತಾ ಬಂದಿವೆ. ಆದರೆ ದೇಶದ ಮತದಾರರು ಕಮ್ಯುನಿಸ್ಟ್ ಪಕ್ಷಗಳು ದೇಶಕ್ಕೆ ಒಂದು ನೈಜ ಪರ್ಯಾಯವನ್ನು ಒದಗಿಸಬಲ್ಲ ಪಕ್ಷಗಳೆಂದು ಗುರುತಿಸುವುದು ಸಾಧ್ಯವಾಗಿಲ್ಲ. ಆದ್ದರಿಂದ ಕಮ್ಯುನಿಸ್ಟ್ ಪಕ್ಷಗಳ ಒಂದು ಪರ್ಯಾಯ ಸರ್ಕಾರ ಅಥವಾ ಅವುಗಳ ನೇತೃತ್ವದ ಒಂದು ಬದಲಿ ಸರ್ಕಾರ ಸದ್ಯದ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ಆದ್ದರಿಂದ ಮೇ 23ರ ನಂತರ ಎಂತಹ ಸರ್ಕಾರ ಬರಲಿದೆ ಎಂದು ಹೇಳಲು ಭವಿಷ್ಯ ಹೇಳುವವರು ಬೇಕಾಗಿಲ್ಲ.

ಆದರೆ ಈ ಸಲದ ಚುನಾವಣೆಯ ಗರ್ಭದಲ್ಲಿ ಕೆಲವು ಸಕಾರಾತ್ಮಕವಾದ ಸಾಧ್ಯತೆಗಳಿವೆ. ಒಂದು : ಈ ಚುನಾವಣೆಯಲ್ಲಿ ಕೇರಳ, ಪಶ್ಚಿಮ ಬಂಗಾಳ ಮತ್ತು ಕೆಲವು ರಾಜ್ಯಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳ ಹೆಚ್ಚು ಅಭ್ಯರ್ಥಿಗಳನ್ನು ಗೆಲ್ಲಿಸಲು ಇದೊಂದು ಅವಕಾಶವಾಗಬಹುದು. ಎರಡು : ಕೇಂದ್ರದಲ್ಲಿ ಒಂದು ಸೆಕ್ಯುಲರ್ (ಧರ್ಮ ನಿರಪೇಕ್ಷ) ಸರ್ಕಾರ ಅಧಿಕಾರಕ್ಕೆ ಬರುವಂತೆ ಮಾಡಲು ಸಾಧ್ಯವಾಗಬಹುದು.

ಮುಂದಿನ ಅವಧಿಯು ತೀವ್ರ ಹೋರಾಟಗಳ ಅವಧಿಯಾಗಲಿದೆ. ಹೋರಾಟ ಪರಿಣಾಮಕಾರಿಯಾಗಬೇಕಾದರೆ. ಜನತೆಯ ಐಕ್ಯತೆ, ದುಡಿಯುವ ಜನರು ಒಗ್ಗಟ್ಟು ಬಹಳ ಮುಖ್ಯ. ನಮ್ಮನ್ನು ಧರ್ಮ, ಜಾತಿ, ಭಾಷೆಗಳ ಹೆಸರಿನಲ್ಲಿ ಸಾಕಷ್ಟು ಛಿದ್ರಗೊಳಿಸಲಾಗಿದೆ. ಕೇಂದ್ರದಲ್ಲಿ ಒಂದು ಸೆಕ್ಯುಲಾರ್ ಸರ್ಕಾರ ಬಂದರೆ ಜನತೆಯ ಐಕ್ಯತೆಯನ್ನು ಬಲಪಡಿಸಲು ಸುಲಭವಾಗುತ್ತದೆ. ಆದ್ದರಿಂದ ಮೂರನೆಯದಾಗಿ ಮತ್ತು ಅಷ್ಟೇ ಮುಖ್ಯವಾಗಿ ಕೋಮುವಾದಿ ಫ್ಯಾಸಿಸ್ಟ್ ಶಕ್ತಿಗಳನ್ನು ಅಧಿಕಾರದಿಂದ ಕೆಳಗಿಳಿಸಿ ಹಿಮ್ಮೆಟ್ಟಿಸುವುದು ಆಗಬೇಕಾಗಿದೆ. ಆದ್ದರಿಂದ ಈ ಚುನಾವಣೆ ಚಾರಿತ್ರಿಕವಾಗಲಿದೆ.

ಸಂಘಟನೆ ಬಲಪಡಿಸಲು ಮಹಿಳಾ ದಿನದ ಕರೆ



ಮಹಿಳೆಯರಿಗೆ ರಾಜಕೀಯ ಅಧಿಕಾರ, ಆರ್ಥಿಕ ಸಬಲೀಕರಣ ಹಾಗೂ ಸಾಮಾಜಿಕ ತಾರತಮ್ಯದಿಂದ ಬಿಡುಗಡೆ ದೊರೆಯಬೇಕಿದ್ದು, ಈ ನಿಟ್ಟಿನಲ್ಲಿ ಮಹಿಳಾ ಸಂಘಟನೆಯನ್ನು ಬಲಪಡಿಸಿ ಹೋರಾಟಗಳನ್ನು ಕಟ್ಟುವುದು ಮಹಿಳಾ ದಿನದ ಕರೆಯಾಗಿದೆ ಎಂಬುದಾಗಿ ಸಮುದಾಯ ಸಾಂಸ್ಕೃತಿಕ ಸಂಘಟನೆಯ ಮುಖಂಡರಾದ ವಾಸುದೇವ ಉಚ್ಚಿಲ ಅವರು ಹೇಳಿದರು. ಅವರು ಇಂದು (ಮಾರ್ಚ್ 9 ರಂದು) ಮಂಗಳೂರಿನ ಬೋಳಾರದ ಕಾರ್ಮಿಕ ಸಂಘದ ಸಭಾಂಗಣದಲ್ಲಿ ದ.ಕ. ಜಿಲ್ಲಾ ದುಡಿಯುವ ಮಹಿಳೆಯರ ಸಮನ್ವಯ ಸಮಿತಿ ಮತ್ತು ಜನವಾದಿ ಮಹಿಳಾ ಸಂಘದ ಜಿಲ್ಲಾ ಸಮಿತಿ ಜಂಟಿಯಾಗಿ ಏರ್ಪಡಿಸಿದ್ದ ವಿಶ್ವ ಮಹಿಳಾ ದಿನದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ನೂರು ವರ್ಷಗಳಿಗೂ ಹಿಂದೆ ದುಡಿಯುವ ಮಹಿಳೆಯರ ವೇತನ, ದುಡಿಮೆಯ ಕಾಲಾವಧಿಯಲ್ಲಿ ಇದ್ದ ತಾರತಮ್ಯದ ವಿರುದ್ಧ ಮಹಿಳೆಯ ಹೋರಾಟವು ವಿಶ್ವ ಮಹಿಳಾ ಶದಿನದ ಆಚರಣೆಗೆ ಎಡೆಮಾಡಿತು. ಇಂದಿನ ಕಾಲಘಟ್ಟದಲ್ಲಿ ಮಹಿಳೆಯರಿಗೆ ತೋರುವ ಸಾಮಾಜಿಕ ತಾರತಮ್ಯ, ಆರಾಧನಾ ಹಕ್ಕಿನ ವಂಚನೆ, ಅತ್ಯಾಚಾರಗಳ ವಿರುದ್ಧವಾಗಿಯೂ ಮಹಿಳಾ ಚಳುವಳಿ ಸಾಗಿದೆ. ಭಾರತದ ಶಾಸನ ಸಭೆಗಳಲ್ಲಿ ಮಹಿಳೆಯರಿಗೆ ಮೂರನೇ ಒಂದು ಸ್ಥಾನಗಳ ಮೀಸಲಾತಿಗಾಗಿ ಮಂಡಿಸಲಾಗಿರುವ ಮಸೂದೆ. 23 ವರ್ಷಗಳಲ್ಲಿ ಬೇರೆ ಬೇರೆ ಪಕ್ಷಗಳು ಕೇಂದ್ರದಲ್ಲಿ ಅಧಿಕಾರದಲ್ಲಿ ಬಂದಾಗಲೂ ಕಾನೂನು ಆಗದೆ ಇರುವುದು ಖೇದಕರ. ಮಹಿಳೆಯರು ರಾಜಕೀಯ ಅಧಿಕಾರದಲ್ಲಿ ಸಮಾನ ಪಾಲು ಪಡೆಯುವಲ್ಲಿ ಮಹಿಳಾ ಮೀಸಲಾತಿಯನ್ನು ಸಾಧಿಸುವುದು ಅತ್ಯಂತ ಅಗತ್ಯವಾಗಿದೆ ಎಂದವರು ಹೇಳಿದರು.

ಸಿಐಟಿಯು ಕರ್ನಾಟಕ ರಾಜ್ಯ ಸಮಿತಿ ಉಪಾಧ್ಯಕ್ಷರಾದ ವಸಂತ ಆಚಾರಿ ಮಾತನಾಡಿ, ಇಂದು ಅನೇಕ ಸಂಘ ಸಂಸ್ಥೆ ಸರಕಾರ ಹಾಗೂ ಸ್ಥಳೀಯ ಸಂಸ್ಥೆಗಳು ಮಹಿಳಾ ದಿನವನ್ನು ಆಚರಿಸುತ್ತಿದ್ದರೂ, ಮಹಿಳೆಯರಿಗೆ ಇನ್ನೂ ದಕ್ಕದಿರುವ ಆರ್ಥಿಕ ಸವಲತ್ತು ಹಾಗೂ ಸಾಮಾಜಿಕ ರಾಜಕೀಯ ಸ್ಥಾನಮಾನಗಳ ಬಗ್ಗೆ ಪ್ರಸ್ತಾಪಿಸದೆ, ಮಹಿಳೆಯರನ್ನು ಕೇವಲ ವೈಭವೀಕರಿಸುವುದಕ್ಕೆ ಸೀಮಿತವಾಗಿದೆ. ಮಹಿಳೆಯರ ಹೋರಾಟಗಳು ನೂರು ವರ್ಷಗಳ ಹಿಂದೆ ಆರಂಭವಾದುದು ಗಾರ್ಮೆಂಟ್ ಉದ್ಯಮದ ಮಹಿಳಾ ಕಾರ್ಮಿಕರ ಆರ್ಥಿಕ ಬೇಡಿಕೆಗಳಿಗಾಗಿ. ಇವತ್ತಿಗೂ ಮಹಿಳೆಯರಿಗೆ ಪುರುಷರ ಸಮಾನವಾಗಿ ವೇತನ ನೀಡುತ್ತಿಲ್ಲ. ಕೆಲಸದ ಖಾಯಮಾತಿ ಇರುವುದಿಲ್ಲ. ಕಾನೂನು ಮಂಜೂರು ಮಾಡಿದ ಸವಲತ್ತುಗಳನ್ನು ನೀಡುತ್ತಿಲ್ಲ. ಈ ನಿಟ್ಟಿನಲ್ಲಿ ದುಡಿಯುವ ಮಹಿಳೆಯರು ಒಗ್ಗಟ್ಟಾಗಿ ತಮ್ಮ ಹಕ್ಕುಗಳನ್ನು ರಕ್ಷಿಸಲು ಹೋರಾಡಬೇಕಿದೆ ಎಂದು ಅವರು ಕರೆ ನೀಡಿದರು.

ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಮಾತನಾಡಿ, ಮಹಿಳೆಯರನ್ನು ಇಂದಿಗೂ ಭೋಗದ ವಸ್ತುವಾಗಿ ಮಾಧ್ಯಮಗಳಲ್ಲಿ ಕಾಣಿಸಲಾಗುತ್ತಿದೆ. ಅವರ ಸ್ವತಂತ್ರ ಅಸ್ತಿತ್ವವನ್ನೇ ಗೌರವಿಸಲಾಗುತ್ತಿಲ್ಲ. ಮಹಿಳೆಯ ದೈಹಿಕ ಪ್ರಕ್ರಿಯೆಗಳು ಪ್ರಕೃತಿದತ್ತವಾದುದು. ಅದರ ಆಧಾರದಲ್ಲಿ ಶಬರಿಮಲೆಯ ದೇವಸ್ಥಾನಕ್ಕೆ ಪ್ರವೇಶ ನಿಷೇಧ ಮಾಡಿದ್ದ ಕ್ರಮವನ್ನು ಸುಪ್ರೀಂಕೋರ್ಟ್ ರದ್ದು ಮಾಡಿದರೂ, ಕೋಮುವಾದಿ ಶಕ್ತಿಗಳು ಅದನ್ನು ಧಿಕ್ಕರಿಸುವ ಪ್ರಯತ್ನವನ್ನು ಕೇರಳದಲ್ಲಿ ಮಾಡಿದರು. ಆದರೆ ಕೇರಳದ 50 ಲಕ್ಷ ಮಹಿಳೆಯರು ಅದನ್ನು ಪ್ರತಿಭಟಿಸಿ 'ವನಿತಾಗೋಡೆ' ಯನ್ನು ರಚಿಸಿ ಕೋಮುವಾದಿಗಳಿಗೆ ಸವಾಲು ಹಾಕಿದ್ದಾರೆ ಎಂದು ವಿವರಿಸಿದರು. ಕೋಮುವಾದವೇ ಇರಲಿ, ಯುದ್ಧವೇ ಇರಲಿ, ಜಾತಿಯತೆಯೇ ಇರಲಿ ಅದರ ಮೊದಲ ಬಲಿಪಶು ಮಹಿಳೆ ಎಂಬುದಾಗಿ ಎಚ್ಚರಿಸಿದರು.

ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ದ.ಕ.ಸಂಚಾಲಕಿ ಪದ್ಮಾವತಿ ಶೆಟ್ಟಿ ಸಭೆಯ ಅಧ್ಯಕ್ಷತೆ ವಹಿಸಿದರು. ಜನವಾದಿ ಮಹಿಳ ಸಂಘದ ದ.ಕ.ಜಿಲ್ಲಾಧ್ಯಕ್ಷೆ ಜಯಂತಿ ಬಿ.ಶೆಟ್ಟಿ, ಕಾರ್ಯದರ್ಶಿ ರಾಧಾ ಮೂಡಬಿದ್ರೆ ವೇದಿಕೆಯ ಮೇಲಿದ್ದರು. ವಿಲಾಸಿನಿ ಧನ್ಯವಾದ ಸಲ್ಲಿಸಿದರು.

ಜಯಂತಿ ಬಿ.ಶೆಟ್ಟಿ

ಏಜೆನ್ಸಿದಾರರ ಮತ್ತು ಚಂದಾದಾರರ ಗಮನಕ್ಕೆ

ಏಜೆನ್ಸಿದಾರರಿಂದ ದೊಡ್ಡ ಮೊತ್ತದ ಪತ್ರಿಕೆಯ ಹಣ ಬಾಕಿಯಿದ್ದು ಪತ್ರಿಕೆಯನ್ನು ಹೊರ ತರುವುದು ಅಸಾಧ್ಯವಾಗಿದೆ. ನೀವು ಕೊಡಬೇಕಾದ ಬಾಕಿ ಹಣವನ್ನು ಇಂದಿನಿಂದ ಎರಡು ವಾರಗಳ ಒಳಗಾಗಿ ನೀವು ಬಾಕಿಯನ್ನು ಪಾವತಿ ಮಾಡದಿದ್ದರೆ ಪ್ರತಿಕೆಯನ್ನು ಮುದ್ರಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ನಿಮ್ಮಿಂದ ಬರಬೇಕಾದ ಬಾಕಿ ಹಣದಲ್ಲಿ ಅರ್ಧದಷ್ಟನ್ನಾದರೂ ಕೂಡಲೇ ಕಳುಹಿಸಬೇಕೆಂದು ಕೋರಲಾಗಿದೆ.

ಅನೇಕ ನಮ್ಮ ವಾರ್ಷಿಕ ಚಂದಾದಾರರ ಚಂದಾ ಅವಧಿ ಮುಗಿದಿದ್ದು ಅವರು ಕೂಡಲೇ ವಾರ್ಷಿಕ ಚಂದಾ ಪಾವತಿ ಮಾಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಕಾರ್ಮಿಕರಾದ ನಾವು, ರೈತಾಪಿ ಜನರು ಮತ್ತು ದುಡಿಯುವ ಜನತೆಯೊಂದಿಗೆ ಸೇರಿ ನಮ್ಮ ದೇಶದ ಸಂಪತ್ತನ್ನು ಸೃಷ್ಟಿಸುತ್ತಿದ್ದೇವೆ. ರಾಷ್ಟ್ರದ ಆರ್ಥಿಕ ಬೆಳವಣಿಗೆಗೆ ಕೊಡುಗೆ ನೀಡುತ್ತಿರುವವರು ನಾವೇ. ಆದಾಗ್ಯೂ ಸಹಾ ಕೇಂದ್ರ ಸರ್ಕಾರವು ನಮ್ಮ ಜ್ವಲಂತ ಪ್ರಶ್ನೆಗಳು, ಗಂಭೀರ ಸಮಸ್ಯೆಗಳು ಮತ್ತು ತುರ್ತಿನ ಬೇಡಿಕೆಗಳನ್ನು ನಿರ್ಲಕ್ಷಿಸುತ್ತಾ ಬಂದಿದೆ.

ಕಳೆದ ಹಲವು ವರ್ಷಗಳಿಂದ ಜಂಟಿ ಕಾರ್ಮಿಕ ಚಳುವಳಿಯು ಕಾರ್ಮಿಕ ವರ್ಗವನ್ನು ಬಾದಿಸುತ್ತಿರುವ ವಿಚಾರಗಳನ್ನು ನಿರಂತರವಾಗಿ ಎತ್ತುತ್ತಾ ಬಂದಿದೆ. ವಿವಿಧ ರೀತಿಯ ನಮ್ಮ ಪ್ರಯತ್ನಗಳಲ್ಲಿ ಒಂದು ಇತ್ತೀಚಿನ 2 ದಿನಗಳ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ. ದುಡಿಯುವ ಜನತೆಯ ವಿವಿಧ ವಿಭಾಗಗಳು ಸಾರ್ವತ್ರಿಕ ಮುಷ್ಕರಕ್ಕೆ ವ್ಯಾಪಕ ಬೆಂಬಲ ನೀಡಿವೆ. ಆ ಮೂಲಕ ಸರ್ಕಾರದ ಗಮನ ಸೆಳೆಯುವ ನಮ್ಮ ಪ್ರಯತ್ನಕ್ಕೂ ಸರ್ಕಾರ ಸ್ಪಂದಿಸಿಲ್ಲ.

ಇಂದು ರಾಷ್ಟ್ರವು ಆಳವಾದ ಬಿಕ್ಕಟ್ಟಿಗೆ ಸಿಲುಕಿದೆ. ದುಡಿಯುವ ಜನತೆ, ರೈತರು, ಕೂಲಿಕಾರರು ಮುಂತಾದ ಎಲ್ಲರ ದೈನಂದಿನ ಜೀವನದ ಎಲ್ಲಾ ಅಂಶಗಳು ಬಿಕ್ಕಟ್ಟಿಗೆ ಒಳಪಟ್ಟಿವೆ. ಕಷ್ಟ ಪಟ್ಟುಗಳಿಸಿರುವ ಕಾರ್ಮಿಕರ ಹಕ್ಕುಗಳು ಮತ್ತು ಸಂಘ ಕಟ್ಟುವ ಹಕ್ಕುಗಳು ತೀವ್ರ ದಾಳಿಗೆ ಒಳಪಟ್ಟಿವೆ. ಕಾರ್ಷಿಕ ಬಿಕ್ಕಟ್ಟು ಮತ್ತು ಗ್ರಾಮೀಣ ಸಂಕಷ್ಟವು ಅನಿಯಂತ್ರಿತವಾಗಿ ಮುಂದುವರಿದಿದೆ. ಸಾವಿರಾರು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಕೆಲಸ ಪಡೆಯದ ಕೃಷಿ ಕೂಲಿಕಾರರು ಮತ್ತು ಬಡ ರೈತರು ದೊಡ್ಡ ಸಂಖ್ಯೆಯಲ್ಲಿ ನಗರಗಳಿಗೆ ವಲಸೆ ಬರುತ್ತಿದ್ದಾರೆ. ಆ ಮೂಲಕ ಯಾವುದೇ ಸಾಮಾಜಿಕ ಭದ್ರತೆಯಿಲ್ಲದೆ ಕಡಿಮೆ ಕೂಲಿಯ ಕೆಲಸಗಳಿಗಾಗಿ ಅಸಂಘಟಿತ ಕಾರ್ಮಿಕರೊಂದಿಗೆ ಪೈಪೋಟಿಗೆ ಇಳಿದಿದ್ದಾರೆ.

ವಸತಿ, ಸಾರಿಗೆ, ವಿದ್ಯುತ್, ಶಿಕ್ಷಣ ಮತ್ತು ಆರೋಗ್ಯ ಮುಂತಾದ ಎಲ್ಲಾ ಅಗತ್ಯ ವಸ್ತುಗಳ ಬೆಲೆಗಳು ಏರುತ್ತಿವೆ. ಆದರೆ ಕಾರ್ಮಿಕರ ವೇತನಗಳು ಸ್ಥಗಿತಗೊಂಡಿವೆ. ಹಲವು ವಲಯಗಳಲ್ಲಿ ಮತ್ತು ಬಹುತೇಕ ಗುತ್ತಿಗೆ, ತಾತ್ಕಾಲಿಕ ಮತ್ತು ದಿನಗೂಲಿ ಕಾರ್ಮಿಕರು ಮತ್ತು ಅಸಂಘಟಿತ ಕಾರ್ಮಿಕರ ನೈಜ ವೇತನ ಬೆಲೆ ಏರಿಕೆಯಿಂದಾಗಿ ಇಳಿಕೆಯಾಗಿದೆ.

15ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಸೂತ್ರಗಳು ಹಾಗು ರಪ್ತಕೋಸ್ ಮತ್ತು ಬ್ರೆಟ್ ಪ್ರಕರಣದಲ್ಲಿನ ಸುಪ್ರೀಂ ಕೋರ್ಟ್ ತೀರ್ಪಿನ ಆಧಾರದಲ್ಲಿ ಭಾರತೀಯ ಕಾರ್ಮಿಕ ಸಮ್ಮೇಳನದ ಸರ್ವಸಮ್ಮತ ಶಿಫಾರಸ್ಸನ್ನು ಜಾರಿಗೊಳಿಸಿ ಕನಿಷ್ಠ ವೇತನವನ್ನು ಅಧಿಸೂಚಿಸಲು ಪಟ್ಟು ಬಿಡದೆ ನಿರಾಕರಿಸುತ್ತಿದೆ.

ಖಾಯಂ ಕಾರ್ಮಿಕರಂತೆ ಸಮಾನ ಕೆಲಸ ಮಾಡುತ್ತಿರುವ ಗುತ್ತಿಗೆ, ತಾತ್ಕಾಲಿಕ ಕಾರ್ಮಿಕರಿಗೆ ಸಮಾನ ವೇತನ ಮತ್ತು ಸೌಲಭ್ಯವನ್ನು ನೀಡಬೇಕೆಂಬ ಸುಪ್ರೀಂ ಕೋರ್ಟ್ ತೀರ್ಪು ಮತ್ತು ಭಾರತೀಯ ಕಾರ್ಮಿಕ ಸಮ್ಮೇಳನದ ಸರ್ವ ಸಮ್ಮತ ಶಿಫಾರಸ್ಸನ್ನು ಜಾರಿ ಮಾಡುತ್ತಿಲ್ಲ.

ಭಾರತೀಯ ಕಾರ್ಮಿಕ ಸಮ್ಮೇಳನದ ಸರ್ವ ಸಮ್ಮತ ಶಿಫಾರಸ್ಸಿದ್ದರೂ ಸಹಾ ಬಹುತೇಕ ಮಹಿಳೆಯರೆ ಆದ ಸುಮಾರು ಒಂದು ಕೋಟಿ ವಿವಿಧ ಸ್ಕೀಂ ನೌಕರರನ್ನು ನೌಕರರೆಂದು ಪರಿಗಣಿಸಲು ಸರ್ಕಾರ ನಿರಾಕರಿಸುತ್ತಿದೆ. ಗೌರವಧನ / ಪ್ರೋತ್ಸಾಹಧನ ಮುಂತಾದ ಹೆಸರಿನಲ್ಲಿ ಅತ್ಯಂತ ಕಡಿಮೆಯಾದ ನಾಚಿಕೆಗೇಡಿನ ಭತ್ಯೆಯನ್ನು ಅವರಿಗೆ ನೀಡುತ್ತಿದೆ. ಕಾರ್ಮಿಕ ಶಕ್ತಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ ನಿರಂತರವಾಗಿ ಇಳಿಮುಖವಾಗುತ್ತಿದೆ. ಮಹಿಳಾ ಕಾರ್ಮಿಕರ ವಿರುದ್ಧ ತಾರತಮ್ಯ ಮುಂದುವರಿದಿದೆ. ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ಹೆಚ್ಚುತ್ತಿದೆ.

ನಿರುದ್ಯೋಗವು ಕೇವಲ ಯುವಜನತೆಗೆ ಮಾತ್ರವಲ್ಲದೆ, ಕೈಗಾರಿಕೆಗಳ ಮುಚ್ಚುವಿಕೆ ಮತ್ತು ಸ್ಥಗಿತಗಳಿಂದಾಗಿ ನೂರಾರು ಸಾವಿರ ಕಾರ್ಮಿಕರಿಗೂ ಗಂಭೀರ ಕಳಕಳಿಯ ವಿಚಾರವಾಗಿದೆ. ಬಹುತೇಕ ಹೆಚ್ಚು ಕಾರ್ಮಿಕರು ಇರುವ ವಲಯಗಳಲ್ಲಿ ಉದ್ಯೋಗ ಸೃಷ್ಟಿಯು ವಾಸ್ತವಿಕವಾಗಿ ನಕಾರಾತ್ಮಕವಾಗಿದೆ.

'ವ್ಯವಹಾರಕ್ಕೆ ಪೂರಕವಾಗುವ ಸೂಚ್ಯಾಂಕ'ದ ಏಣಿಯಲ್ಲಿ ಮೇಲಕ್ಕೆ ಏರುವ ತನ್ನ ಗುರಿ ತಲುಪುವ ಸಲುವಾಗಿ ಕಾರ್ಮಿಕರು ಮತ್ತವರ ಕಾರ್ಮಿಕ ಸಂಘಗಳ ಬಲಿಷ್ಠ ವಿರೋಧದ ನಡುವೆಯು ಸರ್ಕಾರ ಕಾರ್ಮಿಕರಿಗೆ ತಿದ್ದುಪಡಿ ಮಾಡುವ ತನ್ನ ಕಾರ್ಯಕ್ರಮವನ್ನು ಆಕ್ರಮಣಕಾರಿಯಾಗಿ ಮುಂದೊತ್ತುತ್ತಿದೆ. 44 ಕೇಂದ್ರ ಕಾರ್ಮಿಕ ಕಾನೂನುಗಳನ್ನು ತೆಗೆದು ಹಾಕಿ 4 ಕಾರ್ಮಿಕ ಸಂಹಿತೆಗಳಲ್ಲಿ ವಿಲೀನಗೊಳಿಸಲು ಮುಂದಾಗಿದೆ. ದಶಕಗಳ ಹೋರಾಟ ಮತ್ತು ತ್ಯಾಗಗಳಿಂದ ಕಾರ್ಮಿಕರು ಗಳಿಸಿರುವ ಅಲ್ಪಸ್ವಲ್ಪ ಹಕ್ಕುಗಳು ಮತ್ತು ಸಾಮಾಜಿಕ ಭದ್ರತೆಗಳನ್ನು ಕಾರ್ಮಿಕರಿಗೆ ನಿರಾಕರಿಸಿ ಕಾರ್ಮಿಕರನ್ನು ವಾಸ್ತವಿಕವಾಗಿ ಮಾಲೀಕರ ಗುಲಾಮರನ್ನಾಗಿಸುವ ಉದ್ದೇಶ ಇದರದಾಗಿದೆ.

ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿ ಮಾಡುವ ಮುನ್ನವೆ 'ಬಳಸಿ ಬಿಸಾಕುವ' ಉಡುಗೊರೆಯನ್ನು ಮಾಲೀಕರಿಗೆ ನೀಡುವ ವಿನೂತನ ದಾರಿಯನ್ನು ಉಡುಕಿಕೊಂಡಿದೆ. ಅಧಿಸೂಚನೆ ಮೂಲಕ 'ನಿಗದಿತ

"ಕಾರ್ಮಿಕರ ಸನ್ನದು"



ಕಾಲಾವಧಿಯ ಕಾರ್ಮಿಕ' (F T E) ಸೌಲಭ್ಯವನ್ನು ಎಲ್ಲಾ ವಲಯಗಳಿಗೂ ವಿಸ್ತರಿಸಿದೆ. NEEM (ರಾಷ್ಟ್ರೀಯ ಉದ್ಯೋಗ ಉತ್ತೇಜನ ಧ್ಯೇಯ) ಮತ್ತು NETAP (ಅಪ್ರೆಂಟೀಶಿಪ್ ಕಾರ್ಯಕ್ರಮದ ಮೂಲಕ ರಾಷ್ಟ್ರೀಯ ಉದ್ಯೋಗ)ಗಳ ಮೂಲಕ ಒಟ್ಟಾರೆ ಖಾಯಂ ಕಾರ್ಮಿಕರನ್ನೇ ಇಲ್ಲವಾಗಿಸಲು ಸರ್ಕಾರವು ಮುಂದಾಗಿದೆ. ಗುತ್ತಿಗೆ ಕಾರ್ಮಿಕರನ್ನು ಸಹಾ ಅಪ್ರೆಂಟಿಸ್‌ಗಳು ಮತ್ತು ಟ್ರೈನಿಗಳ ಮೂಲಕ ಬದಲಾಯಿಸಲಾಗುತ್ತಿದೆ. ಖಾಯಂ ಉದ್ಯೋಗ, ಉದ್ಯೋಗ ಭದ್ರತೆ ಅಥವಾ ಸಾಮಾಜಿಕ ಭದ್ರತೆಯಿಲ್ಲದೆ ಯುವಜನತೆಯ ಭವಿಷ್ಯವು ನಿರಾಶಾದಾಯಕವಾಗಿದೆ.

ಶೇರು ವಿಕ್ರಯ, ನಿರ್ಣಾಯಕ ಮಾರಾಟ, ಪೂರ್ಣ ಮಾರಾಟ ಮುಂತಾದವುಗಳ ಮೂಲಕ ಸರ್ಕಾರವು ಖಾಸಗೀಕರಣ ನೀತಿಯನ್ನು ಹಠಮಾರಿತನದಿಂದ ಮುಂದುವರಿಸುತ್ತಿದೆ. ರಕ್ಷಣ ಉತ್ಪಾದನೆ, ರೈಲ್ವೆ, ವಿಮಾ, ಬ್ಯಾಂಕಿಂಗ್, ಚಿಲ್ಲರೆ ವ್ಯಾಪಾರ ಮುಂತಾದಂತಹ ನಿರ್ಣಾಯಕ ವಲಯಗಳಲ್ಲಿ 100 ಶೇಕಡ ವಿದೇಶಿ ನೇರ ಬಂಡವಾಳವನ್ನು ಅನುವುಗೊಳಿಸಿದ್ದಾರೆ. ಕಲಿದ್ದಲು ಗಣಿಗಾರಿಕೆ ವಲಯವನ್ನು ಅರಾಷ್ಟ್ರೀಕರಣಗೊಳಿಸಿ ಖಾಸಗಿ ವಾಣಿಜ್ಯೀಕೃತ ಕಲ್ಲಿದ್ದಲು ಗಣಿಗಾರಿಕೆಗೆ ಅನುವುಗೊಳಿಸಿದೆ.

600 ರೈಲ್ವೆ ನಿಲ್ದಾಣಗಳು ಮತ್ತದರ ಸುತ್ತಲ ರೈಲ್ವೆಗೆ ಸೇರಿದ ಭೂಮಿಯನ್ನು ಖಾಸಗಿಯವರಿಗೆ ವಹಿಸಲು ಗುರುತಿಸಿದೆ. ಸಾರ್ವಜನಿಕ ರಕ್ಷಣಾ ಉತ್ಪಾದನ ಕಾರ್ಖಾನೆಯಲ್ಲಿ ಉತ್ಪಾದಿಸಲಾಗುತ್ತಿರುವ ಅಸ್ತ್ರಗಳು ಒಳಗೊಂಡಂತೆ ನಿರ್ಣಾಯಕ ಸಾಧನಗಳ ಸುಮಾರು 200 ವಸ್ತುಗಳ ಉತ್ಪಾದನೆಯನ್ನು ಹೊರಗುತ್ತಿಗೆ ನೀಡಲಾಗಿದೆ. ಕಳೆದ 6 ದಶಕಗಳಿಂದ ಜತನದಿಂದ ಅಭಿವೃದ್ಧಿ ಪಡಿಸಿದ್ದ ಉತ್ಪಾದನ ಸಾಮರ್ಥ್ಯ ಮತ್ತು ಸಂಶೋಧನ ಮುತುವರ್ಜಿಗಳನ್ನು ಈ ಕ್ರಮಗಳು ಭಾರತದಲ್ಲಿ ತಯಾರಿಸಿ (Make in India) ಪ್ರತಿಪಾದನೆಗೆ ವ್ಯತಿರಿಕ್ತವಾಗಿ ನಾಶ ಮಾಡಲಿವೆ. ಇಂಧನ, ಪೆಟ್ರೋಲಿಯಂ, ದೂರಸಂಪರ್ಕ, ಉಕ್ಕು, ವಿಮಾನಯಾನ, ಬಂದರು ಮುಂತಾದ ನಿರ್ಣಾಯಕ ವಲಯಗಳಲ್ಲಿನ ಸಾರ್ವಜನಿಕ ಉದ್ದಿಮೆಗಳು ಸಹಾ ಸರ್ಕಾರದ ಖಾಸಗೀಕರಣದ ದಾಳಿಗೆ ಒಳಗಾಗಿವೆ.

ತನ್ನ ಎಲ್ಲಾ ಪ್ರಜೆಗಳಿಗೆ ಸಾರ್ವತ್ರಿಕ ಶಿಕ್ಷಣ ಮತ್ತು ಆರೋಗ್ಯ ಒದಗಿಸುವ ಸಂವಿಧಾನಿಕ ಕರ್ತವ್ಯವನ್ನು ಸರ್ಕಾರವು ಸಂಪೂರ್ಣವಾಗಿ ನಿರ್ಲಕ್ಷಿಸಿದೆ. ಸರ್ಕಾರಿ ಶಾಲೆಗಳು, ಕಾಲೇಜುಗಳು ಮತ್ತು ಆಸ್ಪತ್ರೆಗಳಿಗೆ ಹಣ ನೀಡದೆ ನಿರ್ಲಕ್ಷಿಸಲಾಗುತ್ತಿರುವಾಗಲೇ ಶಿಕ್ಷಣ ಮತ್ತು ಆರೋಗ್ಯ ವಲಯದಲ್ಲಿನ ಕಾರ್ಪೊರೇಟ್‌ಗಳಿಗೆ ವಿನಾಯಿತಿ ಮತ್ತು ರಿಯಾಯಿತಿಗಳನ್ನು ಒದಗಿಸಲಾಗುತ್ತಿದೆ.

ನೋಟು ರದ್ದತಿಯಿಂದ ಏಕಾಏಕಿ 86 ಶೇಕಡ ನೋಟುಗಳನ್ನು ಹಿಂಪಡೆದ ಕಾರಣ ಸಾಮಾನ್ಯ ಜನತೆಗೆ ಅಪಾರ ಸಂಕಷ್ಟ ಉಂಟಾಯಿತು. ಮಾತ್ರವಲ್ಲದೆ ಲಕ್ಷಾಂತರ ಸಣ್ಣ ಮತ್ತು ಮಾಧ್ಯಮ ಉದ್ದಿಮೆಗಳು ಮುಚ್ಚಿಹೋದವು. ಅಸಂಘಟಿತ ವಲಯದ ಲಕ್ಷಾಂತರ ಕಾರ್ಮಿಕರು ತಮ್ಮ ಕೆಲಸ ಕಳೆದುಕೊಂಡರು. ಲಕ್ಷಾಂತರ ಸಣ್ಣ ರೈತರು ತಮ್ಮ ಆದಾಯ ಕಳೆದುಕೊಂಡಿದ್ದಾರೆ. ಒಂದೇ ಒಂದು ಘೋಷಿತ ಗುರಿಯನ್ನು ತಲುಪಲಾಗಿಲ್ಲ. ಡಿಜಿಟಲ್ ಪಾವತಿ ಸಂಸ್ಥೆಗಳಿಗೆ ಮಾತ್ರ ಲಾಭವಾಗಿದೆ.

GST ಕೂಡ ಸಣ್ಣ ಉದ್ದಿಮೆಗಳು ಮತ್ತು ಅಲ್ಲಿ ಕೆಲಸ ಮಾಡುವ ಲಕ್ಷಾಂತರ ಕಾರ್ಮಿಕರ ಬದುಕಿನಲ್ಲಿ ಬಿರುಗಾಳಿಯನ್ನೆ ಎಬ್ಬಿಸಿದೆ. ಸಾವಿರಾರು ಸಣ್ಣ ಮತ್ತು ಮಧ್ಯಮ ಉದ್ದಿಮೆಗಳು ಇದರಿಂದ ಇನ್ನು ಚೇತರಿಸಿಕೊಂಡಿಲ್ಲ.

ಸಾರ್ವಜನಿಕ ಬ್ಯಾಂಕ್‌ಗಳಲ್ಲಿ ಕಾರ್ಮಿಕರು ಮತ್ತು ಸಾಮಾನ್ಯ ಜನತೆ ಉಳಿತಾಯ ಮಾಡಿರುವ ಸಾವಿರಾರು ಕೋಟಿ ರೂಪಾಯಿಗಳ ಹಣವನ್ನು ಬಾಕಿದಾರ ಕಾರ್ಪೊರೇಟ್ ದಗಾಕೋರರು ಲೂಟಿ ಮಾಡಿ ವಿದೇಶಗಳಿಗೆ ಪರಾರಿಯಾಗುತ್ತಿದ್ದಾರೆ. ಬ್ಯಾಂಕ್‌ಗಳು ನೀಡಿರುವ "ಕಾರ್ಯ ನಿರ್ವಹಣೆಯಲ್ಲಿಲ್ಲದ ಸಾಲಗಳ" (NPA) 80 ಶೇಕಡ ಸಾಲಗಳು ಕೇವಲ 50 ಜನ ಕಾರ್ಪೊರೇಟ್ ಮನೆತನಕ್ಕೆ ಸೇರಿದ್ದವಾಗಿವೆ. ಬಡವರಿಗೆ ಮೂಲಭೂತ ಅಗತ್ಯಗಳು ಮತ್ತು ಸಾಮಾಜಿಕ ಕಲ್ಯಾಣ ಖಾತ್ರಿಗೆ ಅಗತ್ಯ ಹಣ ಖರ್ಚು ಮಾಡಲು ನಿರಾಕರಿಸುವ ಸರ್ಕಾರವು ದೇಶಿ ಹಾಗೂ ವಿದೇಶಿ ದೊಡ್ಡ ಕಾರ್ಪೊರೇಟರ್‌ಗಳಿಗೆ ವಾರ್ಷಿಕ 5 ಲಕ್ಷ ಕೋಟಿಗೂ ಹೆಚ್ಚು ತೆರಿಗೆ ರಿಯಾಯಿತಿ ಮತ್ತು ವಿನಾಯಿತಿಗಳನ್ನು ನೀಡುತ್ತಿದೆ.

ತನ್ನ ಕಾರ್ಪೊರೇಟ್ ಧಣಿಗಳಿಗಾಗಿ ಶಕ್ತಿ ಮೀರಿ ಈ ಸರ್ಕಾರ ಕೆಲಸ ಮಾಡುತ್ತಿದೆ ಎಂಬುದಂತೂ ಸ್ಪಷ್ಟವಾಗಿದೆ. ತನ್ನ ನೀತಿಗಳಿಗೆ ಪ್ರತಿರೋಧ ಮತ್ತು ವಿರೋಧವನ್ನು ದಮನಿಸಲು ಸರ್ವಾಧಿಕಾರಿ ಕ್ರಮಗಳಿಗೆ ಮೊರೆಹೋಗುತ್ತಿದೆ. ದಲಿತರು, ಅಲ್ಪಸಂಖ್ಯಾತರು ಮತ್ತು ಕಾರ್ಮಿಕರ ಪ್ರಜಾಸತ್ತಾತ್ಮಕ ಹಕ್ಕುಗಳ ಸಂರಕ್ಷಣೆಗಾಗಿ ಶ್ರಮಿಸುತ್ತಿರುವ ಜನತೆಯ, ಸಾಮಾಜಿಕ ಮತ್ತು ಮಾನವ ಹಕ್ಕುಗಳ ಕಾರ್ಯಕರ್ತರನ್ನು 'ದೇಶ ದ್ರೋಹಿ' ಎಂದು ಹಣೆ ಪಟ್ಟಿ ಕಟ್ಟಿ, ಶಿಕ್ಷೆಗೆ ಒಳಪಡಿಸುತ್ತಿದ್ದಾರೆ ಮತ್ತು ಕೊಲ್ಲಲ್ಪಡುತ್ತಿದ್ದಾರೆ.

ಮಾತ್ರವಲ್ಲದೆ ಕೇಂದ್ರದಲ್ಲಿನ ಸರ್ಕಾರವು ದ್ವೇಷವನ್ನು ಮತ್ತು ವೈಮನಸ್ಯವನ್ನು ಪ್ರೋತ್ಸಾಹಿಸುತ್ತಾ ವಿವಿಧ ಕೋಮುವಾದಿ ಸಂಘಟನೆಗಳಿಂದ ಹರಿಯಲ್ಪಡುತ್ತಿರುವ ಕೋಮು ವಿಷವನ್ನು ಪ್ರಚುರಪಡಿಸಲು ಪ್ರೋತ್ಸಾಹಿಸುತ್ತಿದೆ. ಕಾರ್ಮಿಕರು ಮತ್ತು ದುಡಿಯುವ ಜನತೆಯ ಇತರೆ ಜನವಿಭಾಗಗಳನ್ನು ವಿಭಜಿಸುವ, ಐಕ್ಯತೆಯನ್ನು ಛಿದ್ರಗೊಳಿಸಿ ನವ ಉದಾರವಾದಿ ನೀತಿಗಳ ವಿರುದ್ಧದ ಹೋರಾಟಗಳನ್ನು ದುರ್ಬಲಗೊಳಿಸುವುದು ಇದರ ಉದ್ದೇಶವಾಗಿದೆ. ನಮ್ಮೆಲ್ಲರ ಜೀವನ ಮತ್ತು ಜೀವನಾಧಾರಗಳ ಮೇಲೆ ದಾಳಿಮಾಡುತ್ತಿರುವ ನವ ಉದಾರವಾದಿ ನೀತಿಗಳ ವಿರುದ್ಧದ ನಮ್ಮ ಹೋರಾಟಗಳನ್ನು ತೀವ್ರಗೊಳಿಸಬೇಕಿರುವ ಈ ಕಾಲಾವಧಿಯಲ್ಲಿ ಕಾರ್ಮಿಕ ವರ್ಗದ ಐಕ್ಯತೆಗೆ ಗಂಭೀರ ಸವಾಲನ್ನು ಒಡ್ಡುವ ನಿಟ್ಟಿನಲ್ಲಿ ಧರ್ಮ, ಜಾತಿ, ಪ್ರದೇಶ, ಭಾಷೆ ಮುಂತಾದ ವಿಚಾರಗಳ ಆಧಾರದಲ್ಲಿ ದ್ವೇಷ ಮತ್ತು ಹಗೆತನವನ್ನು ಉತ್ತೇಜಿಸುವ ಯತ್ನಗಳು ನಡೆದಿವೆ.

ಕಳೆದ 2 ದಶಕಗಳಿಂದ ನಾವು ಕಾರ್ಮಿಕರು ಈ ನೀತಿಗಳ ವಿರುದ್ಧ ಐಕ್ಯತೆಯಿಂದ ಹೋರಾಡುತ್ತಿದ್ದೇವೆ. ಹಲವು ವಲಯವಾರು ಮುಷ್ಕರಗಳ ಜೊತೆ ಜೊತೆಯಲ್ಲಿಯೇ 18 ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರಗಳನ್ನು ಜಂಟಿಯಾಗಿ ಈ ಕಾಲಾವಧಿಯಲ್ಲಿ ನಡೆಸಿದ್ದೇವೆ. ಈ ಮುಷ್ಕರಗಳಲ್ಲಿ ಕಾರ್ಮಿಕರ ಭಾಗವಾಗಿಸುವಿಕೆ ನಿರಂತರವಾಗಿ ಹೆಚ್ಚುತ್ತಿದೆ.

ಆದರೆ ಯಾವ ಚುನಾವಣೆ ಮೂಲಕ ನಮ್ಮ ಜೀವನಾಧಾರ ಮತ್ತು ಬದುಕಿನ ಪರಿಸ್ಥಿತಿಗಳ ಕುರಿತು ನಿರ್ಣಾಯಕ ನೀತಿಗಳನ್ನು ರೂಪಿಸುವ ಸರ್ಕಾರಗಳು ರಚನೆಗೊಳ್ಳುತ್ತವೆಯೋ ಅಂತಹ ಚುನಾವಣೆಯಲ್ಲಿ ಬಹುತೇಕ ರಾಜಕೀಯ ಪಕ್ಷಗಳು ಈ ವಿಚಾರಗಳ ಕುರಿತು ಮೌನವಹಿಸುತ್ತವೆ. ಈ ಚುನಾವಣೆಗಳ ಚರ್ಚೆಯಲ್ಲಿ ನಮ್ಮ ವಿಚಾರಗಳು, ಬೇಡಿಕೆಗಳು, ಕಾರ್ಮಿಕರು ಮತ್ತಿತರೆ ದುಡಿಯುವ ಜನತೆಯ ವಿವಿಧ ವಿಭಾಗಗಳ ಮೂಲಭೂತ ಪ್ರಶ್ನೆಗಳು, ಸಮಸ್ಯೆಗಳು ಮಾತ್ರವಲ್ಲದೆ ಸೌಜನ್ಯಯುತ ಮಾನವ ಜೀವನ ಮತ್ತು ಜೀವನಾಧಾರಗಳು ಸ್ಥಾನವನ್ನೇ ಪಡೆಯುವುದಿಲ್ಲ. ಬಹುತೇಕ ರಾಜಕೀಯ ಪಕ್ಷಗಳು ಜನತೆಯನ್ನು ಧರ್ಮ, ಜಾತಿ ಅಥವಾ ಉಪಜಾತಿ ಪ್ರದೇಶ ಮುಂತಾದ ಆಧಾರದಲ್ಲಿ 'ಮತ ಬ್ಯಾಂಕ್'ಗಳಾಗಿ ಪರಿಗಣಿಸುತ್ತವೆ. ತಮ್ಮ ರಾಜಕೀಯ ಲಾಭಕ್ಕಾಗಿ ನಮ್ಮ ದೈನಂದಿನ ಸಮಸ್ಯೆಗಳು ಅಥವಾ ಬೇಡಿಕೆಗಳಿಗೆ ಸಂಬಂಧವಿರದ ವಿಚಾರಗಳನ್ನು ಎತ್ತಿ ಜನತೆಯನ್ನು ಕೆರಳಿಸಲಾಗುತ್ತಿದೆ. ಅಧಿಕಾರಕ್ಕೆ ಬಂದ ನಂತರ ನಮ್ಮನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗುತ್ತಿದೆ. ಸರ್ಕಾರದಲ್ಲಿರುವ ಜನ ತಮಗೆ ದೇಣಿಗೆ ನೀಡುವ ಕಾರ್ಪೊರೇಟ್ ಧಣಿಗಳ ಆದೇಶಗಳನ್ನು ಪಾಲಿಸುತ್ತಾ ಈ ಪ್ರಕ್ರಿಯೆಯಲ್ಲಿ ➔

ತಮ್ಮನ್ನು ತಾವು ಶ್ರೀಮಂತಗೊಳಿಸಿಕೊಳ್ಳುತ್ತಾರೆ.

ಇದು ಎಷ್ಟು ದಿನ ಮುಂದುವರಿಯಬೇಕು? ಕಾರ್ಮಿಕ ವಿರೋಧಿ, ಜನವಿರೋಧಿ ಮತ್ತು ರಾಷ್ಟ್ರವಿರೋಧಿ ನೀತಿಗಳನ್ನು ತೀವ್ರತರವಾಗಿ ಅನುಸರಿಸುತ್ತಿರುವ ಪ್ರಸಕ್ತ ಬಿಜೆಪಿ ನೇತೃತ್ವದ ಸರ್ಕಾರವನ್ನು ನಾವು ಸೋಲಿಸಲೇಬೇಕಿರುವಾಗಲೇ, ಈ ನೀತಿಗಳನ್ನು ಹಿಂಪಡೆದು ಪರ್ಯಾಯ ಕಾರ್ಮಿಕ ಪರ, ಜನಪರ ನೀತಿಗಳನ್ನು ರೂಪಿಸಲು ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರು ಸಹಾ ನಾವು ಒತ್ತಾಯಿಸಬೇಕಿದೆ.

ಚುನಾವಣೆಗಳ ವೇಳೆಯಲ್ಲಿ ಕಾರ್ಮಿಕರ ವಿಚಾರಗಳನ್ನು ಎತ್ತುವ ಸಮಯವಾಗಿದೆ. ಕಾರ್ಮಿಕರ ವಿಚಾರಗಳನ್ನು ಚುನಾವಣೆಯ ಚರ್ಚೆಯ ಪ್ರಧಾನ ವಿಷಯವನ್ನಾಗಿಸುವ ಸಮಯವಾಗಿದೆ. ನಾವು ಮತದಾನ ಮಾಡುವ ಮುನ್ನ ನಮ್ಮ ಬೇಡಿಕೆಗಳನ್ನು – ಕಾರ್ಮಿಕರ ಸನ್ನದನ್ನು ಎಲ್ಲಾ ರಾಜಕೀಯ ಪಕ್ಷಗಳ ಮುಂದಿರಿಸಿ ಅವುಗಳ ಕುರಿತು ನಿರ್ದಿಷ್ಟವಾಗಿ, ಅವರ ನಿಲುಮೆ ವ್ಯಕ್ತಪಡಿಸಲು ಒತ್ತಾಯಿಸೋಣ.

ಕಾರ್ಮಿಕರ ಬೇಡಿಕೆಗಳು :

1. ಗಗನಕ್ಕೇರುತ್ತಿರುವ ಅವಶ್ಯಕ ವಸ್ತುಗಳ ಬೆಲೆಯೇರಿಕೆಯನ್ನು ನಿಯಂತ್ರಿಸಲು ನಿರ್ದಿಷ್ಟವಾದ ಕ್ರಮಗಳನ್ನು ಕೈಗೊಳ್ಳಬೇಕು. ಜೀವನಾವಶ್ಯಕ ವಸ್ತುಗಳಲ್ಲಿ ಸಟ್ಟಾ ವ್ಯಾಪಾರವನ್ನು ತಡೆಗಟ್ಟಬೇಕು. ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ವಿಸ್ತರಿಸಿ ಬಲಪಡಿಸಬೇಕು. ಸಾರ್ವಜನಿಕ ವಿತರಣಾ ವ್ಯವಸ್ಥೆಯ ಸೌಲಭ್ಯ ಪಡೆಯುವವರಿಗೆ ಆಧಾರ್ ಕಾರ್ಡ್ ಜೋಡಣೆ ಕಡ್ಡಾಯ ಮಾಡಬಾರದು.
2. ಅಧಿಕ ಸಂಖ್ಯೆಯಲ್ಲಿ ಕಾರ್ಮಿಕರನ್ನು ನೇಮಿಸಬಲ್ಲ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಮೂಲಕ ನಿರುದ್ಯೋಗ ಸಮಸ್ಯೆಯನ್ನು ನಿಯಂತ್ರಿಸಬೇಕು. ಮಾಲೀಕರಿಗೆ ನೀಡುವ ಸಹಾಯಧನ, ಪ್ರೋತ್ಸಾಹಗಳನ್ನು ಆಯಾ ಕೈಗಾರಿಕೆಯಲ್ಲಿ ಉದ್ಯೋಗಾವಕಾಶಗಳ ಹೆಚ್ಚಳದೊಂದಿಗೆ ಜೋಡಣೆ ಮಾಡಬೇಕು. ಸರ್ಕಾರಿ ಇಲಾಖೆಗಳಲ್ಲಿ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ನೇಮಕಾತಿ ಮುಖಾಂತರ ಭರ್ತಿ ಮಾಡಬೇಕು. ನೇಮಕಾತಿಗಳ ಮೇಲಿರುವ ನಿಷೇಧವನ್ನು ಮತ್ತು ಪ್ರತಿವರ್ಷ ಸರ್ಕಾರಿ ಕಚೇರಿಗಳಲ್ಲಿ 3 ಶೇಕಡ ಹುದ್ದೆಗಳನ್ನು ಕಡಿತ ಮಾಡಬೇಕೆಂಬ ನಿಯಮವನ್ನು ತೆಗೆದುಹಾಕಬೇಕು.
3. ಖಾಯಂ ಮತ್ತು ನಿರಂತರ ಸ್ವರೂಪದ ಹುದ್ದೆಗಳನ್ನು ಹೊರಗುತ್ತಿಗೆ ಮತ್ತು ಗುತ್ತಿಗೆ ನೀಡುವುದನ್ನು ನಿಲ್ಲಿಸಬೇಕು.
4. ಸಮಾನ ಕೆಲಸ ಮಾಡುವ ಗುತ್ತಿಗೆ ಕಾರ್ಮಿಕರಿಗೆ ಖಾಯಂ ನೌಕರರಂತೆ ಸಮಾನ ವೇತನ ಮತ್ತು ಸವಲತ್ತುಗಳನ್ನು ಕಡ್ಡಾಯವಾಗಿ ನೀಡಬೇಕೆಂಬ ಸುಪ್ರೀಂ ಕೋರ್ಟ್‌ನ ತೀರ್ಮಾನವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು
5. ಭಾರತ ಸಂವಿಧಾನದಂತೆ ಪುರುಷ ಮತ್ತು ಮಹಿಳಾ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು.
6. 15ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸಿನಂತೆ ಮತ್ತು ಸುಪ್ರೀಂ ಕೋರ್ಟ್‌ನ ರಪ್ತ ಕೋಸ್ ಮತ್ತು ಬ್ರೇಟ್ ಪ್ರಕರಣದ ತೀರ್ಪಿನಂತೆ ಹಾಗೂ 44ನೇ ಭಾರತೀಯ ಕಾರ್ಮಿಕ ಸಮ್ಮೇಳನವು ಸರ್ವಾನುಮತದಿಂದ ಪುನರುಚ್ಚರಿಸಿರುವಂತೆ ರಾಷ್ಟ್ರೀಯ ಕನಿಷ್ಟ ವೇತನವನ್ನು ನಿಗದಿ ಪಡಿಸಬೇಕು.
7. ಮಾಸಿಕ ಕನಿಷ್ಟ ಪಿಂಚಣಿ ರೂ.6000 ಅನ್ನು ಬೆಲೆ ಏರಿಕೆಗೆ ಅನುಗುಣವಾಗಿ ಗ್ರಾಹಕ ಬೆಲೆ ಸೂಚ್ಯಾಂಕಕ್ಕೆ ಹೊಂದಿಸಲಾದ ತುಟ್ಟಿಭತ್ಯೆ ಸಹಿತ ಎಲ್ಲರಿಗೂ ಖಾತ್ರಿಪಡಿಸಬೇಕು.
8. ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರು ಮುಂತಾಗಿ ಸರ್ಕಾರದ ವಿವಿಧ ಯೋಜನೆಗಳ ರಾಷ್ಟ್ರೀಯ ಆರೋಗ್ಯ ಮಿಶನ್‌ನಲ್ಲಿ ದುಡಿಯುವ 'ಆಶಾ' ಕಾರ್ಯಕರ್ತೆಯರು ಮತ್ತಿತರರು, ಬಿಸಿಯೂಟ ನೌಕರರು, ಅರೆಕಾಲಿಕ ಶಿಕ್ಷಕರು ಮತ್ತು ರಾಷ್ಟ್ರೀಯ ಶಿಶು ಕಾರ್ಮಿಕರು, ಶಿಕ್ಷಕ ಹಾಗೂ ಶಿಕ್ಷಕೇತರ ನೌಕರರನ್ನು ಒಳಗೊಂಡಂತೆ ಎಲ್ಲರನ್ನೂ 'ನೌಕರರು' ಎಂದು ಪರಿಗಣಿಸಿ ಎಲ್ಲರಿಗೂ ಕನಿಷ್ಟ ವೇತನ, ಪಿಂಚಣಿ ಇತ್ಯಾದಿ ಸಾಮಾಜಿಕ ಸುರಕ್ಷಾ ಸವಲತ್ತುಗಳನ್ನು ನೀಡಬೇಕು.
9. ಭಾರತ ಸರ್ಕಾರ ಅನುಮೋದಿಸಿರುವ ಅಂತರಾಷ್ಟ್ರೀಯ ಕಾರ್ಮಿಕ ಸಂಘದ 204ನೇ ಶಿಫಾರಸ್ಸಿಗೆ ವಿರುದ್ಧವಾಗಿರುವ 'ನಿಗದಿತ ಕಾಲಾವಧಿಯ ಉದ್ಯೋಗ'ವನ್ನು (FTE) ರದ್ದುಪಡಿಸಬೇಕು.
10. ಸಾರ್ವಜನಿಕ ರಂಗದ ಉದ್ಯಮಗಳ ಬಂಡವಾಳ ಹಿಂತೆಗೆತ ಮತ್ತು ಅವುಗಳ ನಿರ್ಣಾಯಕ ಮಾರಾಟವನ್ನು ತಡೆ ಹಿಡಿಯಬೇಕು.
11. ರೈಲ್ವೆ, ರಕ್ಷಣ ವಲಯ, ಬಂದರು, ಬ್ಯಾಂಕುಗಳು, ವಿಮೆ, ಕಲ್ಲಿದ್ದಲು ಮುಂತಾದ ಉದ್ಯಮಗಳನ್ನು ಖಾಸಗೀಕರಣಗೊಳಿಸುವ ನಿರ್ಧಾರವನ್ನು ಕೈಬಿಡಬೇಕು. ಕಲ್ಲಿದ್ದಲು ಗಣಿಗಳಲ್ಲಿ ಖಾಸಗಿ ವಾಣಿಜ್ಯ ಗಣಿಗಾರಿಕೆಗಳಿಗೆ ನೀಡಿದ ಅನುಮತಿಯನ್ನು ರದ್ದು ಪಡಿಸಬೇಕು.
12. ಕೇಂದ್ರ ಸರ್ಕಾರಿ ನೌಕರರಿಗೆ ಸಂಬಂಧಪಟ್ಟಂತೆ 7ನೇ ವೇತನ ಆಯೋಗದ ಶಿಫಾರಸ್ಸುಗಳ ಕುರಿತು ವಿಚಾರಗಳನ್ನು ಕೂಡಲೇ ಪರಿಹರಿಸಬೇಕು.
13. ನೂತನ ಪಿಂಚಣಿ ಯೋಜನೆಯನ್ನು ರದ್ದುಪಡಿಸಬೇಕು ಮತ್ತು ಹಳೆಯ ಪಿಂಚಣಿ ಯೋಜನೆಯನ್ನು ಪುನರ್ ಸ್ಥಾಪಿಸಬೇಕು.
14. ಕಾರ್ಮಿಕ ವಿರೋಧಿಯಾದ ಮತ್ತು ಮಾಲೀಕರ ಪರವಾಗಿರುವ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿಯನ್ನು ನಿಲ್ಲಿಸಬೇಕು. ಈಗಿರುವ ಕಾರ್ಮಿಕ ಕಾನೂನುಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.
15. ವೇತನ ಸಹಿತವಾದ 26 ವಾರಗಳ ಹೆರಿಗೆ ರಜೆ ಜಾರಿಗೊಳಿಸಬೇಕು. ಮಹಿಳಾ ಕಾರ್ಮಿಕರಿಗೆ ಬಾಣಂತನದ ಸೌಕರ್ಯ ಮತ್ತು ಶಿಶು ಪಾಲನಾ ಕೇಂದ್ರಗಳನ್ನು ಸ್ಥಾಪಿಸಬೇಕು.
16. ದುಡಿಯುವ ಸ್ಥಳದಲ್ಲಿ ಮಹಿಳಾ ಕಾರ್ಮಿಕರಿಗೆ ಲೈಂಗಿಕ ಕಿರುಕುಳವನ್ನು ತಡೆಗಟ್ಟುವ ಶಾಸನವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.
17. ಅಂತರಾಷ್ಟ್ರೀಯ ಕಾರ್ಮಿಕ ಸಂಘದ (ILO) ಸಂಘ ರಚಿಸುವ ಸ್ವಾತಂತ್ರ್ಯ ಮತ್ತು ಸಾಮೂಹಿಕ ಚೌಕಾಸಿಯ ಹಕ್ಕಿಗೆ ಸಂಬಂಧಿಸಿದಂತೆ ಅಂಗೀಕರಿಸುವ 87ನೇ ಮತ್ತು 98ನೇ ಒಡಂಬಡಿಕೆಗಳನ್ನು ಮತ್ತು ಮನೆಕೆಲಸಗಾರರಿಗೆ ಸಂಬಂಧಿಸಿದ 189ನೇ ಒಡಂಬಡಿಕೆಯನ್ನು ಸಹಾ ಅನುಮೋದಿಸಬೇಕು.
18. ಕಾರ್ಮಿಕ ರಂಗದಲ್ಲಿ ದ್ವಿಪಕ್ಷೀಯ ಮತ್ತು ತ್ರಿಪಕ್ಷೀಯ ಮಾತುಕತೆಗಳ ವಿಧಾನವನ್ನು ಬಲಪಡಿಸಬೇಕು. ಎಲ್ಲಾ ಉದ್ಯಮಗಳಲ್ಲಿ ಮಾಲೀಕ ವರ್ಗಗಳು ಕಾರ್ಮಿಕ ಸಂಘಟನೆಗಳಿಗೆ ಮಾನ್ಯತೆ ನೀಡುವುದನ್ನು ಕಡ್ಡಾಯಗೊಳಿಸಬೇಕು. ಕಾರ್ಮಿಕರಿಗೆ ಸಂಬಂಧಿಸಿದ ಯಾವುದೇ ನಿರ್ಧಾರಗಳನ್ನು ಕಾರ್ಮಿಕ ಸಂಘಗಳೊಂದಿಗೆ ಚರ್ಚಿಸದೆ ಮತ್ತು ಸರ್ವ ಸಮ್ಮತಿಯನ್ನು ರೂಪಿಸದೆ ತೆಗೆದುಕೊಳ್ಳಬಾರದು.
19. ಕಾರ್ಪೋರೇಟ್ ವಲಯಗಳಿಗೆ ನೀಡುತ್ತಿರುವ ಸಬ್ಸಿಡಿಯನ್ನು ಕಡಿತಗೊಳಿಸಬೇಕು.
20. ಸ್ವಾಮಿನಾಥನ್ ಆಯೋಗದ ಶಿಫಾರಸ್ಸಿನಂತೆ ರೈತರ ಫಸಲುಗಳಿಗೆ ಕನಿಷ್ಟ ಬೆಂಬಲ ಬೆಲೆ ನಿಗದಿಯಾಗಬೇಕು. ಸಾರ್ವಜನಿಕ ಖರೀದಿ ವ್ಯವಸ್ಥೆಯನ್ನು ಬಲಪಡಿಸಬೇಕು.
21. ರೈತರ ಸಾಲ ಮನ್ನಾ ಮಾಡಬೇಕು. ಸಣ್ಣ ಮತ್ತು ಅಂಚಿನಲ್ಲಿರುವ ರೈತರಿಗೆ ಸಾಂಸ್ಥಿಕ ಸಾಲ ದೊರೆಯುವಂತಾಗಬೇಕು.
22. ಕೃಷಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಮತ್ತು ಸೇವಾ ಶರತ್ತುಗಳ ಸಮಗ್ರ ಶಾಸನವೊಂದನ್ನು ರೂಪಿಸಬೇಕು.
23. ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ 200 ದಿನಗಳ ಕಾಲ ಕೆಲಸ ಒದಗಿಸಬೇಕು. ನಗರ ಪ್ರದೇಶದ ಕಾರ್ಮಿಕರನ್ನು ಒಳಗೊಳ್ಳಲು ಶಾಸನ ಅಂಗೀಕರಿಸಬೇಕು. ರಾಜ್ಯಗಳಲ್ಲಿನ ಕನಿಷ್ಠ ವೇತನಕ್ಕಿಂತ ಕಡಿಮೆಯಿಲ್ಲದ ವೇತನ ನಿಗದಿಪಡಿಸಬೇಕು.
24. ಅಂತರ್ಜಾತಿಯ ವಿವಾಹವಾಗುವ ದಂಪತಿಗಳಿಗೆ ರಕ್ಷಣೆ ನೀಡಲು ಸೂಕ್ತ ಶಾಸನ ಅಂಗೀಕರಿಸಬೇಕು. ಮರ್ಯಾದಾ ಹತ್ಯೆ ನಡೆಸುವವರಿಗೆ ಮತ್ತು ಅದಕ್ಕೆ ಉತ್ತೇಜನ ನೀಡುವವರಿಗೆ ಕಠಿಣ ಶಿಕ್ಷೆಯನ್ನು ಖಾತ್ರಿಪಡಿಸಬೇಕು.
25. ಮಾನವರಿಂದ ಶೌಚಾಲಯ ಶುಚಿಗೊಳಿಸುವ ಅಮಾನುಷ ಪದ್ಧತಿಯನ್ನು ತಡೆಗಟ್ಟಲು ಕಟ್ಟುನಿಟ್ಟಾದ ಕ್ರಮಕೈಗೊಳ್ಳಬೇಕು. ಒಳಚರಂಡಿ ಕೆಲಸ ಮಾಡುವಾಗ ಮೃತಪಟ್ಟ ಕಾರ್ಮಿಕರ ಕುಟುಂಬಕ್ಕೆ ಸುಪ್ರೀಂ ಕೋರ್ಟ್ ತೀರ್ಪಿನಂತೆ ಸೂಕ್ತ ಪರಿಹಾರ ನೀಡಬೇಕು.
26. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ತಡೆ ಕುರಿತು ಶಾಸನವನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು.
27. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಮೀಸಲಾಗಿದ್ದು ಭರ್ತಿಯಾಗದಿರುವ ಎಲ್ಲಾ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಬೇಕು. ಇದೇ ರೀತಿ ಮೀಸಲಾತಿಯನ್ನು ಖಾಸಗಿ ವಲಯದಲ್ಲೂ ಜಾರಿಗೆ ಬರಬೇಕು.
28. ಮಹಿಳೆಯರ ಮೇಲೆ ಅತ್ಯಾಚಾರ ಮತ್ತು ಇತರ ದೌರ್ಜನ್ಯ ನಡೆಸುವ ಅಪರಾಧಿಗಳಿಗೆ ಕಠಿಣ ಶಿಕ್ಷೆ ಆಗುವುದನ್ನು ಖಾತರಿಗೊಳಿಸಬೇಕು.
29. ಜನರ ನಡುವೆ ಮತ–ಧರ್ಮ, ಭಾಷೆ, ಪ್ರದೇಶ, ಜಾತಿ–ಪಂಗಡ ಆಧಾರಿತ ಸಂಸ್ಕೃತಿ ಮತ್ತು ಪ್ರಜ್ಞೆ ಇತ್ಯಾದಿಗಳನ್ನು ಮೀರಿ ಸೌಹಾರ್ದತೆ, ಭ್ರಾತೃತ್ವ ಮತ್ತು ವೈವಿಧ್ಯತೆಯನ್ನು ಬೆಳೆಸುವಂತೆ ಕರೆ ನೀಡಿರುವ ಹಾಗೂ ಮಹಿಳೆಯರನ್ನು ಅವಮಾನಿಸುವಂತಹ ಸಂಪ್ರದಾಯಗಳನ್ನು ನಿರಾಕರಿಸುವಂತೆ ಕರೆ ನೀಡಿರುವ ಸಂವಿಧಾನದ 51A ವಿಧಿಯ ಪರಿಣಾಮಕಾರಿ ಜಾರಿಯನ್ನು ಖಾತ್ರಿಪಡಿಸಬೇಕು.
30. 12ನೇ ತರಗತಿಯವರೆಗೆ ಎಲ್ಲ ಮಕ್ಕಳಿಗೂ ಉಚಿತ ಶಿಕ್ಷಣವನ್ನು ತಾಂತ್ರಿಕ ಶಿಕ್ಷಣ ಸಹಿತ ನೀಡಬೇಕು.
31. ಸರ್ವರಿಗೂ ಉಚಿತ ಆರೋಗ್ಯ ಸೇವೆ ಒದಗಿಸಬೇಕು. ಆರೋಗ್ಯ ಸಂಬಂಧಿ ಮೂಲ ಸೌಕರ್ಯಗಳನ್ನು ಮುಖ್ಯವಾಗಿ ಗ್ರಾಮಾಂತರ ಮತ್ತು ಬುಡಕಟ್ಟು ಜನರ ಪ್ರದೇಶಗಳಲ್ಲಿ ಬಲಪಡಿಸಬೇಕು. ಆರೋಗ್ಯ ಸವಲತ್ತಿಗಾಗಿ ಸರ್ಕಾರವು ವೆಚ್ಚಮಾಡುತ್ತಿರುವ ಹಣದ ಪ್ರಮಾಣವನ್ನು ಜಿ.ಡಿ.ಪಿ.ಯ 5 ಶೇಕಡ ಕ್ಕೆ ಏರಿಸಬೇಕು.
32. ಸಂವಿಧಾನದ ಸೂಕ್ತ ತಿದ್ದುಪಡಿ ಮೂಲಕ ಉದ್ಯೋಗದ ಹಕ್ಕನ್ನು ಮೂಲಭೂತ ಹಕ್ಕನ್ನಾಗಿಸಬೇಕು.

●

STATEMENT OF THE OWNERSHIP ETC

The Weekly Newspaper "JANASHAKTHI KANNADA VARA PATRIKE"

Form IV

(See Rule 8)

1.	Place of Publication	: EMS Bhavana, No.37/A, 8th Cross, Mahalakshmi Layout, Bangalore-560086 (Karnataka)
2.	Periodicity of Publication	: weekly
3.	Printer's Name	: G.N.NAGARAJ
	(Whether Citizen of India? If Foreigner, State the Country of Origin)	: Indian
4.	Address	: No. 12, 18th Cross, Sampangirama Nagar, Bangalore 560027
5.	Editor`s Name	: G.V.Sriramareddy
	(Whether Citizen of India? If Foreigner, State the Country of Origin)	: Indian
	Address	: EMS Bhavana, No.37/A, 8th Cross, Mahalakshmi Layout, Bangalore-560086 (Karnataka)
6.	Name and address of Individuals Communist Party of India(Marxist) Who own the News paper and Karnataka State Committee partners or Shareholders holding more then one percent of the Total capital	: EMS Bhavana, No.37/A, 8th Cross, Mahalakshmi Layout, Bangalore-560086 (Karnataka)

I G.N.NAGARAJ, here by declare that the particulars given above are true to the best of my knowledge and belief.

Sd/-

G.N.NAGARAJ

Publisher

Date : March 16, 2019

Bangalore

ಅತಿಥಿ ಅಂಕಣ



ಡಾ. ವಿನಯಾ ಒಕ್ಕುಂದ

ಮಹಿಳೆ, ಮಹಿಳಾ ಸಂವೇದನೆ ಎನ್ನುವುದನ್ನು ಮರುನಿರ್ವಚನೆ ಮಾಡಿಕೊಳ್ಳಬೇಕಾದ ಮೊದಲ ಪಾಠಕ್ಕೆ ಪ್ರವೇಶಿಸಬೇಕಿದೆಯಲ್ಲವೇ? ಮಹಿಳೆ ಎಂಬ ಜೈವಿಕತೆಯು ಪಿತೃ ಪ್ರಧಾನ ನಿಲುವುಗಳಿಂದ ಕೂಡಿ ತನ್ನ ಸಂವೇದನೆಯ ಹಂತದಲ್ಲಿಯೇ ಭ್ರಷ್ಟವಾಗಿರುವ ವಾಸ್ತವವನ್ನು ಅರಗಿಸಿಕೊಳ್ಳುವುದು ಹೇಗೆ? ಮಹಿಳಾ ಪ್ರಶ್ನೆಯನ್ನು ಮಹಿಳೆ ಎಂಬ ಜೈವಿಕತೆಗೆ ಮಾತ್ರ ಸಂಬಂಧಿಸಿದ್ದಲ್ಲ ಎಂದು ವಿವರಿಸಿಕೊಳ್ಳುವುದು ಹೇಗೆ? ಅಧಿಕಾರ ರಾಜಕಾರಣದ ದಾಳಕ್ಕೆ ಹೆಣ್ಣು ಸತತ ಬಲಿಯೇ ಅಲ್ಲವೇ? ಮತೀಯವಾದಿ ಮನಸ್ಥಿತಿಯನ್ನು ಆವಾಹಿಸಿಕೊಂಡ, ಅತ್ಯಾಚಾರಿಯಾದ ಅಧೋಭ್ರಷ್ಟ ತಧೋಭ್ರಷ್ಟನಾದ ಸ್ವಾಮಿಯನ್ನು ಕಾಯುವ ತಡೆಗೋಡೆಯಂತೆ ವರ್ತಿಸುವ ವಿದ್ಯಾವಂತ ಮಹಿಳೆಯರನ್ನು; ಬಂಡವಾಳವಾದ ಚಾಲ್ತಿಗೆ ತಂದಿರುವ ಸ್ವಾತಂತ್ರ್ಯದ ಮಾದರಿಯನ್ನೇ ಆತ್ಯಂತಿಕ ಎಂದು ಭಾವಿಸಿ ಬಾಲಿಶವಾಗಿಯೂ ಸಿನಿಕವಾಗಿಯೂ ವರ್ತಿಸುವವರನ್ನು; ಕೋಮುವಾದದ ಯುದ್ಧೋನ್ಮಾದದ ಭಯಾನಕ ಪರಿಣಾಮಗಳನ್ನು ಗಮನಿಸದೆ ಅಧಿಕಾರ ಮೋಹಿಗಳಾದವರನ್ನು; ನಾವು ಮೇಲೆ ಬಂದಿದ್ದೇವೆಯಾದ್ದರಿಂದ ಆ ಕೆಳಗಿನ ಜಗತ್ತಿನಲ್ಲಿ ತರತಮಗಳೇ ಇಲ್ಲ ಎಂಬ ಭ್ರಮೆ ಬಿತ್ತುವವರನ್ನು . . . ಮಹಿಳಾ ಸಂವೇದನೆಯ ನಿಜದ ನೆಲೆಗೆ ತರುವುದಾದರೂ ಹೇಗೆ? ದಿಕ್ಕೇಡಿಯಾಗಿ ಕುಳಿತೇ ಇದ್ದೆ. ನನ್ನ ಸಲಹುವ ಸಾಂತ್ವನಿಸುವ ತಂಗಾಳಿಯಂತೆ ಮಕ್ಕಳು ಹಾಡುತ್ತಿದ್ದರು– ಹೆಣ್ಣುಭಾಷೆಯಲ್ಲಿ ಹಾಡು ಬರೆದ ಶರೀಫಜ್ಜನ – ಬಿದಿರು ನಾನಾರಿಗಲ್ಲದವಳು–ಹುಟ್ಟುತ್ತ ಹುಲ್ಲಾದೆ ಬೆಳೆಯುತ್ತ ಮರವಾದೆ. . . ಎಂಥದೋ ಆದಮ್ಯ ನಂಬಿಕೆ– ಕೊಳೆ ಕೊಚ್ಚಿ ಹೋಗಲೇಬೇಕು.

ಕೊಳೆ ಕೊಚ್ಚಿ ಹೋಗಬೇಕು

ಮಾರ್ಚ್ ತಿಂಗಳು ಬರುತ್ತಿದ್ದಂತೆ ಒಂದು ಅನೂಹ್ಯ ಚಡಪಡಿಕೆ ಶುರುವಾಗುತ್ತದೆ. ಹೂ ಬಿಡುವ ಮುಂಚೆ ಒರಟು ಮರದ ಕಾಂಡದಲ್ಲೂ ಸಳಬಳ ಜೀವರಸದ ಉಕ್ಕಂದವಿರಬಹುದಲ್ಲ– ಹಾಗೆ. ದಿನಬೆಳಗಾದರೆ, ದೇಹದಲ್ಲಿ ದೊಡ್ಡವರೂ ಮನಸ್ಸಿನಿಂದ ಚಿಕ್ಕವರೂ ಆಗಿರುವ ನೂರಾರು ಮಕ್ಕಳೊಂದಿಗೆ ಒಡನಾಡುವ ನನಗೆ 'ಮಹಿಳಾ ದಿನವನ್ನು' ಈ ಎಳೆಯರ ಮನಸ್ಸಿಗೆ ಮುಟ್ಟಿಸುವ ಹಾಗೆ ಆಚರಣೆ ಮಾಡುವುದು ಹೇಗೆ? ಎಂಬ ಪ್ರಶ್ನೆ ಗಾಢವಾಗಿ ಕಾಡುತ್ತಿರುತ್ತದೆ. ನನ್ನ ವಿದ್ಯಾರ್ಥಿ ಸಮುದಾಯದೊಂದಿಗೆ ನಡೆಸುವ ಒಂದು ಸಣ್ಣ ಅನುಸಂಧಾನ ಈ ಲೋಕದ ಯಾವುದೇ ಮಹತ್ಕಾರ್ಯಗಳಿಗಿಂತಲೂ ದೊಡ್ಡದು ಎಂಬ ನಂಬಿಕೆ ನನ್ನದು. ಹಳ್ಳಿಯ ಬಡ ವಿದ್ಯಾರ್ಥಿ–ವಿದ್ಯಾರ್ಥಿನಿಯರನ್ನು ಲಿಂಗನಿರಪೇಕ್ಷ ದೃಷ್ಟಿಕೋನದ ಪ್ರಬುದ್ಧರನ್ನಾಗಿ ರೂಪಿಸುವ ಹೊಣೆಗಾರಿಕೆಯನ್ನು ಹೆಗಲಿಗೇರಿಸಿಕೊಂಡು 'ನನ್ನ ಹೊರತು' ಇಲ್ಲೊಂದು ಹುಲ್ಲುಕಡ್ಡಿಯೂ ಅಲುಗಲಾರದು' ಎಂಬ ಭ್ರಮೆಯೇರಿಸಿಕೊಂಡು ಒದ್ದಾಡುವುದೂ ಇದೆ. ನನ್ನ ಮೂರ್ಖತನಕ್ಕೆ ನಾನೇ ಬೆಚ್ಚಿ ಸುತ್ತಲ ಸಮುದಾಯದೊಂದಿಗೆ ಸಹಚಾರವನ್ನು ಏರ್ಪಡಿಸಿಕೊಳ್ಳುವುದೂ ಇದೆ. ಕಳೆದ 20 ವರ್ಷಗಳಿಂದ 'ಮಾರ್ಚ್ 8' ನನಗೆ ಬಗೆಬಗೆಯ ಅನುಭವಗಳನ್ನು ನೀಡಿದೆ. ಆದದ್ದಾಗಲಿ, ಮುಂದೆ ಎಂದಾದರೂ ಲಿಂಗಸೂಕ್ಷ್ಮತೆಯ ಕಾರ್ಯಕ್ರಮ ಮಾಡಿದರಾಯಿತು ಎಂದು ಕೊಡವಿಕೊಂಡು ಎದ್ದ ದಿನ, ಮಹಿಳಾ ದಿನಾಚಾರಣೆಯನ್ನು ನನ್ನ ಸಹೋದ್ಯೋಗಿಗಳೂ ವಿದ್ಯಾರ್ಥಿನಿಯರೂ ಸೇರಿ 'ಸಾರಿ ಡೇ', ಅಡುಗೆ ಸ್ಪರ್ಧೆ, ಕೇಶವಿನ್ಯಾಸ ಸ್ಪರ್ಧೆ ಹೀಗೆ ತರಹೇವಾರಿ ಸಂಭ್ರಮಿಸಿದ್ದೂ ಇದೆ. ಆಗೆಲ್ಲ ಮರಳಿ ಬಂದ ನನಗೆ, ಮನೆಯಲ್ಲೇ ದೆವ್ವ ಬಂದಿದ್ದು ಹೋದಷ್ಟು ಭಯವಾಗಿದೆ. ಸೂತ್ರವೇ ಕಾಣೆಯಾದ ಗಾಳಿಪಟ ಕಂಡ ಹಾಗೆ ತಬ್ಬಿಬ್ಬಾಗಿದೆ. ಅದಕ್ಕಾಗಿಯೇ ಈ ವರ್ಷ ಧಾರವಾಡದಲ್ಲೇ ವಿಚಾರ ಸಂಕಿರಣ ಇದ್ದರೂ, ಸಂಜೆಯ ಕಾರ್ಯಕ್ರಮಕ್ಕೆ ಬಂದರಾಯಿತು ಅಂತ ಗಟ್ಟಿ ಧೈರ್ಯ ಮಾಡಿ, ಕಾಲೇಜಿನಲ್ಲಿ ವಿದ್ಯಾರ್ಥಿಗಳೊಂದಿಗೆ ದಿನ ಕಳೆಯುವುದೇ ಎಂದು ತೀರ್ಮಾನಿಸಿದೆ.

ಒಂದು ಅತ್ಯುತ್ತಮ ಸಿನಿಮಾ ತೋರಿಸಿ, ಆ ಕುರಿತು ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲರನ್ನೂ ಒಳಗೊಂಡು ಸಂವಾದವನ್ನು ಏರ್ಪಡಿಸುವುದು ಎಂದು ವಿದ್ಯಾರ್ಥಿನಿಯರೊಂದಿಗೆ ಸಮಾಲೋಚಿಸಿ ನಿರ್ಣಯಿಸಿಯಾಯಿತು. ಲಿಂಗರಾಜಕಾರಣದಲ್ಲಿ ಪಳಗಿಹೋಗಿರುವ ವ್ಯವಸ್ಥೆ ಅಷ್ಟು ಸುಲಭವಾಗಿ ಸೋಲೊಪ್ಪಿಕೊಳ್ಳುವುದಿಲ್ಲ ಎನ್ನುವುದು ತಿಳಿದದ್ದೇ. ನಾವು ಮಾತನಾಡಬೇಕಾದದ್ದು ನಮ್ಮ ಗಂಡುಮಕ್ಕಳೊಂದಿಗೆ. ತುಂಬ ಒಳ್ಳೆಯವರಾಗಿರುವ ಮಕ್ಕಳು ಕೆಟ್ಟ ಗುಣಗಳನ್ನು ಅಳವಡಿಸಿಕೊಳ್ಳುತ್ತಾರೆ. ಆ ನಂತರ ಸೇರುವ ಕಾಯಿಲೆಯದು, ಗುಣಪಡಿಸಲಾಗದ್ದೇನೂ ಅಲ್ಲ– ಎಂಬ ಗಾಢ ನಂಬಿಕೆಯಿಂದಲೇ ಮುಂದುವರಿಯಬೇಕಿತ್ತು. ಸಮಸ್ಯೆಯೆಂದರೆ, ಸರಕಾರಿ ಕಾಲೇಜುಗಳಲ್ಲಿಯ ಸೌಲಭ್ಯಗಳ ಕೊರತೆಯಿಂದಾಗಿ ನಾಲ್ಕುನೂರು ವಿದ್ಯಾರ್ಥಿಗಳಿಗೆ ಒಂದು ಸಿನಿಮಾ ತೋರಿಸುವುದು ಆಗದ ಮಾತಾಯಿತು. ಈಗ, ವಿದ್ಯಾರ್ಥಿಗಳಿಗೆ ಮಹಿಳಾ ಸಂಬಂಧಿತ ವಿಷಯವೊಂದರ ಚರ್ಚಾಸ್ಪರ್ಧೆಯನ್ನು ಏರ್ಪಡಿಸುವುದು ಮತ್ತು ಎಲ್ಲ ವಿದ್ಯಾರ್ಥಿಗಳೂ ಅದರಲ್ಲಿ ಕೇಳುಗರಾಗಿಯಾದರೂ ಪಾಲ್ಗೊಳ್ಳುವಂತೆ ನೋಡಿಕೊಳ್ಳುವುದು ಎಂದಾಯಿತು. ಹಿಂದಿನ ಎರಡು ದಿನ ಪ್ರತಿಯೊಂದು ಕ್ಲಾಸು ಕ್ಲಾಸುಗಳಿಗೆ ಸುತ್ತಿ, ಯಾಕಾಗಿ ವಿದ್ಯಾರ್ಥಿಗಳೂ ಭಾಗವಹಿಸಬೇಕು? ಎಂಬ ಸ್ಪಷ್ಟನೆಯನ್ನು ಕೊಡುವುದು ಅಂತರಾಷ್ಟ್ರೀಯ ಮಹಿಳಾ ದಿನಾಚಾರಣೆಯ ಮಹತ್ವದ ಬಗ್ಗೆ ಎರಡು ಮಾತಲ್ಲಿ ಮನವರಿಕೆ ಮೂಡಿಸುವುದು ಹೀಗೆ ... ಎಷ್ಟು ದಣಿವಾಗಿತ್ತೆಂದರೆ, ಏಯ್, ನಿಂಗೆ ವಯಸ್ಸಾಯ್ತು' ಎಂದು ಕಾಲುಗಳು ಮಾತನಾಡತೊಡಗಿದ್ದವು. ಹಾಳು ಹುರುಪೆಂದರೆ. . . ಕಾಲಿನ ಮಾತು ಕಿವಿಗೆ ಕೇಳಲಿಲ್ಲ.

ಅಂತೂ, ಗಂಡು–ಹೆಣ್ಣು ಎಂಬ ಭೇದದ ಹಂಗು ಹರಿದುಕೊಂಡು ಡಿಬೇಟ್‌ಗೆ ಹೆಸರು ಕೊಟ್ಟವರು 32 ಜನ. ಅಂದು ಬೆಳಗಿನ ಅಸೆಂಬ್ಲಿ ಮುಗಿದ ತಕ್ಷಣ ಕಾರಿಡಾರ್‌ನ ಮೂರು ದಿಕ್ಕುಗಳಲ್ಲಿ ವಿದ್ಯಾರ್ಥಿ–ವಿದ್ಯಾರ್ಥಿನಿಯರು ಕನ್ನಡ ಶಾಲೆಯ ಮಕ್ಕಳ ಹಾಗೆ ನೆಲಕ್ಕೆ ಕೂತರು. ಸುಮಾರು ಮೂರು ತಾಸು 'ಮಹಿಳಾ ಸಮಾನತೆ ಸಾಧ್ಯವಾಗಿದೆಯೇ?' ಎಂಬ ವಿಷಯದ ಪರ–ವಿರೋಧವಾಗಿ ಮಾತನಾಡಿದರು. ತುಂಬ ಸಮಾಧಾನ ವಿಷಯವೆಂದರೆ, ನಾವುಗಳು ನಿರೀಕ್ಷೆ ಮಾಡಿರದಷ್ಟು ಪ್ರಬುದ್ಧವಾಗಿ ಅವರ ಚಿಂತನೆಗಳಿದ್ದವು. ಪರ–ವಿರೋಧಕ್ಕೆ ವಿದ್ಯಾರ್ಥಿ–ವಿದ್ಯಾರ್ಥಿನಿ ಎಂಬ ವರ್ಗೀಕರಣವೇನೂ ಇರಲಿಲ್ಲ. ಅಂಕಿ–ಅಂಶಗಳ ಮೂಲಕ, ತಮ್ಮ ಅನುಭವಗಳ ಮೂಲಕ ಅವರು ತಮ್ಮ ಅಭಿಪ್ರಾಯವನ್ನು ಹಂಚಿಕೊಂಡರು. ಮದುವೆಯಾದವರು, ಅನುದಿನ ಕೌಟುಂಬಿಕ ಕಲಹಗಳಲ್ಲಿ ನುಗ್ಗಾಗುವವರು, ವಿಚ್ಛೇದಿತರು, ಪ್ರೇಮ ಸಾಫಲ್ಯದಲ್ಲಿ ಮುಂದಡಿಯಿಟ್ಟು ಕುಟುಂಬ ನಿರ್ವಹಣೆಯ ಹೊಸ ಸಮಸ್ಯೆಯಲ್ಲಿ ಸಿಲುಕಿಕೊಂಡವರು, ಪ್ರೇಮ ವಿಫಲದ ಬೆಂಕಿಯಲ್ಲಿ ಬೆಂದವರು ಓಹ್. . ಒಬ್ಬೊಬ್ಬರದು ಒಂದೊಂದಲ್ಲ ಹಲವೆಂಟು ಕಥೆ. ಯೋಚಿಸುವುದು ಅದರಲ್ಲೂ ಮಹಿಳಾ ವಿಷಯದ ಕುರಿತು ಸಾಮೂಹಿಕವಾಗಿ ಯೋಚಿಸುವುದು ಖಂಡಿತಾ ಚರಿತ್ರೆಯಲ್ಲೊಂದು ಅಪರೂಪದ ಗಳಿಗೆ ಅನ್ನಿಸುವ ಧನ್ಯತೆಯದು. ಅಂತೂ ಚರ್ಚೆ ಮುಕ್ತಾಯವಾಗುತ್ತಿದ್ದಂತೆ – ಮಹಿಳಾ ಸಮಾನತೆಯ ಒಳ–ಹೊರಗುಗಳ ದ್ವಂದ್ವ, ಕಾಣುವ–ಕಾಣದ ಸತ್ಯದ ವೈರುಧ್ಯಗಳು, ಸಮಾನತೆ ಸಾಧ್ಯವಾಗಬೇಕಿದ್ದುದು ಎಲ್ಲಿ – ಹೇಗೆ ಎಂಬ ತಿಳಿವು ಬೆಳಗುತ್ತಿತ್ತು. ಅಂದಿನ ಸುಡುಬಿಸಿಲಿಗೂ ಚಿಂತನೆಯ ಆರ್ದ್ರತೆ ತಟ್ಟಿ ತಂಪು ಸವರಿತ್ತು.



ನಮ್ಮ ಸಹೋದ್ಯೋಗಿಗಳು ಮಾತನಾಡತೊಡಗಿದರು. ಒಬ್ಬರಂತೂ ಎಲ್ಲಿ ಸಮಾನತೆಯಿಲ್ಲ? ಎಲ್ಲ ಇದೆ. ಎಲ್ಲ ನಮ್ಮ ಕೈಯಲ್ಲೇ ಇದೆ ಎಂದು ಪೆಟ್ರಿಯಾರ್ಕಿಯಲ್ಲೂ ಬೆಳೆದು ನಿಂತ ಮಹಿಳಾ ವ್ಯಕ್ತಿತ್ವಗಳನ್ನು ಉದಾಹರಿಸಿದರು. ಕೊನೆಗೆ 33% ಇಲ್ಲ ಎನ್ನುವುದ್ಯಾಕೆ? ಚುನಾವಣೆಗೆ ನಿಂತ ಮಹಿಳೆಗೆ ನಾವೆಲ್ಲ ಓಟು ಹಾಕುವ ಮೂಲಕ, ಪಕ್ಷಬೇಧವಿಲ್ಲದೆ. . . . ಎಂದೆಲ್ಲ ಹೇಳಿದರು. ಓಹ್! ಮೇಲ್ಜಾತಿ ವರ್ಗಗಳ ಈ ಹೇರುವಿಕೆಯ ಪ್ರಾಬಲ್ಯ ಅದೆಷ್ಟು ಬಲಿಷ್ಠ. ಮಹಿಳಾ ಮೀಸಲಾತಿಯ ಪ್ರಶ್ನೆಯನ್ನು ಪಕ್ಷ ರಾಜಕಾರಣದ ಭೂತಕ್ಕೆ ಬಲಿ ಹಾಕಿದರೆ ಸಾಧಿತವಾದದ್ದೇನು? ಮತ್ತೀಗ, ಮಹಿಳೆ, ಮಹಿಳಾ ಸಂವೇದನೆ ಎನ್ನುವುದನ್ನು ಮರುನಿರ್ವಚನೆ ಮಾಡಿಕೊಳ್ಳಬೇಕಾದ ಮೊದಲ ಪಾಠಕ್ಕೆ ಪ್ರವೇಶಿಸಬೇಕಿದೆಯಲ್ಲವೇ? ಮಹಿಳೆ ಎಂಬ ಜೈವಿಕತೆಯು ಪಿತೃ ಪ್ರಧಾನ ನಿಲುವುಗಳಿಂದ ಕೂಡಿ ತನ್ನ ಸಂವೇದನೆಯ ಹಂತದಲ್ಲಿಯೇ ಭ್ರಷ್ಟವಾಗಿರುವ ವಾಸ್ತವವನ್ನು ಅರಗಿಸಿಕೊಳ್ಳುವುದು ಹೇಗೆ? ಮಹಿಳಾ ಪ್ರಶ್ನೆಯನ್ನು ಮಹಿಳೆ ಎಂಬ ಜೈವಿಕತೆಗೆ ಮಾತ್ರ ಸಂಬಂಧಿಸಿದ್ದಲ್ಲ ಎಂದು ವಿವರಿಸಿಕೊಳ್ಳುವುದು ಹೇಗೆ? ಅಧಿಕಾರ ರಾಜಕಾರಣದ ದಾಳಕ್ಕೆ ಹೆಣ್ಣು ಸತತ ಬಲಿಯೇ ಅಲ್ಲವೇ? ಮತೀಯವಾದಿ ಮನಸ್ಥಿತಿಯನ್ನು ಆವಾಹಿಸಿಕೊಂಡ, ಅತ್ಯಾಚಾರಿಯಾದ ಅಧೋಭ್ರಷ್ಟ ತಧೋಭ್ರಷ್ಟನಾದ ಸ್ವಾಮಿಯನ್ನು ಕಾಯುವ ತಡೆಗೋಡೆಯಂತೆ ವರ್ತಿಸುವ ವಿದ್ಯಾವಂತ ಮಹಿಳೆಯರನ್ನು; ಬಂಡವಾಳವಾದ ಚಾಲ್ತಿಗೆ ತಂದಿರುವ ಸ್ವಾತಂತ್ರ್ಯದ ಮಾದರಿಯನ್ನೇ ಆತ್ಯಂತಿಕ ಎಂದು ಭಾವಿಸಿ ಬಾಲಿಶವಾಗಿಯೂ ಸಿನಿಕವಾಗಿಯೂ ವರ್ತಿಸುವವರನ್ನು; ಕೋಮುವಾದದ ಯುದ್ಧೋನ್ಮಾದದ ಭಯಾನಕ ಪರಿಣಾಮಗಳನ್ನು ಗಮನಿಸದೆ ಅಧಿಕಾರ ಮೋಹಿಗಳಾದವರನ್ನು; ನಾವು ಮೇಲೆ ಬಂದಿದ್ದೇವೆಯಾದ್ದರಿಂದ ಆ ಕೆಳಗಿನ ಜಗತ್ತಿನಲ್ಲಿ ತರತಮಗಳೇ ಇಲ್ಲ ಎಂಬ ಭ್ರಮೆ ಬಿತ್ತುವವರನ್ನು . . . ಮಹಿಳಾ ಸಂವೇದನೆಯ ನಿಜದ ನೆಲೆಗೆ ತರುವುದಾದರೂ ಹೇಗೆ? ದಿಕ್ಕೇಡಿಯಾಗಿ ಕುಳಿತೇ ಇದ್ದೆ. ನನ್ನ ಸಲಹುವ ಸಾಂತ್ವನಿಸುವ ತಂಗಾಳಿಯಂತೆ ಮಕ್ಕಳು ಹಾಡುತ್ತಿದ್ದರು– ಹೆಣ್ಣುಭಾಷೆಯಲ್ಲಿ ಹಾಡು ಬರೆದ ಶರೀಫಜ್ಜನ – ಬಿದಿರು ನಾನಾರಿಗಲ್ಲದವಳು–ಹುಟ್ಟುತ್ತ ಹುಲ್ಲಾದೆ ಬೆಳೆಯುತ್ತ ಮರವಾದೆ. . . ಎಂಥದೋ ಆದಮ್ಯ ನಂಬಿಕೆ– ಕೊಳೆ ಕೊಚ್ಚಿ ಹೋಗಲೇಬೇಕು.

ಮುಂದಿನ ವರ್ಷ ಮಾರ್ಚ 8 ಕ್ಕೆ ಹೀಗೆ ಅಸೈದ್ಧಾಂತಿಕ ಆಲಾಪಗಳಿಗೆ, ತಪ್ಪು ಸಂದೇಶಗಳಿಗೆ ಅವಕಾಶ ಇಲ್ಲದ ಹಾಗೆ– ನಮ್ಮ ಮಕ್ಕಳ ಮನಸ್ಸಲ್ಲಿ ಲಿಂಗ ಸಮಾನತೆ ಹಿತ ಬೇರೂರುವ ಹಾಗೆ ಯೋಜಿಸಬೇಕು ನನ್ನೆದುರು ಪ್ರಬಲ ಎಳೆಯ ಮನಸ್ಸುಗಳಿವೆ. ●

ಲೋಕಸಭಾ ಚುನಾವಣೆ : ಒಂದು ನಿರ್ಣಾಯಕ ಸಮರ

- **ಮೋದಿ ಸರಕಾರದ ಜನವಿರೋಧಿ ಸ್ವರೂಪವನ್ನು ಬಯಲಿಗೆಳೆಯಬೇಕು**
- **ನಿಜವಾದ ಸಾಮಾಜಿಕ–ಆರ್ಥಿಕ ಪರ್ಯಾಯ ವೇದಿಕೆಯನ್ನು ರೂಪಿಸಬೇಕು**

ಮೋದಿ ಸರಕಾರದ ಸರ್ವತೋಮುಖ ವೈಫಲ್ಯಗಳ ಮೇಲೆ ಗಮನ ಕೇಂದ್ರೀಕರಿಸುತ್ತಲೇ ರಾಷ್ಟ್ರೀಯ ಭದ್ರತೆಯಂಥ ವಿಚಾರಗಳಲ್ಲೂ ಅದರ ಕಾರ್ಯವೈಖರಿಯನ್ನು ಪ್ರತಿಪಕ್ಷಗಳು ದಿಟ್ಟವಾಗಿ ಪ್ರಶ್ನಿಸಬೇಕಾಗಿದೆ. ಕಾಶ್ಮೀರ ಸಮಸ್ಯೆಯನ್ನು ರಾಜಕೀಯವಾಗಿ ನಿರ್ವಹಿಸುವಲ್ಲಿ ಮೋದಿ ಸರಕಾರದ ವೈಫಲ್ಯ ಮತ್ತು ಅಲ್ಲಿನ ಪರಿಸ್ಥಿತಿ ಹದಗೆಡುವಲ್ಲಿ ಅದರ ಪಾತ್ರ ಏನೆಂಬುದನ್ನು ಕೂಡ ಎತ್ತಿ ತೋರಿಸಬೇಕಾಗಿದೆ.



*** ಪ್ರಕಾಶ್ ಕಾರಟ್**

ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಯನ್ನು ಯಾವುದೇ ರಾಜಿಯಿಲ್ಲದೆ ರಕ್ಷಿಸುವ ಹಾಗೂ ಮೋದಿ ಸರಕಾರದ ಬಲಪಂಥೀಯ ಆರ್ಥಿಕ ನೀತಿಗಳು ಹಾಗೂ ಪ್ರತಿಗಾಮಿ ಸಾಮಾಜಿಕ ಕಣ್ಣೋಟಕ್ಕೆ ಒಂದು ನೈಜ ಪರ್ಯಾಯ ಒದಗಿಸುವ ಸಾಮಾಜಿಕ–ರಾಜಕೀಯ ಧೋರಣೆಗಳನ್ನು ರೂಪಿಸುವ ಒಂದು ಪರಿಣಾಮಕಾರಿ ಪರ್ಯಾಯ ವೇದಿಕೆಯನ್ನು ಪ್ರಸ್ತುತಪಡಿಸುವುದು ಅತ್ಯಗತ್ಯ. ಬಹಳಷ್ಟು ಜಾತ್ಯತೀತ ಪ್ರತಿಪಕ್ಷಗಳಲ್ಲಿ ಈ ಕೊರತೆಯಿದೆ. ಸಿಪಿಐ (ಎಂ) ಮತ್ತು ಎಡ ಪಕ್ಷಗಳು ಇದನ್ನು ಕೈಗೆತ್ತಿಕೊಳ್ಳಬೇಕು.

ಈಗಾಗಲೇ ಅಧಿಕೃತವಾಗಿ ಪ್ರಕಟಿಸಲಾಗಿರುವ 17ನೇ ಲೋಕಸಭೆ ಚುನಾವಣೆ, ಸ್ವತಂತ್ರ ಭಾರತದ ಇತಿಹಾಸದಲ್ಲಿ ತುಂಬಾ ಪರಿಣಾಮ ಬೀರಲಿರುವ ಚುನಾವಣೆ ಆಗಲಿದೆ. ಈ ಚುನಾವಣೆಯಲ್ಲಿ ಬಹಳಷ್ಟು ವಿಚಾರಗಳು ಪಣಕ್ಕಿವೆ. ಸಂವಿಧಾನದಲ್ಲಿ ಅಡಕವಾಗಿರುವಂಥ ಜಾತ್ಯತೀತ–ಪ್ರಜಾಸತ್ತಾತ್ಮಕ ಗಣರಾಜ್ಯದ ಭವಿಷ್ಯದ ಮೇಲೆ ಇದು ಪರಿಣಾಮ ಬೀರಲಿದೆ.

ಯಾವ ಮೂಲ ನೀತಿಗಳ ಆಧಾರದಲ್ಲಿ ಸಂವಿಧಾನ ನಿಂತಿದೆಯೋ ಅವುಗಳನ್ನು ಐದು ವರ್ಷಗಳ ಮೋದಿ ಆಡಳಿತ ಆಗಲೇ ದುರ್ಬಲಗೊಳಿಸಿದೆ. ಒಂದು ವೇಳೆ ಅಧಿಕಾರಕ್ಕೆ ಮರಳಲು ಬಿಜೆಪಿ ಯಶಸ್ವಿ ಆಗಿದ್ದೇ ಆದಲ್ಲಿ ಸರ್ವಾಧಿಕಾರಿ ಹಿಂದುತ್ವ ಪ್ರಭುತ್ವದ ಅಪಾಯ ದೇಶವನ್ನು ಕಾಡಲಿದೆ.

ಸಂವಿಧಾನದ ಪೀಠಿಕೆಯಲ್ಲಿ ಹೇಳಿರುವ ಒಂದು ಗಣರಾಜ್ಯದ ಕಣ್ಣೋಟ ಅಪಾಯದಲ್ಲಿರುವ ಇನ್ನೊಂದು ಸಂಗತಿಯಾಗಿದೆ. ಎಲ್ಲಾ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯ ಒದಗಿಸುವುದೇ ಆ ಮುನ್ನೋಟವಾಗಿದೆ. ಬಿಜೆಪಿ ಸರಕಾರ ನ್ಯಾಯದ ಈ ನೀತಿಯ ಗಂಭೀರ ಉಲ್ಲಂಘನೆಯ ವರ್ತನೆಯನ್ನು ತೋರಿದೆ. ಅದು ಒಂದು ಲೂಟಿಕೋರ ನವ–ಉದಾರವಾದಿ ಆಳ್ವಿಕೆಯನ್ನು ಹೇರಿದ್ದು, ಅದರಿಂದ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಗಳು ಹೆಚ್ಚಿವೆ, ಜನತೆಯ ಆರ್ಥಿಕ ಶೋಷಣೆಯನ್ನು ಅದು ಹೆಚ್ಚಿಸಿದೆ ಮತ್ತು ದಲಿತರು ಹಾಗೂ ಅಲ್ಪಸಂಖ್ಯಾತರನ್ನು ಸಾಮಾಜಿಕ ಮತ್ತು ರಾಜಕೀಯ ನ್ಯಾಯದಿಂದ ವಂಚಿಸಿದೆ.

ಕೃಷಿ, ಕೈಗಾರಿಕೆ, ವಾಣಿಜ್ಯ ಮತ್ತು ಉದ್ಯೋಗ– ಈ ಪ್ರತಿಯೊಂದು ಕ್ಷೇತ್ರದಲ್ಲಿ ಆರ್ಥಿಕತೆ ಗಂಭೀರ ಬಿಕ್ಕಟ್ಟಿನಿಂದ ನಲುಗುತ್ತಿರುವ ಸಂದರ್ಭದಲ್ಲಿ ಈ ಚುನಾವಣೆಗಳು ನಡೆಯುತ್ತಿವೆ.

ಆದ್ದರಿಂದ, ಜನರು ಮತ್ತು ಅವರ ಜೀವನಕ್ಕೆ ಸಂಬಂಧಪಟ್ಟ ಪ್ರಮುಖ ವಿಷಯಗಳ ಮೇಲೆ ಗಮನವನ್ನು ಕೇಂದ್ರೀಕರಿಸುವುದು ತುಂಬಾ ಅಗತ್ಯವಾಗಿದೆ. ಕೃಷಿ ಬಿಕ್ಕಟ್ಟು ರೈತರ ಜೀವನದೊಂದಿಗೆ ಚೆಲ್ಲಾಟವಾಡುತ್ತಿದೆ. ಕೇಂದ್ರೀಯ ಸಾಂಖ್ಯಿಕ ಕಚೇರಿಯ ಇತ್ತೀಚಿನ ಅಂಕಿಸಂಖ್ಯೆಗಳ ಪ್ರಕಾರ, 2018ರ ಕೊನೆಯ ತ್ರೈಮಾಸಿಕ (ಅಕ್ಟೋಬರ್–ಡಿಸೆಂಬರ್) ಅವಧಿಯಲ್ಲಿ ಕೃಷಿ ಆದಾಯ ಕಳೆದ 14 ವರ್ಷಗಳಲ್ಲೇ ಅತ್ಯಂತ ಕೆಳಮಟ್ಟಕ್ಕೆ ಕುಸಿದಿದೆ. ನೈಜ ಗ್ರಾಮೀಣ ಕೂಲಿ ಹೆಚ್ಚಳ 2014–18ರ ನಡುವೆ ಅತ್ಯಂತ ಕನಿಷ್ಟ ಅಂದರೆ 0.5 ಶೇಕಡಾದಷ್ಟಿದೆ.

ನಿರುದ್ಯೋಗದ ವಿಚಾರವನ್ನು ತೆಗೆದುಕೊಂಡರೆ, ಮೋದಿ ಸರಕಾರ ದಮನಿಸಿರುವ ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಅಧ್ಯಯನ ತೋರಿಸಿರುವಂತೆ ನಿರುದ್ಯೋಗದ ಪ್ರಮಾಣ ಕಳೆದ 45 ವರ್ಷಗಳಲ್ಲಿ ಅತ್ಯಂತ ಹೆಚ್ಚಿನ ಮಟ್ಟವನ್ನು ತಲುಪಿದೆ. ಭಾರತೀಯ ಆರ್ಥಿಕತೆಯ ಮೇಲುಸ್ತುವಾರಿ ಕೇಂದ್ರದ (ಸಿಎಂಐಇ) ಪ್ರಕಾರ ನಿರುದ್ಯೋಗ ದರ 2018ರ ಫೆಬ್ರವರಿಯ 5.9 ಶೇಕಡಾಕ್ಕೆ ಹೋಲಿಸಿದರೆ 2019ರ ಫೆಬ್ರವರಿಯಲ್ಲಿ 7.2 ಶೇಕಡಾಕ್ಕೆ ಏರಿದೆ. ಉದ್ಯೋಗ ಮತ್ತು ಜನತೆಯ ಜೀವನೋಪಾಯದ ಮೇಲೆ ನೋಟು ರದ್ದತಿ ಮಾಡಿದ ವಿನಾಶಕಾರಿ ಪರಿಣಾಮ ಏನೆಂಬುದನ್ನು ಬಯಲಿಗೆಳೆಯಬೇಕಾಗಿದೆ.

ಚಮಚಾ ಬಂಡವಾಳಶಾಹಿಯ ಪಾತ್ರ ಹೆಚ್ಚು ಹೆಚ್ಚು ಢಾಳಾಗಿದೆ, ರಫೆಲ್ ವ್ಯವಹಾರದಲ್ಲಿ ಇದನ್ನು ನೋಡಬಹುದಾಗಿದೆ ಒಬ್ಬ ಆಫ್‌ಸೆಟ್ ಪಾಲುದಾರನಾಗಿ ಅನಿಲ್ ಅಂಬಾನಿಗೆ ಭಾರಿ ಗುತ್ತಿಗೆ ದೊರೆತಿದೆ. ತಿರುವನಂತಪುರಂ ಸಹಿತ ಖಾಸಗೀಕರಣಕ್ಕೆ ತೆರೆದಿಟ್ಟ ಎಲ್ಲಾ ಆರು ವಿಮಾನ ನಿಲ್ದಾಣಗಳ ಗುತ್ತಿಗೆಯನ್ನು ಅದಾನಿ ಕಂಪೆನಿ ಪಡೆದಿರುವುದು ಶಾಮೀಲಿನ ಒಂದು ಸ್ಪಷ್ಟ ಸಂಕೇತವಾಗಿದೆ.

ಸಾರ್ವಜನಿಕ ರಂಗವನ್ನು ಕಳಚಿ ಹಾಕಲು ಮೋದಿ ಸರಕಾರ ವ್ಯವಸ್ಥಿತವಾಗಿ ಕ್ರಮಗಳನ್ನು ಕೈಗೊಂಡಿದೆ. ಅದು ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಗಳ ಖಾಸಗೀಕರಣಕ್ಕೆ ಪ್ರಯತ್ನಗಳನ್ನು ತೀವ್ರಗೊಳಿಸಿದ್ದು ಇದರಿಂದ ಜನತೆಯ ಮೇಲೆ ಗಂಭೀರ ಪರಿಣಾಮಗಳು ಉಂಟಾಗಲಿದೆ.

ಎಲ್ಲ ಸಾಂವಿಧಾನಿಕ ಸಂಸ್ಥೆಗಳು ಮತ್ತು ಪ್ರಜೆಗಳ ಜನತಾಂತ್ರಿಕ ಹಕ್ಕುಗಳ ಮೇಲೆ ಮೋದಿ ಆಡಳಿತದ ಕಳೆದ ಐದು ವರ್ಷಗಳಲ್ಲಿ ಆದಷ್ಟು ದಾಳಿಗಳನ್ನು ದೇಶ ಯಾವತ್ತೂ ಕಂಡಿರಲಿಲ್ಲ. ಈ ದಾಳಿಗಳು ಅಷ್ಟು ಗಂಭೀರವಾಗಿವೆ. ಅಲ್ಪಸಂಖ್ಯಾತರನ್ನು ಗುರಿ ಮಾಡಿ ಅವರನ್ನು ಕ್ರೂರ ಹಲ್ಲೆಗಳಿಗೆ ಒಳಪಡಿಸಲಾಗುತ್ತಿದ್ದು ಗಣರಾಜ್ಯದ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಆಧಾರದ ಮೇಲೆ ದಾಳಿ ನಡೆಯುತ್ತಿದೆ.

ಈ ಎಲ್ಲ ವಿಷಯಗಳನ್ನು ಕೈಗೆತ್ತಿಕೊಂಡು ಪ್ರತಿಪಕ್ಷಗಳು ಪರಿಣಾಮಕಾರಿ ಪ್ರಚಾರವನ್ನು ನಡೆಸಬೇಕಾಗಿದೆ. ಮೋದಿ ಸರಕಾರದ ಜನ–ವಿರೋಧಿ ಗುಣವನ್ನು ಅನಾವರಣಗೊಳಿಸಲು ಇದು ಅಗತ್ಯವಾಗಿದೆ.

ಸರಕಾರದ ಈ ಸರ್ವತೋಮುಖ ವೈಫಲ್ಯದ ಹಿನ್ನೆಲೆಯಲ್ಲಿ, ಬಿಜೆಪಿ, ಪುಲ್ವಾಮಾ ಭಯೋತ್ಪಾದಕ ದಾಳಿಯ ನಂತರ ಯುದ್ಧೋನ್ಮಾದಿ ದೇಶಭಕ್ತಿಯನ್ನು ಬಡಿದೆಬ್ಬಿಸುವ ಪ್ರಯತ್ನಕ್ಕೇ ಮೊರೆ ಹೊಕ್ಕಿದೆ. ಸಶಸ್ತ್ರ ಪಡೆಗಳು ನಡೆಸಿದ ಕಾರ್ಯಾಚರಣೆಗಳನ್ನು ತನ್ನ ರಾಜಕೀಯ ಲಾಭಕ್ಕಾಗಿ ಸಿನಿಕತನದಿಂದ ಬಳಸಿಕೊಳ್ಳುತ್ತಿದೆ. ಮೋದಿ ಮಾತ್ರವೇ ದೇಶವನ್ನು ರಕ್ಷಿಸಬಲ್ಲರು ಹಾಗೂ ಬಿಜೆಪಿ ಸರಕಾರ ಕೈಯಲ್ಲಿ ಮಾತ್ರವೇ ರಾಷ್ಟ್ರೀಯ ಭದ್ರತೆ ಸುರಕ್ಷಿತವಾಗಿದೆ ಎಂಬ ಆಲಾಪನೆ ನಡೆಸಿದೆ.

ಬಿಜೆಪಿ ಮತ್ತು ಅದರ ಕಾರ್ಪೊರೇಟ್ ಮಾಧ್ಯಮ ಬೆಂಬಲಿಗರ ಈ ಕರ್ಕಶ ಪ್ರಚಾರವು ಪ್ರತಿಪಕ್ಷಗಳ ಗಮನವನ್ನು ದಿಕ್ಚ್ಯುತಿಗೊಳಿಸಬಾರದು. ನಿರುದ್ಯೋಗ, ಕೃಷಿ ಬಿಕ್ಕಟ್ಟು, ಬೆಲೆಯೇರಿಕೆ, ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು, ಆದಿವಾಸಿಗಳ ಮೇಲಿನ ಹಲ್ಲೆಗಳು,



ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ದಾಳಿಗಳು ಮತ್ತು ಪ್ರಜಾಪ್ರಭುತ್ವ ಮೇಲಿನ ಸರ್ವಾಧಿಕಾರಶಾಹಿ ಆಕ್ರಮಣಗಳು– ಇವೇ ಮುಂತಾದ ಜನರಿಗೆ ಸಂಬಂಧಿಸಿದ ಜೀವನ್ಮರಣ ವಿಷಯಗಳನ್ನು ಮುಂದಿಟ್ಟುಕೊಂಡು ಅವುಗಳ ತೀಕ್ಷ್ಣವಾಗಿ ಪ್ರಚಾರ ನಡೆಸಬೇಕು.

ಮೋದಿ ಸರಕಾರದ ಸರ್ವತೋಮುಖ ವೈಫಲ್ಯಗಳ ಮೇಲೆ ಗಮನ ಕೇಂದ್ರೀಕರಿಸಬೇಕು ಎನ್ನುವುದೇನೋ ಹೌದು. ಹಾಗಂತ ಭಯೋತ್ಪಾದನೆ ಮತ್ತು ರಾಷ್ಟ್ರೀಯ ಭದ್ರತೆಯಂಥ ವಿಚಾರಗಳನ್ನು ಕಡೆಗಣಿಸಬೇಕೆಂದೇನೂ ಅದರ ಅರ್ಥವಲ್ಲ. ಗಡಿಯಾಚೆಯಿಂದ ಉಂಟಾಗುವ ಭಯೋತ್ಪಾದಕ ಅಪಾಯವನ್ನು ಎದುರಿಸಲು ಮಿಲಿಟರಿ ಮಧ್ಯಪ್ರವೇಶವೊಂದನ್ನೇ ಆಧರಿಸಿರುವುದು ಎಷ್ಟು ಪರಿಣಾಮಕಾರಿ ಎಂದು ಮೋದಿ ಸರಕಾರವನ್ನು ಪ್ರತಿಪಕ್ಷಗಳು ದಿಟ್ಟವಾಗಿ ಪ್ರಶ್ನಿಸಬೇಕು. 2016ರ ಸೆಪ್ಟೆಂಬರ್‌ನ ಸರ್ಜಿಕಲ್ ಸ್ಟ್ರೈಕ್ ನಂತರವೂ ಭಯೋತ್ಪಾದಕರ ದಾಳಿಗಳು ಏಕೆ ಕೊನೆಗೊಳ್ಳಲಿಲ್ಲ?. ಅದರ ನಂತರ, ಪುಲ್ವಾಮಾದಲ್ಲಿ ಅತ್ಯಂತ ಘೋರ ಭಯೋತ್ಪಾದಕ ದಾಳಿ ನಡೆದಿದೆ. ಬಾಲಾಕೋಟ್ ಮೇಲಿನ ದಾಳಿಯಿಂದಲೂ ಉದ್ದೇಶ ಈಡೇರಿದೆಯೇ?.

ಎಲ್ಲಕ್ಕಿಂತ ಹೆಚ್ಚಾಗಿ, ಮೋದಿ ಸರಕಾರ ರಫೇಲ್ ಒಪ್ಪಂದ ನಡೆಸಿದ ರೀತಿ ಹಾಗೂ ಚಮಚಾ ಬಂಡವಾಳಶಾಹಿಯ ಹಿತಗಳನ್ನು ಪ್ರೋತ್ಸಾಹಿಸಿದ ಪರಿಯು ಬಿಜೆಪಿ ಸರಕಾರ ಹೇಗೆ ರಾಷ್ಟ್ರೀಯ ಭದ್ರತೆಯ ಪ್ರಶ್ನೆಯಲ್ಲಿ ರಾಜಿಗಿಳಿದಿದೆ ಎನ್ನುವುದಕ್ಕೆ ನಗ್ನ ಸಾಕ್ಷಿಯಾಗಿದೆ.

ಅಲ್ಲದೆ, ಕಾಶ್ಮೀರ ಸಮಸ್ಯೆಯನ್ನು ರಾಜಕೀಯವಾಗಿ ನಿರ್ವಹಿಸುವಲ್ಲಿ ಮೋದಿ ಸರಕಾರದ ವೈಫಲ್ಯ ಮತ್ತು ಅಲ್ಲಿನ ಪರಿಸ್ಥಿತಿ ಹದಗೆಡುವಲ್ಲಿ ಅದರ ಪಾತ್ರ ಏನೆಂಬುದನ್ನು ಕೂಡ ಎತ್ತಿ ತೋರಿಸಬೇಕಾಗಿದೆ.

ಪ್ರಜಾಪ್ರಭುತ್ವ ಮತ್ತು ಜಾತ್ಯತೀತತೆಯನ್ನು ಯಾವುದೇ ರಾಜಿಯಿಲ್ಲದೆ ರಕ್ಷಿಸುವ ಹಾಗೂ ಮೋದಿ ಸರಕಾರದ ಬಲಪಂಥೀಯ ಆರ್ಥಿಕ ನೀತಿಗಳು ಹಾಗೂ ಪ್ರತಿಗಾಮಿ ಸಾಮಾಜಿಕ ಕಣ್ಣೋಟಕ್ಕೆ ಒಂದು ನೈಜ ಪರ್ಯಾಯ ಒದಗಿಸುವ ಸಾಮಾಜಿಕ–ರಾಜಕೀಯ ಧೋರಣೆಗಳನ್ನು ರೂಪಿಸುವ ಒಂದು ಪರಿಣಾಮಕಾರಿ ಪರ್ಯಾಯ ವೇದಿಕೆಯನ್ನು ಪ್ರಸ್ತುತಪಡಿಸುವುದು ಅತ್ಯಗತ್ಯ.

ಬಹಳಷ್ಟು ಜಾತ್ಯತೀತ ಪ್ರತಿಪಕ್ಷಗಳಲ್ಲಿ ಈ ಕೊರತೆಯಿದೆ. ಸಿಪಿಐ (ಎಂ) ಮತ್ತು ಎಡ ಪಕ್ಷಗಳು ಇದನ್ನು ಕೈಗೆತ್ತಿಕೊಳ್ಳಬೇಕು. ಅವುಗಳು ಇಂಥ ಪರ್ಯಾಯ ವೇದಿಕೆಯನ್ನು ಮುಂದಿಟ್ಟು ಇತರೆ ಎಲ್ಲಾ ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಅದರ ಸುತ್ತ ಅಣಿನೆರೆಯಸಬೇಕು.

ಅನು: ವಿಶ್ವ

ಇದೀಗ ಭಾರತ v/s ಬಿಜೆಪಿ" –ಸೀತಾರಾಂ ಯೆಚುರಿ



17ನೇ ಲೋಕಸಭಾ ಚುನಾವಣೆಯ ಪ್ರಕ್ರಿಯೆ ಆರಂಭವಾಗಿದೆ. ಈ ಕುರಿತಂತೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿಯವರ ಟ್ವಿಟರ್ ಟಿಪ್ಪಣಿ :

"ಸಾರ್ವತ್ರಿಕ ಚುನಾವಣೆಗಳ ಪ್ರಕಟಣೆಯೊಂದಿಗೆ ಮಾದರಿ ನೀತಿ ಸಂಹಿತೆ ಜಾರಿಗೆ ಬಂದಿದೆ. ಇದರೊಂದಿಗೆ ಮೋದಿ ಸರಕಾರ ಮಾಡುತ್ತಿರುವ ಸರಕಾರೀ ಸಂಪನ್ಮೂಲಗಳ ಅನ್ಯಾಯಪೂರ್ಣ ಬಳಕೆ ಕೊನೆಗೊಳ್ಳುತ್ತಿದೆ. ಚುನಾವಣಾ ಆಯೋಗ ಮುಕ್ತ, ನ್ಯಾಯಯುತ ಮತ್ತು ಸುರಕ್ಷಿತ ಚುನಾವಣೆಗಳನ್ನು ನಡೆಸುತ್ತದೆ, ಮುಂದಿನ ಸರಕಾರದತ್ತ ಒಂದು ಸುಗಮ ಪರಿವರ್ತನೆಯನ್ನು ಸಾಧ್ಯಗೊಳಿಸುತ್ತದೆ ಎಂಬ ವಿಶ್ವಾಸ ಜಾತ್ಯತೀತ, ಪ್ರಜಾಪ್ರಭುತ್ವವಾದಿ ಭಾರತಕ್ಕೆ ಇದೆ.

ಈ ಸರಕಾರ ತಂದಿರುವ ಅಪಾರದರ್ಶಕ ಚುನಾವಣಾ ಬಾಂಡುಗಳಿಂದಾಗಿ ಮತ್ತು ಆಳುವ ಪಕ್ಷದ ವಿಪರೀತ ಚುನಾವಣಾ ವೆಚ್ಚಗಳಿಂದಾಗಿ ಚುನಾವಣೆಯಲ್ಲಿ ಹಣಶಕ್ತಿಯ ಬಳಕೆಯ ಬಗ್ಗೆ ಗಂಭೀರ ಆತಂಕಗಳಿವೆ. ಇದರ ನಿಕಟ ಪರೀಕ್ಷಣಮತ್ತು ಚುನಾವಣಾ ಪ್ರಕ್ರಿಯೆಯ ಸಮಗ್ರತೆಯನ್ನು ಕಾಯ್ದುಕೊಳ್ಳುವದು ಬಹಳ ಮಹತ್ವದ್ದಾಗಿದೆ.

ಬಂಗಾಲದಲ್ಲಿ, ಕಳೆದ ಕೆಲವು ಚುನಾವಣೆಗಳಲ್ಲಿ, ವ್ಯಾಪಕ ಹಿಂಸಾಚಾರ ಮತ್ತು ಬೆದರಿ–ಕೆ ಕಳವಳ ಉಂಟು ಮಾಡಿತ್ತು. ಸ್ಥಳೀಯ ಚುನಾವಣೆಗಳಲ್ಲಿ ಆದಂತೆ ಪ್ರಜಾಪ್ರಭುತ್ವದ ಧ್ವಂಸ ನಡೆಯದಂತೆ ಚುನಾವಣಾ ಆಯೋಗ ವಿಶೇಷ ಗಮನ ನೀಡಬೇಕಾಗಿದೆ. ಪ್ರತಿಯೊಬ್ಬ ಮತದಾರರ ಮತದಾನದ ಪಾವಿತ್ರ್ಯತೆಯೇ ನಮ್ಮ ಗಣತಂತ್ರವನ್ನು ಕಾಯುವಂತದ್ದು.

ಜಮ್ಮು ಮತ್ತು ಕಾಶ್ಮೀರದ ಸುರಕ್ಷತೆಯ ಪರಿಸ್ಥಿತಿ ಲೋಕಸಭಾ ಚುನಾವಣೆಗಳನ್ನು ನಡೆಸಲು ಚೆನ್ನಾಗಿದೆ; ಆದರೆ ಈಗಾಗಲೇ ನಡೆಯಬೇಕಾಗಿದ್ದ ವಿಧಾನಸಭಾ ಚುನಾವಣೆಗಳಿಗೆ ಸೂಕ್ತವಾಗಿಲ್ಲ ಹೇಗೆ ಎಂಬುದು ದಿಗ್ಭ್ರಮೆಗೊಳಿಸುವ ಸಂಗತಿ. ಇದರಲ್ಲೇನಾದರೂ ಕುಟಿಲ ಉದ್ದೇಶವಿದೆಯೇ?

ಈ ಸಾರ್ವತ್ರಿಕ ಚುನಾವಣೆಗಳನ್ನು ಕುರಿತಂತೆ ಸಿಪಿಐ(ಎಂ)ನ ಕಾರ್ಯತಂತ್ರವನ್ನು ಪಕ್ಷ ಈಗಾಗಲೇ ಸ್ಪಷ್ಟವಾಗಿ ರೂಪಿಸಿದೆ: ನಮ್ಮ ಆದ್ಯತೆಗಳು

–ಬಿಜೆಪಿ ಮೈತ್ರಿಕೂಟವನ್ನು ಸೋಲಿಸುವುದು;

ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಬಲವರ್ಧನೆ; ಮತ್ತು

ಕೇಂದ್ರದಲ್ಲಿ ಒಂದು ಪರ್ಯಾಯ ಜಾತ್ಯತೀತ ಸರಕಾರದ ರಚನೆ.

ಈ ಚುನಾವಣೆಗಳಲ್ಲಿ ಭಾರತೀಯರು ತಮ್ಮ ಜೀವನಾಧಾರಗಳ ಮೇಲಿನ ದಾಳಿಗಳ ವಿರುದ್ಧ ಮತ ಚಲಾಯಿಸುತ್ತಾರೆ; ಸಾಮಾಜಿಕ ಸಾಮರಸ್ಯವನ್ನು ಹರಿದುಹಾಕುತ್ತಿರುವುದರ ವಿರುದ್ಧ ಮತ್ತು ಮಹೋನ್ನತ ಮಾನವೀಯ ಸಂಬಂಧಗಳನ್ನು ಕುಲಗೆಡಿಸುತ್ತಿರುವುದರ ವಿರುದ್ಧ ಮತ ನೀಡಲಿದ್ದಾರೆ.

ಇದೀಗ ಭಾರತ v/s ಬಿಜೆಪಿ".

ಹಾಸ್ಟೆಲ್ ಹೊರಗುತ್ತಿಗೆ ನೌಕರರಿಗೆ ಮುಖ್ಯಮಂತ್ರಿ ಭರವಸೆ



"ನಾನು ಬಡವರ ಪರವಾಗಿ ಕೆಲಸ ಮಾಡಲು ಈ ಜಾಗದಲ್ಲಿ ಕುಳಿತಿದ್ದೇನೆ. ನಿಮ್ಮ ಸಮಸ್ಯೆಗಳು ಏನೇ ಇರಲಿ. ಅವುಗಳನ್ನು ಶಾಶ್ವತವಾಗಿ ಪರಿಹಾರ ಮಾಡಿಕೊಡುತ್ತೇನೆ" ಎಂದು ಮುಖ್ಯ ಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಭರವಸೆ ನೀಡಿದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಾರ್ಚ್ 8 ರಂದು ಶುಕ್ರವಾರ, ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದ ವತಿಯಿಂದ ಆಯೋಜಿಸಿದ್ದ ಕೃತಜ್ಞತಾ ಸಮಾವೇಶದಲ್ಲಿ ಸನ್ಮಾನ ಸ್ವೀಕರಿಸಿ ಅವರು ಮಾತನಾಡುತ್ತಿದ್ದರು.

ಅಧಿಕಾರಿಗಳು ತೆಗೆದುಕೊಳ್ಳುವ ಕೆಲವು ತೀರ್ಮಾನಗಳಿಂದ ನಿಮ್ಮ ಬದುಕು ಬೀದಿಗೆ ಬರುವ ವಾತಾವರಣವೇನಿದೆ, ಅದರ ಹಿನ್ನೆಲೆಯಲ್ಲಿ ನಾನು ನಿಮ್ಮ ಪರವಾಗಿ ಸಣ್ಣ ತೀರ್ಮಾನವನ್ನು ತೆಗೆದುಕೊಂಡಿದ್ದೇನೆ. ಇವತ್ತು ನಿಮ್ಮ ಸಮಸ್ಯೆಗಳನ್ನು ಅರಿತುಕೊಂಡಿದ್ದೇನೆ. ಕೆಲವು ತಪ್ಪು ನಿರ್ಧಾರಗಳು ರಾಜ್ಯದಲ್ಲಾಗಿವೆ. ನಿಮಗೆ ಕೊಡುವಂತಹ ಭತ್ತೆಗಳಲ್ಲೂ ಸಮಸ್ಯೆಯಾಗಿದೆ. ಬಿಸಿಯೂಟ, ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರ ಸಮಸ್ಯೆಗಳನ್ನೂ ಅರಿತುಕೊಂಡಿದ್ದೇನೆ. ಆದರೆ ಒಂದೇ ಬಾರಿ ಎಲ್ಲ ವಿಷಯಗಳ ಬಗ್ಗೆ ಪರಿಹಾರ ಕಲ್ಪಿಸಬೇಕಾದರೆ ಬೇಕಾಗುವ ದೊಡ್ಡ ಮೊತ್ತದ ಹಣವನ್ನು ಒಂದೇ ಸಲ ಹೊಂದಿಸಿಕೊಳ್ಳುವುದು ಕಷ್ಟದ ಕೆಲಸ ಎಂದು ಹೇಳಿದರು.

ಇವತ್ತು ರೈತರ ಸಾಲಮನ್ನಾ ಮಾಡಬೇಕಾದ ಅನಿವಾರ್ಯ ಪರಿಸ್ಥಿತಿಯಲ್ಲಿ ದೊಡ್ಡ ಸವಾಲನ್ನು ಸ್ವೀಕಾರ ಮಾಡಿದ್ದೇನೆ. ಈ ಒಂದು ವರ್ಷದಲ್ಲಿ ರೈತರ ಸಂಪೂರ್ಣ ಸಾಲಮನ್ನಾ ಆದಮೇಲೆ ಮುಂದಿನ ವರ್ಷದಿಂದ ಸ್ವಲ್ಪ ಆರ್ಥಿಕವಾಗಿ ಸಬಲರಾದ ಬಳಿಕ ಈ ರೀತಿ ಹೊರಗುತ್ತಿಗೆ ಕೆಲಸ ಮಾಡುವವರು, ನಿಮ್ಮ ನಿಮ್ಮ ಸೇವಾ ಭದ್ರತೆಯಲ್ಲಿ ಇರುವಂತಹ ಸಮಸ್ಯೆಗಳಿಗೆ ಪರಿಹಾರ ತಂದು ಕೊಡುತ್ತೇನೆ. ನಿಮ್ಮಗಳ ಆಶೀರ್ವಾದದಿಂದ ಸರ್ಕಾರ ಇನ್ನೂ ನಾಲ್ಕು ವರ್ಷ ಇರುತ್ತದೆ. ಏನೂ ಸಮಸ್ಯೆಗಳಾಗಲ್ಲ.



ನಿಮ್ಮಂತಹ ಕುಟುಂಬಗಳಿಗೆ ರಾಜ್ಯದಲ್ಲಿ ಶಾಶ್ವತವಾಗಿ ನೆಲೆಯನ್ನು ತಂದುಕೊಡಬೇಕೆಂಬುದು ನನ್ನ ಆಶಯವಾಗಿದೆ. ಮುಂದಿನ ದಿನಗಳಲ್ಲಿ ಯಾವುದೇ ಸಮಸ್ಯೆಯಾಗದಂತೆ ಸರಿಪಡಿಸಿಕೊಡುವುದು ನನ್ನ ಜವಾಬ್ದಾರಿ. ಸದ್ಯಕ್ಕೆ ಮತ್ತೆ 6 ತಿಂಗಳವರೆಗೆ ನಿಮ್ಮ ಸೇವೆಯನ್ನು ಮುಂದುವರೆಸಲಾಗಿದೆ. ಮುಂದಿನ ನಡೆಗಳ ಬಗ್ಗೆ ಆರ್ಥಿಕ ಇಲಾಖೆ ಅಧಿಕಾರಿಗಳ ಜತೆ ಚರ್ಚೆ ಮಾಡಿದ್ದೇನೆ. ಈ ಹಿಂದಿನ ಸರ್ಕಾರದಲ್ಲಿ ನೇರ ನೇಮಕಾತಿ ಮೂಲಕ ಕಾಯಂ ನೌಕರರನ್ನು ತೆಗೆದುಕೊಂಡದ್ದರಿಂದ ಹೊರಗುತ್ತಿಗೆ ನೌಕರರಿಗೆ ಸಮಸ್ಯೆಯಾಗಿದೆ. ಇಲ್ಲಿ ಮಾನವೀಯತೆಯ ಪ್ರಶ್ನೆಯಿದೆ. ಇಲ್ಲಿ ಕಾನೂನಿನ ಪ್ರಶ್ನೆಯಲ್ಲ. ಹೀಗಾಗಿ ಆತಂಕ ಪಡುವುದು ಬೇಡ. ನಿಮ್ಮ ಸಮಸ್ಯೆಗಳಿಗೆ ಶಾಶ್ವತವಾಗಿ ಪರಿಹಾರ ಕೊಡುತ್ತೇನೆ ಎಂದು ಹೇಳಿದಾಗ ಉಪಸ್ಥಿತರಿದ್ದ ಸಾವಿರಾರು ನೌಕರರು ಹರ್ಷೋದ್ಗಾರ ವ್ಯಕ್ತಪಡಿಸಿದರು.

ಇದಕ್ಕೂ ಮೊದಲು, ಕರ್ನಾಟಕ ರಾಜ್ಯ ಸರ್ಕಾರಿ ಹಾಸ್ಟೆಲ್ ಮತ್ತು ವಸತಿ ಶಾಲಾ ಹೊರಗುತ್ತಿಗೆ ನೌಕರರ ಸಂಘದ ಅಧ್ಯಕ್ಷ ನಿತ್ಯಾನಂದ ಸ್ವಾಮಿ ಮಾತನಾಡುತ್ತಾ ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಸಮಾಜ ಕಲ್ಯಾಣ ಇಲಾಖೆಯಲ್ಲಿ ನೇರ ನೇಮಕಾತಿ ಮೂಲಕ ಕಾಯಂ ನೌಕರರನ್ನು ನೇಮಿಸಲು ಮುಂದಾದಾಗ ಸುಮಾರು 5000 ಹೊರಗುತ್ತಿಗೆ ನೌಕರರು ಕೆಲಸ ಕಳೆದುಕೊಳ್ಳುವ ಅಪಾಯ ಎದುರಾಯಿತು. ಹೊರಗುತ್ತಿಗೆ ನೌಕರರು ಆತಂಕಪಟ್ಟು ಬೆಂಗಳೂರಿಗೆ ಧಾವಿಸಿ ಬಂದು 8 ದಿನ ಮತ್ತು 8 ರಾತ್ರಿ ಸಾಮೂಹಿಕ ಧರಣಿ ನಡೆಸಿದಾಗ ನೌಕರರ ಮುಖ್ಯವಾಗಿ ಮಹಿಳಾ ನೌಕರರ ಗೋಳು ನೋಡಿ ಮನಮರುಗಿ ಮುಖ್ಯಮಂತ್ರಿ ಕುಮಾರಸ್ವಾಮಿಯವರು ಮರುದಿನದಿಂದಲೇ ಯಥಾಸ್ಥಿತಿಗೆ ಆದೇಶ ನೀಡಿ ಕೆಲಸಕ್ಕೆ ಸೇರಿಸಿಕೊಂಡರು. 6 ತಿಂಗಳ ನಂತರ ಅಧಿಕಾರಿಗಳು ನೌಕರರನ್ನು ಮತ್ತೆ ಕೆಲಸದಿಂದ ತೆಗೆದು ಹಾಕಲು ಮುಂದಾದಾಗ ನೌಕರರು ಮತ್ತೆ 3 ದಿನಗಳ ಧರಣಿ ನಡೆಸಿದರು. ಈ ಬಾರಿಯೂ ಮುಖ್ಯಮಂತ್ರಿ ಮಧ್ಯಪ್ರವೇಶಮಾಡಿ ಮತ್ತೆ 6 ತಿಂಗಳ ಕಾಲ ಜೀವದಾನ ಮಾಡಿದರು. ನೌಕರರ ಸಮಸ್ಯೆಗೆ ಇನ್ನೂ ಶಾಶ್ವತ ಪರಿಹಾರ ಸಿಗದಿದ್ದರೂ ಹಿಂದಿನ ಮುಖ್ಯ ಮಂತ್ರಿಗಳು ತೋರದ ಅನುಕಂಪವನ್ನು ತೋರಿದ ಕುಮಾರಸ್ವಾಮಿಯವರಿಗೆ ನಮ್ಮ ಕೃತಜ್ಞತೆಯನ್ನು ಸಲ್ಲಿಸಲು ಈ ಸಮಾವೇಶವನ್ನು ಎರ್ಪಡಿಸಲಾಗಿದೆ ಎಂದು ಹೇಳಿದರು. ಹೊರಗುತ್ತಿಗೆ ನೌಕರರ ಪರವಾಗಿ ವಿವರವಾದ ಬಿನ್ನವತ್ತಳೆಯನ್ನು ಸಲ್ಲಿಸಿದ ಸಂಘದ ಅಧ್ಯಕ್ಷರು ನೌಕರರಿಗೆ ಮತ್ತೆ ಮತ್ತೆ ಕೆಲಸದಿಂದ ತೆಗೆದು ಹಾಕುವ ಆತಂಕದಿಂದ ಮುಕ್ತಗೊಳಿಸಬೇಕೆಂದೂ, ಎಲ್ಲ ಹೊರಗುತ್ತಿಗೆ ನೌಕರರಿಗೆ ನಿವೃತ್ತಿ ವರೆಗೆ ಸೇವಾ ಭದ್ರತೆ ನೀಡಬೇಕೆಂದು, ಇಲಾಖೆಯ ಹಾಸ್ಟೆಲುಗಳಲ್ಲಿ ಅಗತ್ಯವಿರುವ ಕಾವಲುಗಾರ, ಅಡುಗೆಯವರು, ಸ್ವಚ್ಛತಾ ಸಿಬ್ಬಂದಿ ಮುಂತಾದ ಹುದ್ದೆಗಳನ್ನು ಸೃಜಿಸಿ ಕೆಲಸ ಕಳೆದುಕೊಳ್ಳುವ ಅಪಾಯದಲ್ಲಿರುವ ಹೊರಗುತ್ತಿಗೆ ನೌಕರರನ್ನು ಆ ಹುದ್ದೆಗಳಿಗೆ ನೇಮಿಸಿ ಅವರ ಅನುಭವದ ಪ್ರಯೋಜನ ಪಡೆಯಬಹುದು ಎಂದು ನಿವೇದಿಸಿದರು. ಹೊರಗುತ್ತಿಗೆ ನೌಕರರಿಗೆ ಕಾನೂನು ಪ್ರಕಾರ ವಾರದ ರಜೆಯನ್ನು ನೀಡಬೇಕು ಎಂದು ಒತ್ತಾಯಿಸಿದರು.

ಇದಕ್ಕೂ ಮೊದಲು ಹೊರಗುತ್ತಿಗೆ ನೌಕರರು ಮುಖ್ಯ ಮಂತ್ರಿ ಕುಮಾರಸ್ವಾಮಿ ಅವರಿಗೆ ಶಾಲು ಹೊದಿಸಿ, ಹಾವೇರಿಯ ಪ್ರಸಿದ್ಧ ಯಾಲಕ್ಕಿ ಮಾಲೆಯನ್ನು ಹಾಕಿ, ಬಸವಣ್ಣನವರ ಪ್ರತಿಮೆಯುಳ್ಳ ನೆನಪಿನ ಕಾಣಿಕೆ ನೀಡಿ ಸತ್ಕರಿಸಿದರು.

ಸಮಾವೇಶದಲ್ಲಿ ವಿಶೇಷ ಆಮಂತ್ರಿತರಾಗಿ ಭಾಗವಹಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಯು. ಬಸವರಾಜ, ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಜಿ.ಸಿ. ಬಯ್ಯಾರೆಡ್ಡಿ, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಕೆ.ಎಸ್. ವಿಮಲ ಮಾತನಾಡಿ ಕಾರ್ಮಿಕರು ರಾಜಕಾರಣಿಗಳ ಮಾತುಗಳನ್ನೇ ನಂಬಿ ಕುಳಿತುಕೊಳ್ಳದೆ ತಮ್ಮ ಸಂಘದ ಮೇಲೆ ಮತ್ತು ಅದು ಹಮ್ಮಿಕೊಳ್ಳುವ ಹೋರಾಟಗಳ ಮೇಲೆ ಹೆಚ್ಚು ನಂಬಿಕೆ ಇಟ್ಟುಕೊಳ್ಳಬೇಕು ಎಂಬ ಕಿವಿಮಾತು ಹೇಳಿದರು. ನಿಮ್ಮ ಸಂಘ ಶಕ್ತಿಯ ಬಲದಿಂದ ಮುಖ್ಯ ಮಂತ್ರಿಯವರನ್ನು ನೀವು ಇದ್ದಲ್ಲಿಗೆ ಬರುವಂತೆ ಮಾಡಿದ ನೀವು ನಿಮ್ಮ ಸಂಘವನ್ನು ರಾಜ್ಯಾದ್ಯಂತ ಬಲಪಡಿಸುವ ಮೂಲಕ ಸೇವಾ ಭದ್ರತೆಯ ನಿಮ್ಮ ಬೇಡಿಕೆಯನ್ನು ಸಹ ಪಡೆಯುತ್ತೀರಿ ಎಂದು ಹಾರೈಸಿದರು.



ಆರಂಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಭೀಮಶೆಟ್ಟಿ ಯಂಪಳ್ಳಿ ಎಲ್ಲರನ್ನು ಸ್ವಾಗತಿಸಿದರು. ಕೊನೆಯಲ್ಲಿ ಸಂಘದ ಉಪಾಧ್ಯಕ್ಷ ಆಂಜನೇಯರೆಡ್ಡಿ ವಂದಿಸಿದರು. ರಾಜ್ಯ ಪದಾಧಿಕಾರಿಗಳಾದ ಚಂದ್ರಪ್ಪ ಹೊಸ್ಕೇರಾ, ಜಂಬಯ್ಯ ನಾಯಕ್ ಮೊದಲಾದವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕೆ. ಮಹಾಂತೇಶ್ ಕಾರ್ಯಕ್ರಮದ ನಿರೂಪಣೆ ಮಾಡಿದರು.

ಕೆ. ಹನುಮೇಗೌಡ, ಸಹ ಕಾರ್ಯದರ್ಶಿ







ಉದ್ಯೋಗ ಖಾತ್ರಿ ಕೂಲಿ ಹಣಕ್ಕಾಗಿ ಪಾದಯಾತ್ರೆ

ಟ್ರಾ ್ಯಕ್ಟರ್ ಅಪಘಾತದಲ್ಲಿ ಐದು ಸಾವು

ಉದ್ಯೋಗ ಖಾತ್ರಿ ಯೋಜನೆ ಅಡಿ ಮಾಡಿದ ಕೆಲಸದ ನಾಲ್ಕು ತಿಂಗಳ ಬಾಕಿ ಕೂಲಿ ಹಣವನ್ನು ನೀಡಲು ಒತ್ತಾಯಿಸಿ ಬಿಜೆಪಿ ಸಂಸದ ಕರಡಿ ಸಂಗಣ್ಣ ಅವರ ಮನೆಗೆ ಗಂಗಾವತಿಯಿಂದ ಪಾದಯಾತ್ರೆಯಲ್ಲಿ ನಡೆದು ಮನವಿ ಸಲ್ಲಿಸಿ ವಾಪಸ್ ಬರುತ್ತಿದ್ದಾಗ ಟ್ರಾ ್ಯಕ್ಟರ್‌ಟ್ರೈಲರ್ ಕೊಂಡಿ ಕಳಚಿ ಬಿದ್ದ ಪರಿಣಾಮವಾಗಿ ಐವರು ಕೂಲಿ ಕಾರ್ಮಿಕರು ಮೃತಪಟ್ಟು 15 ಕ್ಕೂ ಹೆಚ್ಚು ಮಂದಿ ಗಾಯಗೊಂಡರು. ಗಂಗಾವತಿ ತಾಲೂಕಿನ ಹೊಸಳ್ಳಿ ಗ್ರಾಮದ ಹುಲಿಗೆಮ್ಮ (42), ಹನುಮಂತಪ್ಪ (60), ಅಂಬಮ್ಮ (70) ಮತ್ತು ಪವಾಡೆಪ್ಪ (59) ಸ್ಥಳದಲ್ಲೇ ಮೃತಪಟ್ಟರೆ ಹುಸೇನಮ್ಮ (60) ಎಂಬುವರು ಒಂದು ವಾರದ ನಂತರ ಮನೆಯಲ್ಲಿ ಮೃತರಾದರು.

ಜಿಲ್ಲೆಯ ನಾಲ್ಕು ತಾಲೂಕು ಬರಪೀಡಿತ ಪ್ರದೇಶವೆಂದು ಸರ್ಕಾರ ಘೋಷಿಸಿದೆ. ಮಳೆ ಇಲ್ಲದೇ ತುಂಗಭದ್ರಾ ಎಡದಂಡೆ ಕಾಲುವೆ, ನೀರು ಇಲ್ಲದೇ ಗಂಗಾವತಿ, ಕೊಪ್ಪಳ ಕೆಲಭಾಗದ ಕೂಲಿಕಾರರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ನಾಲ್ಕು ತಿಂಗಳಿನಿಂದ ಕೂಲಿ ಹಣ ಪಾವತಿ ಆಗದಿರುವುದರಿಂದ ರೈತ ಕೂಲಿಕಾರರು ಬೆಂಗಳೂರು, ಮಂಗಳೂರು, ಕೇರಳ ಕಡೆ ವಲಸೆ ಹೋಗುತ್ತಿದ್ದಾರೆ. ಕೂಲಿ ಹಣಕ್ಕಾಗಿ ಮತ್ತು ಕೆಲಸಕ್ಕಾಗಿ ನಿರಂತರವಾಗಿ ರೈತ ಕೂಲಿಕಾರರು ಹೋರಾಟ ಮಾಡುತ್ತಿದ್ದಾರೆ.

ಘಟನೆಯ ವಿವರ:

ಉದ್ಯೋಗ ಖಾತ್ರಿ ಯೋಜನೆಯಲ್ಲಿ ಕೆಲಸ ಮಾಡಿದವರಿಗೆ ಕಳೆದ ನಾಲ್ಕು ತಿಂಗಳಿಂದ ಕೂಲಿ ಹಣ ಪಾವತಿಸದೆ ಇರುವುದನ್ನು ಹಾಗೂ ಕೇಂದ್ರ ಸರ್ಕಾರ ನರೇಗಾ ಯೋಜನೆಗೆ ಹಣ ನೀಡದೆ ಇರುವುದನ್ನು ಪ್ರತಿಭಟಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಘಟಕದ ವತಿಯಿಂದ ಬಿಜೆಪಿ ಸಂಸದ,ಕೊಪ್ಪಳದ ಸಂಗಣ್ಣ ಕರಡಿ ಅವರ ಮನೆಗೆ ಪಾದಯಾತ್ರೆ ಹೊರಡಿಸಿದ್ದರು. ಸಂಘದ ರಾಜ್ಯ ಉಪಾಧ್ಯಕ್ಷರಾದ ಮಾರುತಿ ಮಾನ್ಪಡೆ ಪಾದಯಾತ್ರೆಯ ನೇತೃತ್ವ ವಹಿಸಿದ್ದರು. ಎರಡು ದಿನಗಳ ಕಾಲ ನಡೆದು ಬಂದ ನೂರಾರು ಕಾರ್ಮಿಕರು ನಗರವನ್ನು ಪ್ರವೇಶಿಸುತ್ತಿದ್ದಂತೆ ಸಂಸದ ಸಂಗಣ್ಣ ಕರಡಿಯವರು ಮತ್ತು ಜಿಲ್ಲಾ ಪಂಚಾಯತ್ ಸಿಇಓ ಆರ್.ಎಸ್ ಪೆದ್ದಪ್ಪಯ್ಯ ಬಂದು ಪಾದಯಾತ್ರಿಕರೊಂದಿಗೆ ಮಾತನಾಡಿದರು. ಕೇಂದ್ರ ಸರಕಾರ ಬಾಕಿ ಕೂಲಿ ಹಣವನ್ನು ಕೂಡಲೇ ಬಿಡುಗಡೆ ಮಾಡಬೇಕು, ಜಿಲ್ಲೆಯ 14 ಕೋಟಿ ರೂ. ಕೂಲಿ ಹಣವನ್ನು ಕೂಡಲೇ ಪಾವತಿ ಮಾಡಬೇಕು, ರೈತರ ಸಾಲ ಮನ್ನಾ ಮಾಡಬೇಕು, ರೈತರ ಟ್ರಾ ್ಯಕ್ಟರ್ ಬಾಡಿಗೆ ಹಣ ಪಾವತಿ ಮಾಡಬೇಕು, ಬಡವರಿಗೆ ಮನೆ ನಿವೇಶನ ನೀಡಬೇಕು, ಇತ್ಯಾದಿ ಬೇಡಿಕೆಗಳುಳ್ಳ ಮನವಿ ಪತ್ರವನ್ನು ಸಲ್ಲಿಸಲಾಯಿತು. ಜಿಲ್ಲಾಧ್ಯಕ್ಷರಾದ ದೊಡ್ಡನಗೌಡ, ಪ್ರಧಾನ ಕಾರ್ಯದರ್ಶಿ ಜಿ. ನಾಗರಾಜ್, ಗಂಗಾವತಿ ತಾ॥ ಅಧ್ಯಕ್ಷರಾದ ಶಿವು ಬೆಣಕಲ್, ಪ್ರಧಾನ ಕಾರ್ಯದರ್ಶಿ ಶ್ರೀನಿವಾಸ್ ಕನಕರಾಯ, ಸುಂಕಪ್ಪ ಗದಗ, ಕಾಸಿಂಸಾಬ್ಸ ಸರದಾರ, ಮಂಜುನಾಥ್ ಡಗ್ಗಿ, ಮರಿನಾಗ, ದುರ್ಗಪ್ಪ ಮೊದಲಾದವರು ಇದ್ದರು.

ಶೀಘ್ರವೇ ಕೂಲಿ ಹಣ ಪಾವತಿ ಮಾಡುವ ಭರವಸೆ ಪಡೆದುಕೊಂಡು ಪ್ರತಿಭಟನಾಕಾರರು ಟ್ರಾಕ್ಟರುಗಳಲ್ಲಿ ಮರಳಿ ತಮ್ಮ ಗ್ರಾಮಗಳಿಗೆ ವಾಪಸ್ ಬರುವ ಸಂದರ್ಭದಲ್ಲಿ ಮುಕ್ಕುಂಪಿ-ಜಬ್ಬಲಗುಡ್ಡ ಮಧ್ಯೆ ರಸ್ತೆಯ ತಿರುವಿನಲ್ಲಿ ಟ್ರಾ ್ಯಕ್ಟರ್ ನಿಂದ ಟ್ರಾಲಿ ಬೇರ್ಪಟ್ಟು ಟ್ರಾಲಿ ಪಲ್ಟಿಯಾಯಿತು. ಆ ವೇಳೆ ನಾಲ್ವರು ಸ್ಥಳದಲ್ಲಿ ಮತ್ತೊಬ್ಬರು ಮನೆಯಲ್ಲಿ ಮೃತಪಟ್ಟರು.

ಮರುದಿನ ಸಾವಿರಾರು ಜನ ರೈತರು, ಕೂಲಿಕಾರರು ಸೇರಿಕೊಂಡು ಮೃತಪಟ್ಟವರ ಅಂತ್ಯ ಸಂಸ್ಕಾರವನ್ನು ನೆರವೇರಿಸಿದರು. ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷ ನಿತ್ಯಾನಂದ ಸ್ವಾಮಿ, ರೈತ ಸಂಘದ ರಾಜ್ಯ ಉಪಾಧ್ಯಕ್ಷ ಮಾರುತಿ ಮಾನ್ಪಡೆ ಅಲ್ಲದೆ ಸ್ಥಳೀಯ ಕೂಲಿಕಾರರ ಸಂಘ, ರೈತ ಸಂಘದ ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಉಪಸ್ಥಿತರಿದ್ದರು. ಮೃತರ ಕುಟುಂಬಗಳಿಗೆ ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ತಲಾ ರೂ. 10,000 ಹಾಗೂ ಕೂಲಿಕಾರರ ಸಂಘದಿಂದ ತಲಾ 5000 ರೂ. ನೆರವು ನೀಡಲಾಯಿತು. ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ತಲಾ 10 ಸಾವಿರ ರೂ. ನೀಡಲು ನಿರ್ಧರಿಸಿದೆ.

ನಾಗರಾಜ್ ಜಿ.



ದಲಿತ ವಿರೋಧಿ ಬಿ.ಜೆ.ಪಿ ಯನ್ನು ಸೋಲಿಸಿ; ಜಾತ್ಯತೀತ-ಪ್ರಜಾಸತ್ತಾತ್ಮಕ-ಗಣತಂತ್ರ ಭಾರತವನ್ನು ಸಂರಕ್ಷಿಸಿ;

"ಮನುವಾದ ಮುಕ್ತ ಭಾರತ" ವಿಚಾರ ಸಂಕಿರಣದಲ್ಲಿ : ಸಿ.ಬಸವಲಿಂಗಯ್ಯ





ದಲಿತ ಹಕ್ಕುಗಳ ಸಮಿತಿ, ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯು ಇದೇ ತಿಂಗಳ ಮಾರ್ಚ್ 10ನೇ ತಾರೀಖು, ಬೆಂಗಳೂರಿನ ಕುಮಾರ ಕೃಪಾದ ಗಾಂಧಿ ಭವನದಲ್ಲಿ, ಏರ್ಪಡಿಸಿದ್ದ "ಮನುವಾದ ಮುಕ್ತ ಭಾರತ" ಎಂಬ ತಾತ್ವಿಕ ವಿಚಾರದ ಮೇಲಿನ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ರಾಷ್ಟ್ರೀಯ ನಾಟಕ ಶಾಲೆಯ ನಿರ್ದೇಶಕ ಹಾಗೂ ಹಿರಿಯ ರಂಗತಜ್ಞ ಸಿ. ಬಸವಲಿಂಗಯ್ಯನವರು ಮತನಾಡುತ್ತಾ, 'ಸಂವಿಧಾನದ ಅಡಿಪಾಯಗಳಾದ, ಸಮಾನತೆ, ಸಾಮಾಜಿಕ ನ್ಯಾಯ ಮತ್ತು ಜಾತ್ಯಾತೀತ ಸ್ವರೂಪ ಮತ್ತು ಒಕ್ಕೂಟ ವ್ಯವಸ್ಥೆಯ ಆಶಯಗಳು ಉಳಿಯ ಬೇಕೆಂದಾದರೆ, ನಮ್ಮ ಭಾರತ ದೇಶವನ್ನು ಮನುವಾದಿಗಳಿಂದ ಮೊದಲು ಮುಕ್ತ ಗೊಳಿಸ ಬೇಕು ' ಎಂದು ತಮ್ಮ ಉದ್ಘಾಟನಾ ಭಾಷಣದಲ್ಲಿ ಜನತೆಗೆ ಕರೆ ನೀಡಿದರು.

ಆರ್.ಎಸ್.ಎಸ್. ನ ಕಾರ್ಯಸೂಚಿಗಳನ್ನು ಅಚ್ಚುಕಟ್ಟಾಗಿ ಜಾರಿಗೆ ತರುವಲ್ಲಿ ಕೇಂದ್ರದಲ್ಲಿನ ಬಿಜೆಪಿ ಆಡಳಿತ ಎಲ್ಲಾ ಪ್ರಯತ್ನ ಗಳನ್ನು ನಡೆಸುತ್ತಿದೆ. ಸಂವಿಧಾನದ ಆಶಯಗಳನ್ನು ಕಡೆಗಣಿಸಿ, ಭಾರತ ದೇಶದ ಮೇಲೆ ಹಿಂದುತ್ವ ರಾಷ್ಟ್ರೀಯತೆಯನ್ನು ಹೇರುವ ಹುನ್ನಾರವನ್ನು ತನ್ನ ಆಡಳಿತದಲ್ಲಿ ಅನುಷ್ಠಾನ ಗೊಳಿಸಲು ಪ್ರಯತ್ನಿಸುತ್ತಿದೆ. ಆದರೆ, ಹಿಂದುತ್ವ ಅಥವಾ ಹಿಂದು ವೆಂಬುದು ಒಂದು ಧರ್ಮವೇ ಅಲ್ಲ, ಅದು ಒಂದು ಜೀವನ ವಿಧಾನ ಅಷ್ಟೆ. ಅದಕ್ಕೆ ಅಪ್ಪ-ಅಮ್ಮ ಎಂಬುವರು ಯಾರು ಇಲ್ಲ, ಆದರೆ, ಇತರ ಧರ್ಮಗಳಲ್ಲಿ ಆ ರೀತಿಯಿಲ್ಲ ಧರ್ಮ ಸ್ಥಾಪಕರಿದ್ದಾರೆ, ಧರ್ಮಗ್ರಂಥಗಳಿವೆ ಎಂದು ಪ್ರತಿಪಾದಿಸಿದರು.

ಪ್ರಸಕ್ತ ಭಾರತ ದೇಶದಲ್ಲಿ, ಬ್ರಾಹ್ಮಣರು ಮಾತ್ರ ಮನುವಾದಿಗಳಲ್ಲ, ಶೂದ್ರರಲ್ಲಿಯೂ ಮನು ವಾದ ಇತ್ತೀಗೆ ಬಲವಾಗಿ ಆವರಿಸಿಕೊಂಡಿದೆ. ಇದನ್ನು ಮೊದಲು ಕಿತ್ತಾಕ ಬೇಕೆಂದರು. ಬ್ರಾಹ್ಮಣರು ಜನರನ್ನು ತಮ್ಮ ಉಪಯುಕ್ತತೆಗೆ ಬಳಸಿಕೊಳ್ಳವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ. ಬಹುತೇಕ ದಲಿತರು ಕೂಡ ಮನುವಾದಿಗಳ ಸಿದ್ಧಾಂತವನ್ನು ಅನುಸರಿಸುತ್ತಿದ್ದಾರೆ. ಇದಕ್ಕೆ ಅನೇಕ ಉದಾಹರಣೆ ಗಳನ್ನು ಅವರು ನೀಡಿದರು. ನಮ್ಮ ಗೃಹ ಪ್ರವೇಶ ಕ್ಕೆ, ನಮ್ಮ ಮನೆಯಲ್ಲಿ ನಡೆಯುವ ಮದುವೆ-ಮುಂಜಿಗಳಿಗೆ, ಮಕ್ಕಳಿಗೆ ತಲೆ ಮುಡಿ ಕೊಡಿಸುವುದಕ್ಕೆ,

ಪುಟ 14 ಕ್ಕೆ



ಸಿಪಿಐ(ಎಂ) ಸ್ಪರ್ಧೆ

ಕರ್ನಾಟಕ ರಾಜ್ಯದ ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದಲ್ಲಿ ಸಿಪಿಐ(ಎಂ) ಅಭ್ಯರ್ಥಿಯನ್ನು ಸ್ಪರ್ಧೆಗಿಳಿಸಲು ರಾಜ್ಯ ಸಮಿತಿ ನಿರ್ಧರಿಸಿದೆ. ಸಂಗಾತಿ ಎಸ್. ವರಲಕ್ಷ್ಮಿ ಅವರನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಲಾಗಿದೆ ಎಂದು ಪಕ್ಷದ ಕೇಂದ್ರ ಸಮಿತಿಗೆ ತಿಳಿಸಲಾಗಿದ್ದು ಕೇಂದ್ರ ಸಮಿತಿ ಅನುಮೋದನೆ ನೀಡಿದೆ.

ರಾಜ್ಯದ ರೈತ ಚಳುವಳಿಗಳ ಪ್ರಸ್ತುತತೆ ಮತ್ತು ಸವಾಲುಗಳು

ಜೆ.ಸಿ. ಬಯ್ಯಾರೆಡ್ಡಿ

ರಾಜ್ಯದ ರೈತ ಚಳುವಳಿಗಳ ಪ್ರಸ್ತುತತೆ ಮತ್ತು ಅವುಗಳ ಮುಂದಿರುವ ಸವಾಲುಗಳನ್ನು ಸರಿಯಾದ ರೀತಿಯಲ್ಲಿ ಅರ್ಥ ಮಾಡಿಕೊಳ್ಳಬೇಕಾದರೆ ಅಯಾಯ ಕಾಲಘಟ್ಟದ ಕಾರ್ಷಿಕ ಪರಿಸ್ಥಿತಿ. ಗ್ರಾಮೀಣ ಜನತೆಯ ವರ್ಗ ಸಂಬಂಧಗಳು ಹಾಗು ರೈತ ಚಳುವಳಿಗಳು ನಡೆದು ಬಂದ ದಾರಿಯನ್ನು ವಸ್ತು ನಿಷ್ಟವಾಗಿ ವಿಶ್ಲೇಷಣೆಗೆ ಒಳಪಡಿಸಬೇಕಿದೆ. ಇತಿಹಾಸವನ್ನು ಅರಿಯದೇ ವರ್ತಮಾನವನ್ನು ಅರ್ಥ ಮಾಡಿಕೊಳ್ಳುವುದು ಮತ್ತು ಭವಿಷ್ಯದ ಸವಾಲುಗಳನ್ನು ಎದುರಿಸಲು ಇಡಬೇಕಾದ ಹೆಜ್ಜೆಗಳ ಬಗ್ಗೆ ಸ್ಪಷ್ಟತೆ ಸಾಧ್ಯವಿಲ್ಲ. ಈ ಹಿನ್ನೆಲೆಯಿಂದ ರೈತ ಚಳುವಳಿಗಳ ಸಂಕ್ಷಿಷ್ಟ ಇತಿಹಾಸವನ್ನು ಪರಿಶೀಲಿಸೋಣ.

ರೈತ ಚಳುವಳಿಗಳ ಸಂಕ್ಷಿಪ್ತ್ ಇತಿಹಾಸ:–

ನಮ್ಮ ಕಾರ್ಷಿಕ ಪರಿಸ್ಥಿತಿಯನ್ನು ಸಾಮಾನ್ಯವಾಗಿ ಮೂರು ಕಾಲಘಟ್ಟಗಳಾಗಿ ವಿಂಗಡಿಸಬಹುದು. ಸ್ವಾತಂತ್ರ್ಯ ಪೂರ್ವ, ಸ್ವಾತಂತ್ರ್ಯದ ಆರಂಭದ ನಾಲ್ಕು ದಶಕಗಳ ಕಾಲಾವಧಿ ಹಾಗು ನವ ಉದಾರವಾದಿ ಆರ್ಥಿಕ ಧೋರಣೆಗಳ ಕಾಲಘಟ್ಟ. ಅಯಾಯ ಕಾಲ ಘಟ್ಟಕ್ಕೆ ಹೊಂದುಕೊಂಡು ರೈತ ಚಳುವಳಿಗಳನ್ನು ವಿಶ್ಲೇಷಣೆ ಮಾಡಬಹುದು. ಸ್ವಾತಂತ್ರ್ಯ ಪೂರ್ವದಲ್ಲಿ ಪರಕೀಯರ ವಿಪರೀತ ಶೋಷಣೆ, ದಬ್ಬಾಳಿಕೆಗಳನ್ನು ಕೊನೆಗಾಣಿಸಲು ಸ್ವಾತಂತ್ರ್ಯಕ್ಕಾಗಿ ಅನೇಕ ರೈತ ಚಳುವಳಿಗಳು ನಡೆದಿವೆ. ಕಮ್ಯೂನಿಷ್ಟರು ಮತ್ತು ಸಮಾಜವಾದಿಗಳ ನಾಯಕತ್ವದಲ್ಲಿ 1936 ರಲ್ಲಿ ಅಖಿಲ ಭಾರತ ಕಿಸಾನ್ ಸಭಾ ಆರಂಭದೊಂದಿಗೆ ರೈತರಿಗೆ ನಿಜವಾದ ಸ್ವಾತಂತ್ರ್ಯವೆಂದರೆ 'ಭೂಮಿಯ ಹಕ್ಕು' ಯೆಂದು ಹೀಗಾಗಿ 'ಸ್ವಾತಂತ್ರ್ಯ' ಮತ್ತು 'ಭೂಮಿ' ಎನ್ನುವ ಘೋಷಣೆಯೊಂದಿಗೆ ಅನೇಕ ಹೋರಾಟಗಳು ನಡೆದವು. ಈ ಎಲ್ಲಾ ರೈತ ಚಳುವಳಿಗಳ ಮುಕುಟದಂತೆ ನಡೆದ ಐತಿಹಾಸಿಕ ರೈತರ ಚಳುವಳಿ 'ತೆಲಂಗಾಣ ಶಸ್ತ್ರಾಶ ರೈತ ಚಳುವಳಿ"ಸ್ವಾತಂತ್ರ್ಯ'ದ ಜೊತೆಗೆ ಬದುಕಲು ನಮಗೆ ಭೂಮಿ ಬೇಕೆನ್ನುವ ಈ ಚಳುವಳಿ ಆಗ ಬಲಿಷ್ಠವಾಗಿದ್ದ 'ಭೂ ಮಾಲಿಕ ವರ್ಗ' ವನ್ನು ಹಾಗು ಇದರ ಬೆಂಬಲಕ್ಕೆ ನಿಂತಿದ್ದ ಬಂಡವಾಳಶಾಹಿ ವರ್ಗದ ಬುನಾದಿಯನ್ನೇ ಅಲುಗಾಡಿಸಿತು. ಇಂತಹ ರೈತ ಚಳುವಳಿಗಳ ಫಲವಾಗಿ 'ಬಾರತ' ಬೇಗ ಸ್ವಾತಂತ್ರ್ಯಗೊಂಡಿತು ಮಾತ್ರವಲ್ಲ, ಸ್ವಾತಂತ್ರ್ಯಗೊಂಡ ದೇಶದ ಆಳುವ ವರ್ಗದ ಸರ್ಕಾರಗಳ ಮುಂದೆ 'ಭೂಮಿ'ಯ ಪ್ರಶ್ನೆಯನ್ನು ಕೇಂದ್ರಿಯ ಪ್ರಶ್ನೆಯಾಗಿ ಇಡಲು ಸಾಧ್ಯವಾಯಿತು.

'ಭೂಮಿ' ಪ್ರಶ್ನೆಯನ್ನು 'ಸ್ವಾತಂತ್ರ್ಯ ಚಳುವಳಿ'ಯ ಜೊತೆ ಜೋಡಿಸುವುದರಿಂದ ಚಳುವಳಿ ಬಲಹೀನವಾಗುತ್ತೆ ಎಂಬ ವಾದವನ್ನು ಬದಿಗೊತ್ತಿ ಎರಡು ಪ್ರಶ್ನೆಗಳನ್ನು ಸರಿಯಾದ ರೀತಿಯಲ್ಲಿ ಜೋಡಿಸಲು ಸಾಧ್ಯವಾದ ಕಡೆಯಲ್ಲಾ ರೈತರು, ಗೇಣಿದಾರರು, ದಲಿತರು ದೊಡ್ಡ ಸಂಖ್ಯೆಯಲ್ಲಿ ಚಳುವಳಿಯಲ್ಲಿ ಪಾಲ್ಗೊಂಡರು. ಆಳುವ ಬ್ರೀಟಿಷರು ಮತ್ತು ಇವರ ಬೆಂಬಲವಾಗಿ ನಿಂತಿದ್ದ ಭೂ ಮಾಲೀಕರ ವಿರುದ್ಧದ ಈ ಹೋರಾಟ ಕಠಿಣವಾಗಿದ್ದರೂ 'ಶತ್ರು'ಗಳು ಮತ್ತು 'ಮಿತ್ರ'ರ ವಿಭಜನೆ ಸ್ಪಷ್ಟವಾಗಿತ್ತು.

ಅಖಿಲ ಭಾರತ ಕಿಸಾನ್ ಸಭಾದ ನಾಯಕತ್ವದಲ್ಲಿನ ರೈತ ಚಳುವಳಿಗಳ ಪ್ರಭಾವಗಳು ಹಾಗು ಮಾರ್ಗದರ್ಶನದ ಫಲವಾಗಿಯೇ ರಾಜ್ಯದಲ್ಲಿ 1950 ದಶಕದ ಆರಂಭದಲ್ಲಿಯೇ ಕರಾವಳಿಯ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಕಮ್ಯೂನಿಷ್ಠರ ಮುತುವರ್ಜಿಯಿಂದ ಅನೇಕ ದೀರೋದತ್ತ ರೈತ ಹೋರಾಟಗಳು ನಡೆದವು. ಶ್ರೀ ಎ. ಕೃಷ್ಣಶೆಟ್ಟರು, ಶ್ರೀ ಬಿ.ವಿ. ಕಕ್ಕಿಲ್ಲಾಯರು, ಶ್ರೀ ಎಂ.ಹೆಚ್. ಕೃಷ್ಣಪ್ಪ ಮುಂತಾದವರು ಪ್ರಮುಖ ನಾಯಕರಾಗಿದ್ದರು. ಇದೇ ರೀತಿಯಲ್ಲಿ ನಾಡಿನ ಚಿರಪರಿಚಿತ ಸಮಾಜವಾದಿ ಶ್ರೀ ದಿನಕರ್ ದೇಸಾಯಿರವರು, ಹಿರಿಯ ಕಮ್ಯೂನಿಷ್ಟ ನಾಯಕ ಶ್ರೀ ಗಿರಿಪಿಕಳೇಯವರ ನಾಯಕತ್ವದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಬಲವಾದ ರೈತ ಚಳುವಳಿಯು ನಡೆದಿದೆ. ಶಿವಮೊಗ್ಗ ಜಿಲ್ಲೆಯ್ಯಾದ್ಯಂತ ಹಿರಿಯ ಸಮಾಜವಾದಿ ನಾಯಕರಾದ ಶ್ರೀ ಶಾಂತವೇರಿ ಗೋಪಾಲಗೌಡ ಮತ್ತಿತರ ನಾಯಕತ್ವದಲ್ಲಿ ನಡೆದ ರೈತ ಚಳುವಳಿಗಳು ಹಾಗು ಅವಿಭಜಿತ ಕೋಲಾರ ಜಿಲ್ಲೆಯಲ್ಲಿ ಶ್ರೀ ಹೆಚ್. ಎಸ್. ರಾಮರಾವ್, ಶ್ರೀ ಪಿ. ವೆಂಕಟಗಿರಿಯಪ್ಪ, ಶ್ರೀ ಆರ್. ಎನ್. ಬೈರಾರೆಡ್ಡಿ ಇತ್ಯಾದಿ ಕಮ್ಯೂನಿಷ್ಟ್‌ರ ನಾಯಕತ್ವದಲ್ಲಿ ನಡೆದ ರೈತ ಚಳುವಳಿಗಳು ದಾಖಲಾರ್ಹವಾದ ಚಳುವಳಿಗಳಾಗಿವೆ.

> **ರಾಜ್ಯ ಹಾಗು ರಾಷ್ಟ್ರ ಮಟ್ಟದಲ್ಲಿ ಸಮರಶೀಲ ಹೋರಾಟಗಳಿಂದ ಮಾತ್ರ ನಮ್ಮ ಮುಂದಿರುವ ಸವಾಲುಗಳನ್ನು ಎದುರಿಸಬಹುದಾಗಿದೆ. ನಮ್ಮ 'ಶತ್ರು'ವನ್ನು ಪತ್ತೆ ಹಚ್ಚುವುದು ತೀರ ಸಂಕಿರಣವಾಗಿದೆ. ಏಕೆಂದರೆ ನಮ್ಮ 'ಶತ್ರು' ನಮ್ಮ ಗ್ರಾಮದಲ್ಲಿ ಇದ್ದಾನೆ. ಬೆಂಗಳೂರು, ದೆಹಲಿಯಲ್ಲಿ ಮಾತ್ರವಲ್ಲ ಜಗತ್ತಿನ ಎಲ್ಲೆಡೆ ಇದ್ದಾನೆ. ಹೀಗಾಗಿ 'ಶತ್ರು ವರ್ಗ' ವನ್ನು ಸಮಗ್ರವಾಗಿ ಅರ್ಥ ಮಾಡಿಕೊಳ್ಳುವ ರಾಜಕೀಯ ಪ್ರಜ್ಞೆ, ಸೈದ್ಧಾಂತಿಕ ಸ್ಪಷ್ಟತೆಯಿಂದ ಕೂಡಿದ ರೈತ ಹೋರಾಟಗಳಿಂದ ಮಾತ್ರ ಮುನ್ನಡೆ ಸಾಧಿಸಲು ಸಾಧ್ಯವಿದೆ.**



ಈಗಾಗಲೇ ಗುರ್ತಿಸಿದಂತೆ ಈ ಚಳುವಳಿಗಳು ಪ್ರಧಾನವಾಗಿ ಸ್ವಾತಂತ್ರ್ಯದ ಆರಂಭದ ಹಂತದಲ್ಲಿ ನಡೆದ ಚಳುವಳಿಗಳಾಗಿವೆ. ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಎತ್ತಲಾದ 'ಭೂಮಿ ಹಕ್ಕು' 'ಗೇಣಿಯ ಪ್ರಮಾಣ'ದ ಪ್ರಶ್ನೆಗಳಿಗೆ ಸಂಬಂಧಿಸಿದ ಚಳುವಳಿಗಳಾಗಿವೆ. ಭೂ ಮಾಲೀಕರು ಮತ್ತು ಗೇಣಿದಾರರು, ಭೂಹೀನರ ನಡುವೆ ನಡೆದ ಈ ಚಳುವಳಿಗಳು ಎಷ್ಟು ವ್ಯಾಪಕ ಮತ್ತು ಪ್ರಖರವಾಗಿದ್ದವು ಎಂದರೆ ಸಾರಿಗೆ ವ್ಯವಸ್ಥೆಯಿಲ್ಲದ ಆ ದಿನಗಳಲ್ಲಿಯೂ 8–10 ಗಂಟೆಗಳ ಕಾಲ್ನಡಿಗೆ, ಎತ್ತಿ ಬಂಡಿಗಳ ಮೂಲಕ ಸಾವಿರಾರು ರೈತರು, ಭೂ ಹೀನರು ಸಭೆಗಳಲ್ಲಿ ಬಾಗವಹಿಸುತ್ತಿದ್ದರು. ಮಾತ್ರವಲ್ಲ ಹಲವಾರು ಕಡೆ ಭೂ ಮಾಲೀಕರ ಗೂಂಡಾಗಳು ಮತ್ತು ಇವರ ಬೆಂಬಲವಾಗಿ ನಿಲ್ಲುತ್ತಿದ್ದ ಪೋಲೀಸರ್ ಜೊತೆ ನೇರ ಸಂಘರ್ಷಕ್ಕೆ ಇಳಿಯುತ್ತಿದ್ದ ಘಟನೆಗಳು ಸರ್ವೆ ಸಾಮಾನ್ಯ. ಇಂತಹ ಸಂಘರ್ಷಗಳಲ್ಲಿ ಅಪಾರ ಆಸ್ತಿಪಾಸ್ತಿಯ ನಷ್ಟದ ಜೊತೆಗೆ ಹಲವಾರು ಪ್ರಾಣಗಳನ್ನು ಕಳೆದುಕೊಂಡು ಹುತ್ತಾತ್ಮರಾಗಿದ್ದು ಈಗ ಚರಿತ್ರೆ. ಅಲ್ಲದೆ 1957 ರಲ್ಲಿ ಕಮ್ಯೂನಿಷ್ಟ್‌ರ್ ನಾಯಕತ್ವದಲ್ಲಿ ಆರಂಭಗೊಂಡ ಕರ್ನಾಟಕ ಪ್ರಾಂತ ರೈತ ಸಂಘ ಹಾಗು ಸಾಮಾಜವಾದಿಗಳ ನಾಯಕತ್ವದ ಇಂತಹ ರೈತ ಚಳುವಳಿಗಳ ಆ ಸಂಧರ್ಭದಲ್ಲಿ ಇನ್ನೂ ಆರದ ಸ್ವಾತಂತ್ರ್ಯ ಚಳುವಳಿಯ ಬಿಸಿ, ಜನರಲ್ಲಿ ಅಪಾರ ನಿರೀಕ್ಷೆಗಳು, ತೀರ ವಿಭಜನೆಗೊಳ್ಳದ ರೈತಾಪೀ ಜನತೆ ಐಕ್ಯತೆ ಈ ಚಳುವಳಿಗೆ ಪೂರಕವಾದ ಅಂಶಗಳಾಗಿದ್ದವು. ಈ ಚಳುವಳಿಗಳು ರಾಜಕೀಯ ಪ್ರಭಾವದಿಂದ ಈ ಕಾಲಾವಧಿಯಲ್ಲಿ ಕಾಂಗ್ರೇಸ್ ಅಭ್ಯರ್ಥಿಗಳನ್ನು ಸೋಲಿಸಿ ಹತ್ತಾರು ಶಾಸಕರುಗಳು ವಿಧಾನಸಭೆಗೆ ಆಯ್ಕೆಯಾಗುತ್ತಿದ್ದರು.

ಪ್ರತಿಫಲವಾಗಿಯೇ ರಾಜ್ಯದಲ್ಲಿಯೂ ಸುಧಾರಣಾ ಕಾನೂನುಗಳು ಜಾರಿಗೆ ಬಂದಿದ್ದು. ಇದರಿಂದ ಕೆಲವರಿಗೆ ಅಲ್ಪಸ್ವಲ್ಪ ಭೂಮಿ ಸಿಕ್ಕಿದರೂ ಈ ಕಾನೂನುಗಳು ರಾಜ್ಯದ ಭೂಮಿ ಪ್ರಶ್ನೆಯನ್ನು ಸಂಪೂರ್ಣವಾಗಿ ಇತ್ಯರ್ಥಪಡಿಸಲ್ಲ ಎನ್ನುವುದು ಈಗ ಚರಿತ್ರೆ. ಆದರೆ ಬಡವರಿಗೆ, ಭೂಹೀನರಿಗೆ ಭೂಮಿಯನ್ನು ದೊಡ್ಡ ರೀತಿಯಲ್ಲಿ ಹಂಚಿಕೆ ಮಾಡಲಾಗುವುದೆಂಬ ಭ್ರಮೆಗಳನ್ನು ವ್ಯಾಪಕವಾಗಿ ಸೃಷ್ಟಿಸಲಾಯಿತು. ಇಂತಹದೇ ಪ್ರಯತ್ನಗಳನ್ನು ದೇಶ ಮಟ್ಟದಲ್ಲಿ ಯಶಸ್ವಿಯಾಗಿ ಮಾಡಲಾಯಿತು. ಹೀಗಾಗಿ 'ಭೂಮಿ'ಯ ಪ್ರಶ್ನೆಗೆ ಸಂಬಂಧಿಸಿ ದೇಶಾದ್ಯಂತ ನಡೆಯುತ್ತಿದ್ದ ಸಮರಶೀಲ ರೈತ ಚಳುವಳಿಗಳು ಕೇರಳ, ಪಶ್ಚಿಮ ಬಂಗಾಳ, ಇತ್ಯಾದಿ ಕೆಲವು ರಾಜ್ಯಗಳನ್ನು ಹೊರತುಪಡಿಸಿ ಉಳಿದ ಕಡೆ ಸ್ವಲ್ಪ ಮಟ್ಟಿಗೆ ವೇಗವನ್ನು ಕಳೆದುಕೊಂಡವು.

ಆದರೆ ಹೀಗೆ ಕಾರ್ಷಿಕ ರಂಗದಲ್ಲಿ ಉಂಟಾಗುತ್ತಿದ್ದ ಈ ಬದಲಾವಣೆಗಳನ್ನು ಸರಿಯಾದ ರೀತಿಯಲ್ಲಿ ಅಂದಾಜು ಮಾಡಿ. ಬಹುಸಂಖ್ಯಾತ ರೈತಾಪೀ ಜನತೆಯ ಬೇಡಿಕೆಗಳನ್ನು ಎತ್ತಿ ಚಳುವಳಿಗಳನ್ನು ಕಟ್ಟುವುದರಲ್ಲಿ ಈ ತನಕ ಇದ್ದ ರೈತ ಚಳುವಳಿ ಹಿಂದೆ ಬಿದ್ದವು ಎಂದರೆ ತಪ್ಪಾಗಲಾರದು.

ಬದಲಾದ ಕೃಷಿ ಪರಿಸ್ಥಿತಿ

ಅಂತರರಾಷ್ಟ್ರೀಯ, ರಾಷ್ಟ್ರದ ರಾಜಕೀಯ ಪರಿಸ್ಥಿತಿಗಳನ್ನು ಗಮನದಲ್ಲಿ ಇಟ್ಟುಕೊಂಡು ನಮ್ಮನ್ನು ಆಳುವ ಸರ್ಕಾರಗಳು, ಅತ್ಯಂತ ಜಾಣತನದಿಂದ ಭೂಸುಧಾರಣೆ ಕಾನೂನು, ಆಹಾರದ ಸ್ವಾಲಂಬನೆ, "ಹಸಿರು ಕ್ರಾಂತಿ" ನೀರಾವರಿ, ಗುಣ ಮಟ್ಟದ ಬೀಜ, ಗೊಬ್ಬರ, ಬ್ಯಾಂಕ್ ಸಾಲಗಳು, ಯಂತ್ರಗಳ ಬಳಕೆ, ಸಬ್ಸಿಡಿಗಳು, ಬೆಂಬಲ ಬೆಲೆ, ಕೃಷಿ ಮಾರುಕಟ್ಟೆ ಇತ್ಯಾದಿ ಕಾರ್ಯಕ್ರಮಗಳನ್ನು ನೀಡುತ್ತಾ, ಕೃಷಿಗೆ ಬಜೆಟ್‌ಗಳಲ್ಲಿ ಸ್ವಲ್ಪ ಹೆಚ್ಚಿನ ಹಣವನ್ನು ವ್ಯಯ ಮಾಡಲು ಶುರು ಮಾಡಿದವು.

ಇದರಿಂದ ಸರ್ಕಾರವೇ ಕೃಷಿ ಮತ್ತು ಕೃಷಿಕರ ಪರವಾಗಿ ನಿಂತಿದೆ ಎನ್ನುವ ವ್ಯಾಪಕ ಪ್ರಚಾರವೂ ನಡೆಯಿತು. ಆದರೆ ವಾಸ್ತವದಲ್ಲಿ ಭೂಮಿ ಹಂಚಿಕೆ ಸಮಾನವಾಗಿ ನಡೆಯದೇ ಕೃಷಿ ಭೂಮಿ ದೊಡ್ಡ ರೀತಿಯಲ್ಲಿ ಕೆಲವರಲ್ಲಿಯೇ ಕೇಂದ್ರಿಕೃತವಾಗಿದ್ದ ಕಾರಣದಿಂದ, ಸರ್ಕಾರಗಳ ಈ ಎಲ್ಲಾ ಕಾರ್ಯಕ್ರಮಗಳ ಪ್ರಯೋಜನವನ್ನು ಬಹುತೇಕ ಶ್ರೀಮಂತ ರೈತರು ಮತ್ತು ಭೂ ಮಾಲೀಕರು ಮಾತ್ರ ಪಡೆಯುವಂತಾಯಿತು. ಇದರಿಂದ ಗ್ರಾಮೀಣ ಪ್ರದೇಶದಲ್ಲಿ ಶ್ರೀಮಂತರು ಮತ್ತು ಬಡವರ ನಡುವಿನ ಅಂತರ ಹೆಚ್ಚಳವಾಯಿತು. ಇವು ಬಹು ಸಂಖ್ಯಾತ ರೈತರ ಅಕ್ರೋಷಕ್ಕೆ ಕಾರಣವಾಯಿತು.

ಈ ನಡುವೆ ನೀರಾವರಿ ಯೋಜನೆಗಳ ಜಾರಿ, ಕೃಷಿ ಉತ್ಪನ್ನ ಬೆಲೆ ಇತ್ಯಾದಿ ಪ್ರಶ್ನೆಗಳ ಮೇಲೆ ರಾಜ್ಯದ ಹಲವು ಕಡೆ ಅನೇಕ ಹೋರಾಟಗಳು ನಡೆದಿದ್ದವು. ಇದರಲ್ಲಿ ಅತ್ಯಂತ ಪ್ರಮುಖವಾದದ್ದು, ರಾಜ್ಯದ ರಾಜಕೀಯದಲ್ಲಿ ಪಲ್ಲಟಗಳನ್ನು ಉಂಟು ಮಾಡಿದ ನರಗುಂದ ನವಲಗುಂದ ರೈತರ ಹೋರಾಟ. 'ಮಲಪ್ರಭ' ನೀರಾವರಿ ಯೋಜನೆ ಮತ್ತು ಸಂಬಂಧಿಸಿದ ಪ್ರಶ್ನೆಗಳ ಆಧಾರದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಗೆಳೆಯರಾದ ಶ್ರೀ ವಿ.ಎನ್. ಹಳಕಟ್ಟಿ, ಶ್ರೀ ಕಪ್ಪನವರ್ ಹಾಗೂ ಸ್ಥಳೀಯ ಮುಖಂಡರಾದ ಶ್ರೀ ಬಿ.ಆರ್. ಯಾವಗಲ್‌ರನ್ನು ಒಳಗೊಂಡು ಏಳು ಜನರ ಸಂಚಾಲಕರೊಂದಿಗೆ 'ಮಲಪ್ರಭ ಅಚ್ಚುಕಟ್ಟು ಪ್ರದೇಶದ ರೈತ ಹೋರಾಟದ ಸಮನ್ವಯ ಸಮಿತಿ' ಯನ್ನು ರಚಿಸಿಕೊಂಡು ನಡೆಸಿದ ಹೋರಾಟ ಇದಾಗಿದೆ.

ಈ ಹೋರಾಟದ ತೀವ್ರತೆ ಎಷ್ಟಿತೆಂದರೆ, ರೈತಾಪೀ ಜನತೆಯ ಅತೃಪ್ತಿಯು ಮಹಾನ್ ಚಂಡಮಾರುತದಂತೆ ಅಪ್ಪಳಿಸಿ ಮೂರು ದಶಕಗಳ ಕಾಲ ಅಜೇಯವಾಗಿ ಅಧಿಕಾರ ನಡೆಸುತ್ತಿದ್ದ ಕಾಂಗ್ರೇಸ್ ಪಕ್ಷದ ನಾಯಕತ್ವದ ರಾಜ್ಯ ಸರ್ಕಾರವನ್ನು ಕಿತ್ತು ಏಸೆಯಿತು. ರಾಜ್ಯದಲ್ಲಿ ಆ ಸಂದರ್ಭಕ್ಕೆ ಉಂಟಾಗಿದ್ದ ರಾಜಕೀಯ ಬದಲಾವಣೆಗಳು ಸಹ ಇದಕ್ಕೆ ಪೂರಕವಾಗಿ ಕೆಲಸ ಮಾಡಿದವು. ಬಾರಿ ಮುಖ್ಯವಾಗಿ ರಾಜ್ಯದಲ್ಲಿ ಪ್ರಪ್ರಥಮ ಬಾರಿಗೆ ಸಂಘಟಿತ ಕಾರ್ಮಿಕ ವರ್ಗ, ವಿದ್ಯಾರ್ಥಿಗಳು ಇತ್ಯಾದಿ ಜನವಿಭಾಗಗಳ ಬೆಂಬಲವು ಈ ಹೋರಾಟಕ್ಕೆ ಸಕ್ರಿಯವಾಗಿ ಸಿಕ್ಕಿತು.

ಈ ನಡುವೆ ನಮ್ಮ ರಾಜ್ಯದಲ್ಲಿ ಸರ್ಕಾರಗಳ ಹಸಿರು ಕ್ರಾಂತಿ ನೀತಿಗಳ ಪ್ರಯೋಜನವನ್ನು ಪಡೆದುಕೊಂಡ ಶ್ರೀಮಂತ ರೈತರು ಹಾಗು ಭೂಮಾಲೀಕ ವರ್ಗ ತನ್ನ ಅದೇ 'ರೈತ ಸಂಘಟನೆ'ಗಳನ್ನು ಕಟ್ಟಿಕೊಂಡು ಇಂತಹ ನೀತಿಗಳ ಮತ್ತಷ್ಟು ವೇಗವಾಗಿ ಜಾರಿಯಾಗಬೇಕೆನ್ನುವ ಹೋರಾಟಗಳನ್ನು ನಡೆಸಲು ಶರುಮಾಡಿಕೊಂಡಿತ್ತು. ಇಂತಹ ಪ್ರಯತ್ನಗಳ ಮುಂದುವರಿದ ಭಾಗವಾಗಿಯೇ ಶಿವಮೊಗ್ಗ ಕೇಂದ್ರಿತ ರೈತ ಹೋರಾಟಗಾರ ಶ್ರೀ ಹೆಚ್.ಎಸ್. ರುದ್ರಪ್ಪನವರು, ಪ್ರೋ. ನಂಜುಡಸ್ವಾಮಿ, ಶ್ರೀ ಸುಂದರೇಶ್ ಮತ್ತಿತರು ಸೇರಿ ಪ್ರಧಾನವಾಗಿ ನೀರಾವರಿ ಪ್ರದೇಶದ ರೈತರ ಪ್ರಶ್ನೆಗಳ ಆಧಾರದಲ್ಲಿ 1980 ದಶಕದ ಆರಂಭದಲ್ಲಿ 'ಕರ್ನಾಟಕ ರಾಜ್ಯ ರೈತ ಸಂಘ' ವನ್ನು ಆರಂಭ ಮಾಡಿದರು.

ಕರ್ನಾಟಕ ರಾಜ್ಯ ರೈತ ಸಂಘವು ಶ್ರೀಮಂತ ರೈತರನ್ನು ಕೇಂದ್ರವಾಗಿ ಇಟ್ಟುಕೊಂಡು, ಅವರ ಪ್ರಶ್ನೆಗಳ ಮೇಲೆ ಅನೇಕ ಪ್ರಭಾವಿ ಹೋರಾಟಗಳನ್ನು ನಡೆಸಿದ್ದ ಈಗ ಇತಿಹಾಸ.

ನವ ಉದಾರವಾದಿ ಆರ್ಥಿಕ ಧೋರಣೆಗಳ ಕಾಲಘಟ್ಟ :

ಈ ನಡುವೆ ಕೇಂದ್ರ ಸರ್ಕಾರಗಳು ಹಾಗು ಬಹುತೇಕ ರಾಜ್ಯ ಸರ್ಕಾರಗಳು ತನ್ನ ಹಳೇ ನೀತಿಗಳನ್ನೇ ಮುಂದುವರಿಸಿವೆ. ಇದರ ಫಲವಾಗಿ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಗಳ ಎಲ್ಲಾ ಸೌಲಭ್ಯಗಳ ಲಾಭವನ್ನು ನಿರಂತರವಾಗಿ ಪಡೆಯುತ್ತ ಶ್ರೀಮಂತ ರೈತರು ಮತ್ತು ಭೂಮಾಲೀಕ ವರ್ಗ ಮತ್ತಷ್ಟು ಸಂಪತ್ತನ್ನು ಕ್ರೋಡಿಕರಿಸಿಕೊಂಡು ತನ್ನ ಹಳೇ ಪಾಳೆಗಾರ ಭೂ ಮಾಲೀಕ ಸ್ವರೂಪದಿಂದ ಹೊರಗೆ ಬಂದು ಬಂಡವಾಳ ಶಾಹಿ ಭೂ ಮಾಲೀಕ ವರ್ಗವಾಗಿ ಮಾರ್ಪಟ್ಟರು ಮಾತ್ರವಲ್ಲ, ಗ್ರಾಮೀಣ ಪ್ರದೇಶದ ರಾಜಕೀಯ, ಸ್ಥಳೀಯ ಚುನಾಯಿತ ಸಂಸ್ಥೆಗಳು, ಸಹಕಾರಿ ಬ್ಯಾಂಕ್‌ಗಳು, ಬಡ್ಡಿ ವ್ಯವಹಾರ, ಗುತ್ತಿಗೆದಾರರು, ಬೀಜ, ಗೊಬ್ಬರದ ಅಂಗಡಿಗಳು, ಬಾರ್, ಹೋಟೆಲ್, ಸಿನಿಮಾ ಮಂದಿರಗಳು ಹೀಗೆ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಹಿಡಿತವನ್ನು ಸಾಧಿಸ ತೊಡಗಿದ್ದಾರೆ ಮತ್ತು ಆಳುವ ಪಕ್ಷಗಳ ಗಟ್ಟಿ ಬೆಂಬಲಿಗರಾಗಿ ನಿಲುತ್ತಿದ್ದಾರೆ.

ಇಂತಹ ನೀತಿಗಳಿಂದ ಕೃಷಿ ಬಿಕ್ಕಟ್ಟ ಮತ್ತಷ್ಟು ಉಲ್ಬಣಗೊಂಡಿತು. ಪ್ರತಿಭಟನೆಗಳು, ಹೋರಾಟಗಳ ವ್ಯಾಪಕವಾಗಿ ತೊಡಗಿದವು. ಇಂತಹ ಸ್ಥಿತಿಯಲ್ಲಿ ಗ್ರಾಮೀಣಾ ಪ್ರದೇಶದ ಬಹುಸಂಖ್ಯಾತರ ಹಿತ ರಕ್ಷಣೆಗೆ ಕ್ರಮಗಳನ್ನು ಕೈಗೊಳ್ಳುವ ಬದಲಿಗೆ ಜಾಗತೀಕ ಹಣಕಾಸು ಬಂಡವಾಳಗಾರರನ್ನು ತೃಪ್ತಿ ಪಡಿಸಲು ಮತ್ತು ಅವರ ಕಿರಿಯ ಪಾಲುದಾರರಾಗಿ ದೇಶದ ಬಂಡವಾಳಗಾರರನ್ನು ಬೆಳೆಸಲು ಸರ್ಕಾರಗಳು, ನವಉದಾರವಾದಿ ಆರ್ಥಿಕ ದೋರಣೆಗಳನ್ನು ಜಾರಿ ಮಾಡ ತೊಡಗಿದವು. 1991 ರಲ್ಲಿ ಕಾಂಗ್ರೆಸ್‌ನ ಪಿ.ವಿ. ನರಸಿಂಹರಾವ್ ರವರ ಸರ್ಕಾರದಿಂದ ಆರಂಭವಾಗಿ ಆ ನಂತರದ ಎಲ್ಲಾ ಕೇಂದ್ರ ಸರ್ಕಾರಗಳು ಇದೇ ನೀತಿಗಳನ್ನು ಮುಂದುವರಿಸಿದ್ದಾರೆ. ಬಿಜೆಪಿ ನಾಯಕತ್ವದ ಕೇಂದ್ರ ಸರ್ಕಾರ ಇದರ ವೇಗವನ್ನು ಮತ್ತಷ್ಟು ಹೆಚ್ಚಿಸಿದೆ. ಬಹುತೇಕ ರಾಜ್ಯ ಸರ್ಕಾರಗಳು ಇದೇ ನೀತಿಗಳನ್ನು ಜಾರಿ ಮಾಡುತ್ತಿವೆ. ಇದರ ಪರಿಣಾಮವೇ ಡಂಕಲ್ ಪ್ರಸ್ತಾಪಗಳು, ಗ್ಯಾಟ್ ಒಪ್ಪಂದ, ವಿಶ್ವ ವ್ಯಾಪಾರಿ ಸಂಘಟಣೆ, ಇತ್ಯಾದಿಗಳು. ಈ ನೀತಿಗಳ ಫಲವಾಗಿ ಕೃಷಿ ಉತ್ಪಾದನೆ, ಮಾರುಕಟ್ಟೆ ಎಲ್ಲವನ್ನು ಜಾಗತೀಕ ಬಂಡವಾಳಗಾರರಿಗೆ ಒಪ್ಪಿಸಲಾಗುತ್ತಿದೆ. ಮುಕ್ತ ವ್ಯಾಪಾರಿ ಒಪ್ಪಂದಗಳ ಮೂಲಕ ವಿದೇಶಿ ಕೃಷಿ ಉತ್ಪನ್ನಗಳು ದೊಡ್ಡ ರೀತಿಯಲ್ಲಿ ದೇಶಕ್ಕೆ ಆಮದಾಗಲು ಅವಕಾಶಗಳನ್ನು ಕೊಡಲಾಗುತ್ತಿದೆ. ಇದರಿಂದ ದೇಶಿಯ ಕೃಷಿ ಉತ್ಪನ್ನಗಳ ಬೆಲೆಗಳು ಕುಸಿದು, ರೈತರು ದಿವಾಳಿಯಾಗುತ್ತಿದ್ದಾರೆ. ಮಾತ್ರವಲ್ಲ ಇತ್ತೀಚೆಗೆ ಇನ್ನೂ ಹಲವು ಹೆಜ್ಜೆಗಳು ಮುಂದೆ ಹೋಗಿ ಸಣ್ಣ ಪುಟ್ಟ ರೈತರು, ಸಣ್ಣ ಸಣ್ಣ ಹಿಡುವಳಿಗಳಲ್ಲಿ ಕೃಷಿ ಲಾಭದಾಯಕವಲ್ಲವೆಂದು, ಇದಕ್ಕೆ ಕಂಪನಿ ಕೃಷಿಯೇ ಪರಿಹಾರವೆಂದು ಬಾರಿ ದೊಡ್ಡ ರೀತಿಯಲ್ಲಿ ವಾದ ಮಾಡಲಾಗುತ್ತಿದೆ. ಈ ದಿಕ್ಕಿನಲ್ಲಿ ಭೂ ಸುಧಾರಣಾ ಕಾನೂನುಗಳು ಕೃಷಿ ಮಾರುಕಟ್ಟೆ ಇತ್ಯಾದಿ ಕಾನೂನುಗಳಲ್ಲಿ ತಿದ್ದುಪಡಿಗಳನ್ನು ತರಲಾಗುತ್ತಿದೆ. ಇಂತಹ ನೀತಿಗಳಿಂದ ಕೃಷಿ ಬಿಕ್ಕಟ್ಟು ಮತ್ತಷ್ಟು ಉಲ್ಬಣಗೊಳ್ಳುತ್ತಿದೆ. ಇದರ ಫಲವಾಗಿ ಈಗ ನಡೆಯುತ್ತಿರುವ ರೈತರ ಆತ್ಮಹತ್ಯೆಗಳು ಮೂರು, ನಾಲ್ಕು ಪಟ್ಟು ಹೆಚ್ಚಳವಾಗಿವೆ.

ಈ ನವ ಉದಾರವಾದಿ ಆರ್ಥಿಕ ಧೋರಣೆಗಳ ವಿರುದ್ಧ ರಾಜ್ಯದಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ರಾಜ್ಯ ರೈತ ಸಂಘಗಳು ಅನೇಕ ಹೋರಾಟಗಳನ್ನು ನಡೆಸಿವೆ. ಪ್ರಚಾರ, ಪ್ರತಿಭಟನೆ, ಪೋಲಿಸ್ ಲಾಠಿ ಚಾರ್ಜ್‌ಗಳು, ಜೈಲ್ ವಾಸ ಇತ್ಯಾದಿಗಳನ್ನು ಎದುರಿಸಲಾಗಿದೆ. ಆದರೂ ಈ ನೀತಿಗಳು ಜಾರಿಯಲ್ಲಿವೆ. ಮುಂದಿನ ದಿನಗಳಲ್ಲಿ ಮತ್ತು ತೀವ್ರತರವಾಗಿ ಜಾರಿಯಾಗಲಿವೆ.

ಈ ಒಟ್ಟಾರೆ ಪರಿಸ್ಥಿತಿಯನ್ನು ಸರಿಯಾದ ರೀತಿಯಲ್ಲಿ ವಿಶ್ಲೇಷಣೆ ಮಾಡಿ ಭೂಮಿ, ಕೂಲಿ, ಬೆಂಬಲ ಬೆಲೆ, ಬ್ಯಾಂಕ್ ಸಾಲದಂತಹ ಹೋರಾಟದ ಬೇಡಿಕೆಗಳು, ಹೋರಾಟದ ಸ್ವರೂಪ ಹಾಗು ಗ್ರಾಮೀಣಾ ದಲಿತರು, ಇತರೆ ಕಸಬುದಾರರನ್ನು ಒಳಗೊಂಡ ರೈತ ಚಳುವಳಿಯನ್ನು ಸಂಘಟಿಸಬೇಕಿದೆ. ಜಾತಿತಾರತಮ್ಯ, ಅಸ್ಪೃಶ್ಯತೆ ಪ್ರಶ್ನೆಗಳನ್ನು ಸಹ ಎತ್ತಿ ಹೋರಾಟಗಳನ್ನು ನಡೆಸುತ್ತಾ ಈ ವಿಭಾಗದ ಶ್ರಮಿಕರನ್ನು ಸಹ ಪ್ರಜ್ಞಾ ಪೂರಕವಾಗಿ ರೈತ ಚಳುವಳಿ ಒಳಗೊಳ್ಳಬೇಕಿದೆ.

ರಾಜ್ಯ ಹಾಗು ರಾಷ್ಟ್ರ ಮಟ್ಟದಲ್ಲಿ ಸಮರಶೀಲ ಹೋರಾಟಗಳಿಂದ ಮಾತ್ರ ನಮ್ಮ ಮುಂದಿರುವ ಸವಾಲುಗಳನ್ನು ಎದುರಿಸಬಹುದಾಗಿದೆ. ನಮ್ಮ 'ಶತ್ರು'ವನ್ನು ಪತ್ತೆ ಹಚ್ಚುವುದು ತೀರ ಸಂಕೀರಣವಾಗಿದೆ. ಏಕೆಂದರೆ ನಮ್ಮ 'ಶತ್ರು' ನಮ್ಮ ಗ್ರಾಮದಲ್ಲಿ ಇದ್ದಾನೆ. ಬೆಂಗಳೂರು, ದೆಹಲಿಯಲ್ಲಿ ಮಾತ್ರವಲ್ಲ ಜಗತ್ತಿನ ಎಲ್ಲೆಡೆ ಇದ್ದಾನೆ. ಹೀಗಾಗಿ 'ಶತ್ರು ವರ್ಗ' ವನ್ನು ಸಮಗ್ರವಾಗಿ ಅರ್ಥ ಮಾಡಿಕೊಳ್ಳುವ ರಾಜಕೀಯ ಪ್ರಜ್ಞೆ, ಸೈದ್ಧಾಂತಿಕ ಸ್ಪಷ್ಟತೆಯಿಂದ ಕೂಡಿದ ರೈತ ಹೋರಾಟಗಳಿಂದ ಮಾತ್ರ ಮುನ್ನಡೆ ಸಾಧಿಸಲು ಸಾಧ್ಯವಿದೆ. ಇಂತಹ ಸೈದ್ಧಾಂತಿಕ ಸ್ಪಷ್ಟತೆ, ಬದ್ಧತೆ, ಪ್ರಾಮಾಣಿಕತೆ, ನೈತಿಕತೆ ಇರುವ ಹತ್ತಾರು ಸಾವಿರ ಕಾರ್ಯಕರ್ತರು ಗ್ರಾಮ ಮಟ್ಟದಲ್ಲಿ ಕೆಲಸಕ್ಕೆ ಇಳಿಯಬೇಕಿದೆ. ಇಂತಹ ಕಾರ್ಯಕರ್ತರಿಂದ ಕೂಡಿದ ಸಮರಶೀಲ ಚಳುವಳಿಗಳಿಂದ ಮಾತ್ರ ಈ ಸವಾಲುಗಳನ್ನು ಎದುರಿಸಲು ಸಾಧ್ಯವಾಗುತ್ತದೆ.

ಹೀಗಾಗಿಯೇ ಕರ್ನಾಟ ಪ್ರಾಂತ ರೈತ ಸಂಘ, ಈ ಬಗ್ಗೆ ಸಾಕಷ್ಟು ಚರ್ಚೆಗಳನ್ನು ನಡೆಸಿ ಜಾಗತೀಕರಣದ ನೀತಿಗಳಿಗೆ ಪರ್ಯಾಯವಾಗಿ 'ಪರ್ಯಾಯ ಕೃಷಿ ನೀತಿ'ಯನ್ನು ಅಂಗೀಕರಿಸಿದೆ. ಸಮಸ್ಯೆಗೆ ಪರಿಹಾರ, ಕೃಷಿಯ ಕಂಪನಿಕರಣವಲ್ಲ, ಸಾಮೂಹಿಕ, ಸಹಕಾರಿ ಕೃಷಿ ಪದ್ದತಿಗಳ ಮೂಲಕ ಮಾತ್ರ ಕೃಷಿಯನ್ನು ರಕ್ಷಿಸಬಹುದಾಗಿದೆ. ಇವತ್ತಿನ ನವ ಉದಾರವಾದಿ ದೋರಣೆಗಳಿಂದ ಬಿಕ್ಕಟ್ಟಿಗೆ ಸಿಲುಕಿರುವ ಶೇ. 90 ಕ್ಕಿಂತ ಹೆಚ್ಚಿನ ಕೃಷಿ ಕೂಲಿಕಾರರು, ಬಡ ರೈತರು, ಮಧ್ಯಮ ರೈತರು ವಿವಿಧ ಕಸುಬುದಾರರು, ಕೆಲವು ಪ್ರಶ್ನೆಗಳ ಆಧಾರದಲ್ಲಿ ಶ್ರೀಮಂತ ರೈತರನ್ನು ಒಳಗೊಂಡು ಈ ಪರ್ಯಾಯ ಹೋರಾಟಗಳು ಮತ್ತು ನೀತಿಗಳನ್ನು ರೂಪಿಸಲಾಗಿದೆ.

ಇಂತಹದೇ ಪರ್ಯಾಯ ನೀತಿಗಳು, ಸ್ಪಷ್ಟತೆ ರಾಜ್ಯದ ಎಲ್ಲಾ ರೈತ ಚಳುವಳಿಗಳಿಗೆ ಇದೆಯೆಂದು ನಾನು ಹೇಳಲಾರೆ. ಆದರೆ ಜಾಗತೀಕ ಹಣಕಾಸು ಬಂಡವಾಳ, ಇದರ ಪರವಾಗಿರುವ ದೇಶದ ದೊಡ್ಡ ದೊಡ್ಡ ಬಂಡವಾಳಗಾರರು, ಗ್ರಾಮೀಣಾ ಪ್ರದೇಶಗಳಲ್ಲಿ ಇವರ ಬೆಂಬಲಕ್ಕೆ ನಿಂತಿರುವ ಬಂಡವಾಳಶಾಹಿ ಭೂಮಾಲೀಕ ವರ್ಗ ಮತ್ತು ಇವರ ಏಜೆಂಟ್‌ರನ್ನು ವಿರೋಧಿಸುವ ಸ್ಪಷ್ಟತೆ ಇದ್ದರೆ ಮಾತ್ರ ಇವರು ಮತ್ತು ಇವರ ಧೋರಣೆಗಳಿಗೆ ವಿರುದ್ಧವಾದ ಜನಪರವಾದ ಪರ್ಯಾಯ ಶಕ್ತಿಗಳನ್ನು ಕಟ್ಟಬಹುದಾಗಿದೆ.

ಇದು ಇವತ್ತಿನ ರೈತ ಚಳುವಳಿಗಳು ಮುಂದಿರುವ ಸವಾಲುಗಳು. ಇವತ್ತಿನ ಈ ಗಂಭೀರವಾದ ಕಾರ್ಷಿಕ ಪರಿಸ್ಥಿತಿಯನ್ನು ಸಮಗ್ರವಾಗಿ ಅರ್ಥ ಮಾಡಿಕೊಂಡು, ಗ್ರಾಮೀಣ ಪ್ರದೇಶದ ಜನತೆಯಲ್ಲಿ ಉಂಟಾಗುತ್ತಿರುವ ವರ್ಗ ಬಲಾಬಲಾಗಳ ಬದಲಾವಣೆ, ಇವುಗಳ ಆಧಾರದಲ್ಲಿ 'ಮಿತ್ರರ'ನ್ನು ಓಗೂಡಿಸಿ, 'ಶತ್ರು'ಗಳನ್ನು ಗುರುತಿಸಿ ರೈತ ಚಳುವಳಿಗಳು ಮುನ್ನಡೆಯಬೇಕಿದೆ. ಕೃಷಿಯ ಎಲ್ಲಾ ಸಮಸ್ಯೆಗಳಿಗೆ ಕೃಷಿ ಕ್ಷೇತ್ರದ ಒಳಗಿನಿಂದಲ್ಲೇ ಪರಿಹಾರವಿಲ್ಲ. ಇದೇ ರೀತಿಯಲ್ಲಿ ಕೃಷಿಕರ ಸಮಸ್ಯೆಗಳ ಪರಿಹಾರಕ್ಕೂ ಕೃಷಿಕರು ನಡೆಸುವ ಹೋರಾಟಗಳಿಂದ ಮಾತ್ರ ಸಾಧ್ಯವಿಲ್ಲ. ಈಗಾಗೀ ನಗರಗಳಲ್ಲಿ ಇಂತಹದೇ ಸವಾಲುಗಳ ವಿರುದ್ಧ ಹೋರಾಟ ನಡೆಸುತ್ತಿರುವ ಕಾರ್ಮಿಕ ವರ್ಗ ಮತ್ತು ರೈತ ಚಳುವಳಿಗಳು ಒಗ್ಗೂಡಿದರೆ ಮಾತ್ರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಾಧ್ಯ. ಈ ನಿಟ್ಟಿನಲ್ಲಿ ಈಗಾಗಲೇ ಆರಂಭವಾಗಿರುವ ಪ್ರಯತ್ನಗಳನ್ನು ಮತ್ತಷ್ಟು ಬಲಪಡಿಸುವುದು ಇವತ್ತಿನ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸುವಲ್ಲಿ ನಿರ್ಣಾಯಕವಾಗುತ್ತದೆ. ●

ಇಲ್ಲಿ ಹೀಗಾಗುತ್ತಿದೆ ಏಕೆ?

ಹೆಪ್ಪಾದ ರಾತ್ರಿಯಲಿ ಪೆಚ್ಚಾದ ಬಾನು
ಅಳುವ ನಕ್ಷತ್ರ ಸೊರಗಿದ ಚಂದ್ರ,
ಎದೆಯ ಅಂಗಳದಲ್ಲಿ
ನಿಶಬ್ದ ಸಾವಿನ ಸದ್ದು,
ಕಾಡುತ್ತಿದೆ ಭಯದ ಕರಿ ನೆರಳು
ದೊಡ್ಡ ಗಿಡ್ಡ ಉದ್ದಗಲ
ಅನಿಶ್ಚಿತ ವಿಕೃತ ಕುಣಿತ!

ಹೇಳಿ
ಹೀಗಾಗುತ್ತಿದೆ ಏಕಿಲ್ಲಿ?
ಶಾಂತಗೀತೆಯ ಬದಲು ಚಮರಗೀತೆ
ಕೊರಳ ತುಂಬೆಲ್ಲ ನೋಟು ಹಾರ
ಅಹಂ ಕಿರೀಟತೊಟ್ಟ
ಕುರುಡ ಕುಣಿತ.
ಎಚ್ಚರವ ಮರೆತು, ಮಚ್ಚರವ ಬೆರೆತ
ಹೆಜ್ಜೆ ಮೇಲ್ಹೆಜ್ಜೆ
ಸದ್ದಿಲ್ಲದೆ ನೆಲ ಮುಗಿಲು ಕಬಳಿಸುವ
ವಾಮನ ಕಜ್ಜೆ!.
ಕತ್ತಲಾತ್ಮದ ಕೊರಗು, ಗರಬಡಿದ ಬೆಳಗು.

ಹೇಳಿ
ಹೀಗಾಗುತ್ತಿದೆ ಏಕೆ?
ನುಣ್ಣಗೆ ಮರಿ ಮೈ ನೆಕ್ಕಿ
ರುಚಿಯ ಹದ ಉಕ್ಕಿ, ನೇವಳಿಸಿ ನೆಕ್ಕಿ
ನಾಯಿ ತಾಯಿಯ ಪ್ರೀತಿ ಏಕೆ?
ಹಣತೆ ಹೊತ್ತವರೇಕೆ ಕತ್ತಲಲ್ಲಿ?
ಕಣ್ಣುಗಳಲ್ಲಿ, ನೋಡುವ ನೋಟದಲ್ಲಿ,
ಮಾತಿನಲ್ಲಿ, ಕೇಳುವ ಧ್ವನಿಯಲ್ಲಿ,
ನಕ್ಕ ನಗೆಯಲ್ಲಿ ಮನುಷ್ಯನೆಲ್ಲಿ?

ಹೇಳಿ
ಸೂರ್ಯನೇಕೆ ಅಳುತ್ತಾನೆ?
ನೆಲದೂಡಲ ತುಂಬೆಲ್ಲ ಅನ್ನ ಕನ್ನವ ಹೊಡೆದ
ಕಬ್ಬಿಣದ ಸರಳುಗಳ ಬಂಧವೇಕೆ?
ರಾತ್ರಿಯ ಆತ್ಮರತಿ
ಬೆಳಗಿನ ಮುಖವಾಡ ಧರಿಸಿ
ಕೇಕೆ ಹಾಕಿದ್ದೇಕೆ?
ಬಂಧೂಕದ ಬಾಯಲ್ಲಿ ಹಕ್ಕಿ ಗೂಡಿನ ಬದಲು
ಸಿಡಿಮದ್ದೇಕೆ?
ಲಾಂಗ್, ಚೂರಿ, ಚಾಕುಗಳಿಗೆ
ಮಾತು ಕಲಿಸಿದವರಾರು?

ಹೇಳಿ
ದಯೆ ಕಳಚಿ ಧರ್ಮ
ಅಮಲಾದದ್ದೇಕೆ.
ಗೌರಿ, ಕಲುಬುರ್ಗಿ, ಪಾನ್ಸಾರೆ, ದಾಬೋಲ್ಕರ್
ಕೊಲೆ ಏಕೆ?
ಇಲ್ಲಿ ಹೀಗಾಗುತ್ತಿದೆ
ಇದ್ದದ್ದು ಇಲ್ಲದಂತೆ
ಬಗೆದದ್ದು ಬಾರದಂತೆ
ಬೇಡದ್ದು ಭಂಡೆದ್ದು ಕುಣಿದಂತೆ
ಗಾಂಧೀ ನಕ್ಕ ತುಟಿಮೇಲೆ
ಸಾವು ಹೆಪ್ಪಾದಂತೆ!

ಪಿ.ಆರ್. ವೆಂಕಟೇಶ್

ಅಚ್ಛೇ ದಿನ್‌ಗಳಲ್ಲಿ ಉದ್ಯೋಗ ನಿರ್ಮಾಣ ಎಷ್ಟು? ಮತದಾನದ ಮುಂಚೆ ತಿಳಿಯದು!

ಅಂಕಿ-ಅಂಶಗಳನ್ನು ಕೊಡಲು ಮೂರನೇ ಬಾರಿ ಹಿಂದೇಟು ಹಾಕಿದ ಸರಕಾರ!

ಮೂರನೇ ಬಾರಿ, ದೇಶದಲ್ಲಿ ಉದ್ಯೋಗ ನಿರ್ಮಾಣ ಕುರಿತಂತೆ ಅಂಕಿ-ಅಂಶಗಳ ಬಿಡುಗಡೆಯನ್ನು ಅಚ್ಛೇ ದಿನ್ ಸರಕಾರ ನಿಲ್ಲಿಸಿದೆ. 'ಕಿರುಘಟಕಗಳು ಅಭಿವೃದ್ಧಿ ಮತ್ತು ಮರು ಹಣಕಾಸು'(ಮುದ್ರಾ) ಯೋಜನೆಯ ಅಡಿಯಲ್ಲಿ ನಿರ್ಮಾಣಗೊಂಡ ಉದ್ಯೋಗಗಳನ್ನು ಕುರಿತಂತೆ ಲೇಬರ್ ಬ್ಯೂರೊ ಅಂಕಿ-ಅಂಶಗಳನ್ನು ಬಿಡುಗಡೆ ಮಾಡಬೇಕಿತ್ತು. ಆದರೆ ಈಗ ಅದನ್ನು ಕನಿಷ್ಟ ಎರಡು ತಿಂಗಳು ಅಂದರೆ ಲೋಕಸಭಾ ಚುನಾವಣೆಗಳು ಮುಗಿಯುವ ವರೆಗೆ ಮುಂದೂಡಲಾಗಿದೆ. ಇದಕ್ಕೆ ಕೊಟ್ಟಿರುವ ಕಾರಣ, ಸರ್ವೆಯಲ್ಲಿ ಬಳಸಿದ ವಿಧಾನದಲ್ಲಿ ಕೆಲವು ತಪ್ಪುಗಳು, ದೋಷಗಳು 'ತಜ್ಞರ ಸಮಿತಿಗೆ ಕಂಡು ಬಂದಿವೆ, ಅವನ್ನು ಸರಿಪಡಿಸಿ ಬಿಡುಗಡೆ ಮಾಡಲಾಗುವುದಂತೆ, ಅದಕ್ಕೆ ಕನಿಷ್ಟ ಎರಡು ತಿಂಗಳುಗಳು ಬೇಕಂತೆ.

ಇದಕ್ಕೆ ಮೊದಲು ಈ ಸರಕಾರ ಉದ್ಯೋಗ- ನಿರುದ್ಯೋಗ ಕುರಿತಂತೆ ಎರಡು ಸರ್ವೆಗಳ ಅಂಕಿ-ಅಂಶಗಳು ಬಿಡುಗಡೆಯಾಗದಂತೆ ತಡೆದಿದೆ. ಜನವರಿ 2019ರಲ್ಲಿ, ರಾಷ್ಟ್ರೀಯ ಸ್ಯಾಂಪಲ್ ಸರ್ವೆ ಕಚೇರಿ(ಎನ್‌ಎಸ್‌ಎಸ್‌ಒ) ಸಿದ್ದಪಡಿಸಿದ್ದ, ಉದ್ಯೋಗ-ನಿರುದ್ಯೋಗ ಅಂಕಿ-ಅಂಶಗಳ ವರದಿಯನ್ನು ಈ ಸರಕಾರ ರದ್ದುಪಡಿಸಿತ್ತು. ಇದು ನೋಟುರದ್ದತಿಯ ನಂತರದ ಅವಧಿಯನ್ನು ಒಳಗೊಂಡ ಮೊದಲ ಸರ್ವೆಯಾಗಿತ್ತು.

ಇದಲ್ಲದೆ, ಜೂನ್ 2018ರಲ್ಲಿ ಕಾರ್ಮಿಕ ಮಂತ್ರಾಲಯದ ಒಂದು ಹೇಳಿಕೆಯ ಪ್ರಕಾರ ಲೇಬರ್ ಬ್ಯುರೊದ ಆರನೇ ವಾರ್ಷಿಕ ಉದ್ಯೋಗ-ನಿರುದ್ಯೋಗ ಸರ್ವೆಯ ಕ್ಷೇತ್ರಕಾರ್ಯಗಳು ಮುಗಿದಿದ್ದು ಸಪ್ಟಂಬರ್ 2018ರಲ್ಲಿ ವರದಿ ಬಿಡುಗಡೆಯಾಗಬೇಕಿತ್ತು. ಇದಕ್ಕೆ ಕೇಂದ್ರ ಸಂಪುಟದ ಮಂಜೂರಾತಿಯೂ ಸಿಕ್ಕಿದೆ ಎಂದೂ ವರದಿಯಾಗಿತ್ತು. ಆದರೆ ಇದುವರೆಗೂ ಅದು ಬೆಳಕು ಕಾಣಲು ಸರಕಾರ ಬಿಟ್ಟಿಲ್ಲ.

ಎನ್‌ಎಸ್‌ಎಸ್‌ಒ ಸರ್ವೆಯ ಪ್ರಕಾರ ನಿರುದ್ಯೋಗ ದರ 2017-18ರಲ್ಲಿ 6.1%ಕ್ಕೆ ಏರಿದ್ದು, ಇದು ಕಳೆದ 45 ವರ್ಷಗಳಲ್ಲೇ ಅತಿ ಹೆಚ್ಚು ಎಂದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ಆದ್ದರಿಂದಲೇ ಇದನ್ನು ಸರಕಾರ ಅಧಿಕೃತವಾಗಿ ಬಿಡುಗಡೆಮಾಡಿಲ್ಲ, ಈ ಹಿನ್ನೆಲೆಯಲ್ಲಿ ರಾಷ್ಟ್ರೀಯ ಸಾಂಖ್ಯಿಕ ಆಯೋಗದ ಇಬ್ಬರು ಹಿರಿಯ ಸದಸ್ಯರು ರಾಜೀನಾಮೆ ನೀಡಿದ್ದಾರೆ ಎಂಬ ಸುದ್ದಿಯನ್ನು ಈಗಾಗಲೇ ಈ ಪತ್ರಿಕೆಯಲ್ಲಿ ಓದಿದ್ದೀರಿ.

ಲೇಬರ್ ಬ್ಯುರೋದ ಆರನೇ ವಾರ್ಷಿಕ ಸರ್ವೆ ವರದಿಯ ಪ್ರಕಾರ ಕೂಡ ನಿರುದ್ಯೋಗ 2016-17ರಲ್ಲಿ ಹಿಂದಿನ ನಾಲ್ಕು ವರ್ಷಗಳಲೇ ಅತಿ ಹೆಚ್ಚು ಎಂದು ಕಂಡು ಬಂದಿದೆ. ಬಹುಶಃ ಅದರಿಂದಾಗಿಯೇ ಆ ವರದಿಯನ್ನು ಕೂಡ ತಡೆದಿಡಲಾಯಿತು.

ಬಜೆಟ್ ಅಧಿವೇಶನದ ಕೊನೆಯಲ್ಲಿ ಮಾತನಾಡುತ್ತ ಸ್ವತಃ ಪ್ರಧಾನ ಮಂತ್ರಿಗಳು ತಮ್ಮ ಅಧಿಕಾರಾವಧಿಯಲ್ಲಿ 10 ಕೋಟಿ ಉದ್ಯೋಗಗಳ ಆಶ್ವಾಸನೆ ಬಹಳ ದೂರವೇ ಉಳಿದಿದೆ, ವಾಸ್ತವವಾಗಿ ಉದ್ಯೋಗ ನಿರ್ಮಾಣದ ಬದಲು ಉದ್ಯೋಗ ನಷ್ಟವೇ ಆಗಿದೆ ಎಂಬ ಟೀಕೆಗಳನ್ನು ಬಲವಾಗಿ ನಿರಾಕರಿಸುತ್ತ, ಬಹಳಷ್ಟು ಉದ್ಯೋಗಗಳು ನಿರ್ಮಾಣವಾಗಿವೆ, ಆದರೆ ಅದರ ಅಂಕಿ-ಅಂಶಗಳೇ ಸರಿಯಾಗಿಲ್ಲ, ತಮ್ಮ ಸರಕಾರ ಸ್ವಯಂ ಉದ್ಯೋಗಕ್ಕೆ ಹೆಚ್ಚಿನ ಒತ್ತು ನೀಡಿರುವುದರಿಂದ ಅಲ್ಲಿ ಬಹಳಷ್ಟು ಉದ್ಯೋಗಗಳು ನಿರ್ಮಾಣವಾಗಿವೆ ಎನ್ನುತ್ತ ಈ 'ಮುದ್ರಾ'ಯೋಜನೆಯ ಉದಾಹರಣೆ ನೀಡಿದರು. ಈ ಯೋಜನೆಯ ಅಡಿಯಲ್ಲಿ 4.25 ಕೋಟಿ ಹೊಸಬರು ಉದ್ದಿಮೆ ತೆರೆಯಲು ಸಾಲ ಪಡೆದಿದ್ದಾರೆ ಎಂದರು, ಅಷ್ಟು ಉದ್ಯೋಗಗಳು ನಿರ್ಮಾಣವಾಗಿವೆ ಎಂಬುದು ಅವರ ಪರೋಕ್ಷ ಇಂಗಿತವಾಗಿತ್ತು ಎಂದು ಕಾಣುತ್ತದೆ.

ಆದರೆ ಈಗ 'ಮುದ್ರಾ' ಯೋಜನೆಯ ಅಡಿಯಲ್ಲಿ ನಿರ್ಮಾಣಗೊಂಡ ಉದ್ಯೋಗಗಳನ್ನು ಕುರಿತ ಸರ್ವೆಯ ಕುರಿತ ವರದಿಯೂ ಮೇಲೆ ಹೇಳಿದ ಎರಡು ವರದಿಗಳ ಕತೆಯನ್ನೇ ಹೇಳುತ್ತಿರಬಹುದು, ಆದ್ದರಿಂದಲೇ ಅದನ್ನೂ ತಡೆ ಹಿಡಿಯಲಾಗಿದೆ ಎಂದು ಈ ಕ್ಷೇತ್ರದ ಪರಿಣಿತರು ಹೇಳುತ್ತಿದ್ದಾರೆ.


ಇದು ಎಪ್ರಿಲ್ 8,2015 ರಿಂದ ಜನವರಿ 1, 2019ರ ನಡುವೆ ಮುದ್ರಾ ಸಾಲಗಳನ್ನು ಪಡೆದ 97,000 ಫಲಾನುಭವಿಗಳ ಸರ್ವೆಯಾಗಿದೆ.

ಇದೇ ಜನವರಿ 25ರಂದು ರಾಜ್ಯಸಭೆಗೆ ಸರಕಾರ ನೀಡಿದ ಉತ್ತರದ ಪ್ರಕಾರ 'ಮುದ್ರಾ' ಯೋಜನೆಯ ಅಡಿಯಲ್ಲಿ 15.59 ಕೋಟಿ ಜನಗಳಿಗೆ ಒಟ್ಟು 2.75 ಲಕ್ಷ ಕೋಟಿ ರೂ.ಗಳ ಸಾಲಗಳನ್ನು ಕೊಡಲಾಗಿದೆ, ಅಂದರೆ ಸರಾಸರಿ 17,582 ರೂ. ಇದರಿಂದ ಎಂತಹ ಉದ್ಯೋಗ ಸೃಷ್ಟಿಯನ್ನು ನಿರೀಕ್ಷಿಸಲು ಸಾಧ್ಯ ಎಂದು ಪರಿಣಿತರು ಪ್ರಶ್ನಿಸುತ್ತಿದ್ದಾರೆ.

ಈ ನಡುವೆ ಈ ನಡುವೆ ಇನ್ನೆರಡು ಸುದ್ದಿಗಳನ್ನು ಗಮನಿಸಬೇಕಾಗಿದೆ.

ಒಂದು, ಈ 'ಮುದ್ರಾ' ಸಾಲಗಳಲ್ಲಿಯೂ ಸುಸ್ತಿ ಪ್ರಮಾಣ ಆತಂಕಕಾರಿಯಾಗಿ ಬೆಳೆಯುತ್ತಿದೆ. ಪ್ರಸಕ್ತ ಹಣಕಾಸು ವರ್ಷದ 9ತಿಂಗಳಲ್ಲೇ ಇದು 9770 ಕೋಟಿ ರೂ.ಗಳಿಮದ 14,931 ಕೋಟಿ ರೂ. ಗಳಿಗೆ, ಅಂದರೆ 53%ದಷ್ಟು ಏರಿದೆ.

ಎರಡನೆಯದಾಗಿ, ಸಿಐಐ(ಭಾರತೀಯ ಉದ್ದಿಮೆಯ ಮಹಾ ಒಕ್ಕೂಟ) ಕಿರು, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆ(ಎಂಎಸ್‌ಎಂಇ) ವಲಯದಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ 3.32 ಲಕ್ಷ ಉದ್ಯೋಗಗಳಷ್ಟೇ ನಿರ್ಮಾಣಗೊಂಡಿವೆ ಎಂದು ಹೇಳಿದೆ. 2014-15ರ ಹಿಂದಿನ ಮೂರು ವರ್ಷಗಳಲ್ಲೂ(ಅಂದರೆ ಯುಪಿಎ-2 ಸರಕಾರದ ಅಡಿಯಲ್ಲಿಯೂ) ಇದರ ಸುಮಾರು ಎರಡೂವರೆ ಪಟ್ಟು ಅಂದರೆ 11,54,293 ಉದ್ಯೋಗಗಳು ನಿರ್ಮಾಣಗೊಂಡಿದ್ದವು ಎಂದು ಸರಕಾರೀ ಅಂಕಿ-ಅಂಶಗಳ ಆಧಾರದಲ್ಲಿ ಸಿಐಐ ಲೆಕ್ಕ ಹಾಕಿದೆ.



ಅಚ್ಛೇ ದಿನ್‌ಗಳ 'ಮಹತ್ಸಾಧನೆ'ಗೆ ಈಗ ಕಾರ್ಮಿಕರ ಮುಷ್ಕರದ ಬಿಸಿ

ಅಚ್ಛೇ ದಿನ್‌ಗಳ ಮಾದರಿ ರಾಜ್ಯ ಗುಜರಾತ್‌ನಲ್ಲಿ ನಿರ್ಮಾಣಗೊಂಡಿರುವ 182 ಅಡಿ ಎತ್ತರದ 'ಐಕ್ಯತೆಯ ಪ್ರತಿಮೆ' ಜಗತ್ತಿನಲ್ಲೇ ಅತಿ ಎತ್ತರದ ಪ್ರತಿಮೆ ಎಂದು ಅಚ್ಛೇ ದಿನ್‌ಗಳ 'ಮಹತ್ಸಾಧನೆ'ಗಳ ಪಟ್ಟಿಯಲ್ಲಿ ಸ್ಥಾನ ಪಡೆದಿದೆ. 2989 ಕೋಟಿ ರೂ.ಗಳ ವೆಚ್ಚದ ಸರ್ದಾರ್ ವಲ್ಲಭಭಾಯಿ ಪಟೇಲರ ಈ ಪ್ರತಿಮೆ ನರ್ಮದಾ ನದಿ ದಂಡೆಯ ಸುತ್ತುಮುತ್ತ ವಾಸಿಸುತ್ತಿರುವ ಬಡ ಜನರ ಪ್ರತಿಭಟನೆಗಳ ನಡುವೆ, ಮತ್ತು ಸಾರ್ವಜನಿಕ ವಲಯದ ಉದ್ದಿಮೆಗಳಿಂದ ನಿಧಿಗಳನ್ನು ಸಂಗ್ರಹಿಸಿ ನಿರ್ಮಾಣಗೊಂಡಿದೆ ಎಂದು ಆರಂಭದಿಂದಲೇ ವಿವಾದಕ್ಕೊಳಗಾಗಿತ್ತು.

ಈಗ ಇದು ಮತ್ತೆ ಸುದ್ದಿಯಲ್ಲಿದೆ. ಇದನ್ನು ನೋಡಿಕೊಳ್ಳುವ 100ಕ್ಕೂ ಹೆಚ್ಚು ಕಾರ್ಮಿಕರು/ನೌಕರರಿಗೆ 4 ತಿಂಗಳಿಂದ ಸಂಬಳ ಕೊಟ್ಟಿಲ್ಲವಾದ್ದರಿಂದ ಅವರು ಹೋರಾಟದ ಹಾದಿ ಹಿಡಿಯಬೇಕಾಗಿ ಬಂದಿದೆ, ಈಗಾಗಲೇ ಮಾನವ ಸರಪಳಿ ರಚಿಸಿ ತಮ್ಮ ಪ್ರತಿಭಟನೆಯನ್ನು ನಡೆಸಿರುವ ಇವರು ಮುಷ್ಕರಕ್ಕೆ ಇಳಿಯಬೇಕಾಗಿ ಬಂದಿದೆ ಎಂದು ವರದಿಯಾಗಿದೆ(ನ್ಯೂಸ್‌ಕ್ಲಿಕ್, ಮಾರ್ಚ್ 13)

ಕೇಂದ್ರ ಮತ್ತು ರಾಜ್ಯ ಸರಕಾರ ಇದನ್ನು ಒಂದು ಪ್ರವಾಸಿ ತಾಣವಾಗಿ ಬೆಳೆಸುತ್ತಿವೆ. ಇದರ ನಿರ್ವಹಣೆಯನ್ನು ಅಪ್‌ಡೇಟರ್ ಸರ್ವಿಸಸ್ ಲಿಮಿಟೆಡ್(ಯುಡಿಎಸ್) ಎಂಬ ಕಂಪನಿಗೆ ವಹಿಸಲಾಗಿದೆ. ಇದು 100ಕ್ಕೂ ಹೆಚ್ಚು ಜನಗಳನ್ನು ಸೆಕ್ಯುರಿಟಿ ಗಾರ್ಡ್‌ಗಳು, ಗಾರ್ಡನರ್‌ಗಳು, ಕಸಗುಡಿಸುವವರು, ಲಿಫ್ಟ್‌ಮನ್‌ಗಳು, ಟಿಕೆಟ್ ಚೆಕರ್‌ಗಳು ಮುಂತಾದ ಕೆಲಸಗಳಿಗೆ ಗುತ್ತಿಗೆ ದಿನಗೂಲಿಗಳ ಮೇಲೆ ದುಡಿಸಿಕೊಳ್ಳುತ್ತಿದೆ. ಸರಕಾರದಿಂದ ಪಡೆವ ಅನುದಾನದಿಂದ ಅದು ಸಂಬಳ ಕೊಡಬೇಕಂತೆ.

ನವಂಬರ್‌ನಿಂದ ಜನವರಿ ನಡುವೆ 7,81,349 ಪ್ರವಾಸಿಗಳು ಇಲ್ಲಿಗೆ ಭೇಟಿ ನೀಡಿದ್ದಾರೆ, ಇದರಿಂದ 19.47 ಕೋಟಿ ರೂ. ಆದಾಯ ಬಂದಿದೆ ಎಂದು ಸರಕಾರವೇ ಹೇಳಿಕೊಳ್ಳುತ್ತಿದೆ. ಆದರೆ ಬದುಕುಳಿಯಲು ದಿನಗೂಲಿಯನ್ನೇ ಅವಲಂಬಿಸಬೇಕಾಗಿರುವ ಕೆಲಸಗಾರರಿಗೆ ಮಾತ್ರ ಸಂಬಳವಿಲ್ಲ!

ನಿಜವಾಗಿಯೂ ಅಚ್ಛೇ ದಿನ್ ಮಾದರಿ!

ನೋಟುರದ್ಧತಿ: ಪ್ರಧಾನಿಗಳ ಯಾವ ತರ್ಕವನ್ನೂ ಒಪ್ಪದಿದ್ದ ಆರ್‌ಬಿಐ ಅನುಮೋದನೆ!

ನೋಟುಗಳ ಮುದ್ರಣ, ಚಲಾವಣೆ ರಿಝರ್ವ್ ಬ್ಯಾಂಕ್ ಆಫ್ ಇಂಡಿಯಾ(ಆರ್‌ಬಿಐ) ಕಾರ್ಯಕ್ಷೇತ್ರದಲ್ಲಿ ಬರುವಂತದ್ದು. ಆದರೂ ನವಂಬರ್ 8, 2016ರಂದು ಪ್ರಧಾನ ಮಂತ್ರಿಗಳು ಕಪ್ಪು ಹಣದ, ಖೋಟಾ ನೋಟುಗಳ ಮತ್ತು ಭಯೋತ್ಪಾದಕರ ಹಣಕಾಸಿನ ಮೂಲದ ವಿರುದ್ಧ 56 ಅಂಗುಲದ ಧೀರ ಕಾರ್ಯಾಚರಣೆ ಎಂದ 500 ರೂ. ಮತ್ತು 1000 ರೂ. ನೋಟುಗಳ ರದ್ಧತಿಯ ಪ್ರಕಟಣೆ ಮಾಡಿದಾಗ ಅದು ಆರ್‌ಬಿಐನ ನಿರ್ಧಾರವಾಗಿತ್ತೇ, ಅಥವ ಅದಕ್ಕೆ ಆರ್‌ಬಿಐ ನ ಮಂಜೂರಾತಿಯಾದರೂ ಸಿಕ್ಕಿತ್ತೇ? ಇದುವರೆಗೆ ಬಹಳ ಊಹಾಪೋಹದಲ್ಲೇ ಇದ್ದ ಈ ಪ್ರಶ್ನೆಗೆ ಕೊನೆಗೂ ಉತ್ತರ ಸಿಕ್ಕಿದೆ.

ಮಾಹಿತಿ ಹಕ್ಕು ಕಾರ್ಯಕರ್ತ ವೆಂಕಟೇಶ್ ನಾಯಕ್ ಅವರ ಪ್ರಶ್ನೆಗೆ ಉತ್ತರ ನೀಡಲು ನಿರಾಕರಿಸುತ್ತ ಬಂದ ಆರ್.ಬಿ.ಐ. ಕೊನೆಗೂ ನೀಡಿರುವ ಮಾಹಿತಿಯ ಪ್ರಕಾರ, ನೋಟುರದ್ಧತಿಯ ಮೋದಿ ಸರಕಾರದ ಪ್ರಸ್ತಾವನೆ ಆರ್.ಬಿ.ಐ. ಆಡಳಿತ ಮಂಡಳಿಯಲ್ಲಿ ಪ್ರಧಾನ ಮಂತ್ರಿಗಳು ಅದರ ಪ್ರಕಟಣೆ ಮಾಡುವ ಕೇವಲ ಎರಡೂವರೆ ಗಂಟೆಗಳ ಮೊದಲಷ್ಟೇ ಚರ್ಚೆಗೆ ಬಂತು. ಆದರೆ ಪ್ರಧಾನ ಮಂತ್ರಿಗಳು ಅದನ್ನು ಪ್ರಕಟಿಸುವಾಗ ಅದಕ್ಕೆ ಆರ್.ಬಿ. ಐ. ಮಂಜೂರಾತಿ ಸಿಕ್ಕಿರಲಿಲ್ಲ, ಅದನ್ನು ಸರಕಾರಕ್ಕೆ ಕಳಿಸಿದ್ದು 38 ದಿನಗಳ ನಂತರ, ಡಿಸೆಂಬರ್ 6, 2016ರಂದು; ಕೊನೆಗೂ, ಆರ್‌ಬಿಐ ಆಡಳಿತ ಮಂಡಳಿ ಅನುಮೋದನೆ ನೀಡಿದರೂ, ಸರಕಾರದ ಹೆಚ್ಚಿನ ತರ್ಕಗಳನ್ನು ಅದು ಒಪ್ಪಲಿಲ್ಲ; 1. ನೋಟುರದ್ಧತಿಯಿಂದ ಕಪ್ಪು ಹಣವನ್ನು ತಡೆಯಲು ಸಹಾಯವಾಗುವದಿಲ್ಲ, ಏಕೆಂದರೆ, ಹೆಚ್ಚಿನ ಕಪ್ಪು ಹಣ ನಗದಿನಲ್ಲಿ ಇಲ್ಲ, ಬದಲಾಗಿ ರಿಯಲ್ ಎಸ್ಟೇಟ್ ಮತ್ತು ಚಿನ್ನದ ರೂಪದಲ್ಲಿದೆ, ಅವುಗಳ ಮೇಲೆ ಈ ಕ್ರಮದ ಪರಿಣಾಮ ಅತ್ಯಲ್ಪ; 2. ಖೋಟಾ ನೋಟಿನ ಪ್ರಮಾಣ 400 ಕೋಟಿ ರೂ.ಗಳಷ್ಟಾದರೂ ಒಟ್ಟು ನೋಟುಗಳ ಚಲಾವಣೆಯಲ್ಲಿ ಅದರ ಪ್ರಮಾಣ ಅತ್ಯಲ್ಪ, ಅದಕ್ಕಾಗಿ ನೋಟುರದ್ಧತಿಯ ಕ್ರಮದ ಅಗತ್ಯವಿರಲಿಲ್ಲ;3. ಚಲಾವಣೆಯಲ್ಲಿದ್ದ 500 ರೂ. ಮತ್ತು 1000ರೂ. ನೋಟುಗಳ ಏರಿಕೆಯ ಪ್ರಮಾಣ ಆರ್ಥಿಕ ಬೇಳವಣಿಗೆಯ ದರಕ್ಕೆ ಹೋಲಿಸಿದರೆ ಬಹಳ ಹೆಚ್ಚು ಎಂಬ ತರ್ಕವೂ ಅವುಗಳ ನಿಜಮೌಲ್ಯವನ್ನು ಪರಿಗಣಿಸಿದಾಗ ಒಪ್ಪುವಂತದ್ದಲ್ಲ;4. ಪ್ರಸಕ್ತ ವರ್ಷದಲ್ಲಿ ಈ ಕ್ರಮ ಜಿಡಿಪಿ ಬೆಳವಣಿಗೆಯ ಮೇಲೆ ನಕಾರಾತ್ಮಕ ಪ್ರಭಾವ ಬೀರುತ್ತದೆ.

ಅಂದರೆ ಒಟ್ಟಿನಲ್ಲಿ, ಪ್ರಧಾನ ಮಂತ್ರಿಗಳು ನೋಟುರದ್ಧತಿಗೆ ಕೊಟ್ಟ ಯಾವ ಕಾರಣವನ್ನೂ ಒಪ್ಪದಿದ್ದರೂ, ಬದಲಾಗಿ ಇದರಿಂದ ಆರ್ಥಿಕ ವ್ಯವಸ್ಥೆಯ ಮೇಲೆ ಅಲ್ಪಾವಧಿ ದುಷ್ಪರಿಣಾಮ ಉಂಟಾಗಬಹುದು ಎಂದು ಎಚ್ಚರಿಸಿದ್ದರೂ ಆರ್‌ಬಿಐ ಈ ಕ್ರಮವನ್ನು ಶಿಪಾರಸು ಮಾಡಿತು ಎಂಬುದು ಈ ಆರ್‌ಟಿಐ ಉತ್ತರದಿಂದ ತಿಳಿಯುವ ಅಂಶ.

ಇವೆಲ್ಲವೂ ಈಗಾಗಲೇ ಎಲ್ಲರ ಗಮನಕ್ಕೆ ಬಂದಿರುವ ಸಂಗತಿ, ನೋಟುರದ್ಧತಿ ಆರ್‌ಬಿಐ ಎಚ್ಚರಿಸಿದ್ದಕ್ಕಿತಲೂ ಹೆಚ್ಚಿನ ದುಷ್ಪರಿಣಾಮವನ್ನು ಜನಸಾಮಾನ್ಯರ ಮೇಲೆ ಅಲ್ಪಾವಧಿಯಲ್ಲಿ, ನಗದಿಗಾಗಿ ಪರದಾಟದಲ್ಲಿ ಮಾತ್ರವಲ್ಲ, ಅನೌಪಚಾರಿಕ, ಸಣ್ಣ ಉತ್ಪಾದನೆಯ ವಲಯದ ಧ್ವಂಸ ಮತ್ತು ಅಪಾರ ಪ್ರಮಾಣದ ಉದ್ಯೋಗ ನಷ್ಟದಲ್ಲಿ ಈಗಲೂ ಕಾಣ ಬರುತ್ತಿದೆ.

ಆದರೂ ರಿಝರ್ವ್ ಬ್ಯಾಂಕ್ ಈ ಕ್ರಮವನ್ನು ಬೆಂಬಲಿಸಿದ್ದು ಏಕೆ ಎಂಬ ಪ್ರಶ್ನೆಯೂ ಈಗ ಅರ್ಥಹೀನವಾಗಿದೆ.. ಆಗ ಆಡಳಿತ ಮಂಡಳಿಯ ಸದಸ್ಯರಾಗಿ ನವಂಬರ್ 8ರ ಸಭೆಯಲ್ಲಿ ಭಾಗವಹಿಸಿದ್ದವರಲ್ಲಿ ಒಬ್ಬರು ಈಗ ಆರ್‌ಬಿಐ ಗವರ್ನರ್ ಆಗಿದ್ದಾರೆ.

ನೋಟುರದ್ಧತಿಗೆ ಆರ್.ಬಿ.ಐ. ಆಕ್ಷೇಪವಿತ್ತು ಎಂದು ಆರ್‌ಟಿಐನಿಂದ ಪ್ರಕಟ



ವ್ಯಂಗ್ಯಚಿತ್ರ: ಆರ್. ಪ್ರಸಾದ್

'ಮೇರಾ ಬೂತ್/ಜೂತ್ ಸಬ್ ಸೇ ಮಜ್ಬೂತ್'

ಇಡೀ ದೇಶ ಪಾಕಿಸ್ತಾನದ ಪಡೆಗಳು ಸೆರೆಹಿಡಿದ ನಮ್ಮ ವಾಯುಪಡೆಯ ವಿಂಗ್ ಕಮಾಂಡರ್ ದೇಶಕ್ಕೆ ಸುರಕ್ಷಿತವಾಗಿ ಮರಳಿ **ಬರಲೆಂದು** ಪ್ರಾರ್ಥಿಸುತ್ತಿದ್ದಾಗ, ದೇಶವನ್ನುದ್ದೇಶಿಸಿ ಮಾತಾಡಬೇಕಾಗಿದ್ದ ಪ್ರಧಾನ ಮಂತ್ರಿಗಳು ತಮ್ಮ ಪಕ್ಷದ 'ಮೇರಾ ಬೂತ್, ಸಬ್ ಸೇ ಮಜ್ಬೂತ್'(ನನ್ನ ಮತಗಟ್ಟೆ, ಎಲ್ಲಕ್ಕಿಂತಲೂ ಗಟ್ಟಿ) ಎಂಬ ತಮ್ಮ ಪಕ್ಷದ ಅತಿ ದೊಡ್ಡ 'ವೀಡಿಯೋ ಕಾನ್ಫರೆನ್ಸ್' ದಾಖಲೆ ನಿರ್ಮಿಸುವ ಚುನಾವಣಾ ಪ್ರಚಾರದಲ್ಲಿ ಮಗ್ನರಾಗಿದ್ದರು -ಸುದ್ದಿ 1

ಉತ್ತರಪ್ರದೇಶದ ಸಂತ ಕಬೀರ್ ನಗರದಲ್ಲಿ ಬಿಜೆಪಿ ಸಂಸತ್ ಸದಸ್ಯ ಶರದ್ ತ್ರಿಪಾಠಿ, ಸಾರ್ವಜನಿಕ ಸಭೆಯೊಂದರಲ್ಲಿ ತನ್ನದೇ ಪಕ್ಷದ ಶಾಸಕ ರಾಕೇಶ್ ಸಿಂಗ್‌ರವರನ್ನು ತನ್ನ ಷೂ (ಜೂತಾ) ಬಿಚ್ಚಿ ಚೆನ್ನಾಗಿ ಥಳಿಸಿದರು. ಕಾರಣ ಸ್ಥಳೀಯ ರಸ್ತೆಯೊಂದರ ಅಡಿಗಲ್ಲಿನಲ್ಲಿ ತನ್ನ ಹೆಸರನ್ನು ಶಾಸಕರು ಕೆತ್ತಿಸಿರಲಿಲ್ಲ ಎಂದು -ಸುದ್ದಿ 2



ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ

ಸಾರ್ವಜನಿಕ ವಲಯದ ನಿರ್ಮೂಲನೆಗೆ ಟೊಂಕ ಕಟ್ಟಿದ್ದ ಮೋದಿ ಸರಕಾರ



ಸಾರ್ವಜನಿಕ ವಲಯವನ್ನು ಕಳಚಿ ಹಾಕುವಲ್ಲಿ ವಾಜಪೇಯಿ ನೇತೃತ್ವದ ಎನ್‌ಡಿಎ–1 ಸರಕಾರ ವಿನಾಶಕಾರಿ ಪಾತ್ರವನ್ನು ವಹಿಸಿತ್ತು, ಆದರೆ ನರೇಂದ್ರ ಮೋದಿ ಸರಕಾರ ಇನ್ನೂ ಬಹಳ ಮುಂದೆ ಹೋಗಿಸಾರ್ವಜನಿಕ ವಲಯವನ್ನು ಸಂಪೂರ್ಣವಾಗಿ ನಿರ್ಮೂಲಗೊಳಿಸುವ ಗುರಿಯೊಂದಿಗೆ ಕೆಲಸ ಮಾಡಿದೆ ತೋರಿಸುತ್ತದೆ. ಇದುವರೆಗೆ, 28 ವರ್ಷಗಳ ಕಾಲ ನಡೆದಿರುವ ಒಟ್ಟು ಹೂಡಿಕೆ ಹಿಂಪಡಿಕೆಯಲ್ಲಿ ಮೋದಿ ಸರಕಾರದ ನಾಲ್ಕೂವರೆ ವರ್ಷದ ಪಾಲು 60.24ಶೇ. ಎರಡೂ ಎನ್‌ಡಿಎ ಸರಕಾರಗಳ ಹತ್ತು ವರ್ಷಗಳ ಆಳ್ವಿಕೆಯಲ್ಲಿ ಒಟ್ಟಾಗಿ 68.67ಶೇ. ಆಗುತ್ತದೆ. ಲೋಕಸಭಾ ಚುನಾವಣೆ ಎದುರಿನಲ್ಲಿರುವಾಗಲೂ ಸಾರ್ವಜನಿಕ ವಲಯದ ಮೇಲಿನ ದಾಳಿಗಳನ್ನು ಮುಂದುವರೆಸುತ್ತಿರುವ 'ಮೋದಿ ಸರಕಾರ'ವೇ ಮತ್ತೆ ಬಂದರೆ ಏನಾಗಬಹುದು ಎಂಬುದು ಊಹೆಗೆ ಬಿಟ್ಟದ್ದು. 2019ರ ಲೋಕಸಭಾ ಚುನಾವಣೆಯ ಫಲಿತಾಂಶ ದೇಶದಲ್ಲಿ ಸಾರ್ವಜನಿಕ ವಲಯದ ಭವಿಷ್ಯವನ್ನು ನಿರ್ಧರಿಸಲಿದೆ. –**ಸ್ವದೇಶ್ ದೇವ್ ರಾಯ್**

ಕೇಂದ್ರೀಯ ಸಾರ್ವಜನಿಕ ವಲಯದ ಘಟಕಗಳಲ್ಲಿ ಹೂಡಿಕೆ ಹಿಂಪಡಿಕೆ

ಮೋದಿ ಆಳ್ವಿಕೆಯ ಮೊದಲು (1991 ರಿಂದ 2014ರ ವರೆಗಿನ 24 ವರ್ಷಗಳಲ್ಲಿ)		ಮೋದಿ ಆಳ್ವಿಕೆಯಲ್ಲಿ (2014ರಿದ ಜ.19, 2019ರ ವರೆಗಿನ 4.5 ವರ್ಷಗಳಲ್ಲಿ)	
ವರ್ಷ	ಮೊತ್ತ(ಕೋಟಿ ರೂ.ಗಳಲ್ಲಿ)	ವರ್ಷ	ಮೊತ್ತ (ಕೋಟಿ ರೂ.ಗಳಲ್ಲಿ)
1991–1996	9961.83	2014–15	26068.25
1996–1999	6660.78	2015–16	23996.80
1999–2004	28284.48	2016–17	46246.58
2004–2009	8515.94	2017–18	100056.91
2009–2014	99367.46	2018–19*	35134.76
ಒಟ್ಟು 24 ವರ್ಷಗಳಲ್ಲಿ	152790.49	ಒಟ್ಟು 4.5 ವರ್ಷಗಳಲ್ಲಿ	231503.30

(* ಜನವರಿ 19, 2019ರ ವರೆಗೆ)

ಭಾರತದಲ್ಲಿ ಸಾರ್ವಜನಿಕ ವಲಯುವನ್ನು ರೂಪಿಸಿದ್ದು ಒಂದು ಸ್ವಾವಲಂಬೀ ಕೈಗಾರಿಕಾ ಅಭಿವೃದ್ಧಿಯನ್ನು ತರಬೇಕು ಎಂಬ ರಾಷ್ಟ್ರೀಯ ಗುರಿಯಿಂದ ಮತ್ತು ದೇಶಪ್ರೇಮದ ಭಾವನೆಯಿಂದ. ಇದನ್ನು ತೆರಿಗೆದಾರರ ಹಣದಿಂದ ಮತ್ತು ಶ್ರಮಜೀವಿಗಳ ದುಡಿಮೆಯಿಂದ ಕಟ್ಟಿ ಬೆಳೆಸಲಾಯಿತು. ಆದರೆ 1991ರಲ್ಲಿ 'ಹೊಸ ಆರ್ಥಿಕ ಧೋರಣೆ'ಯೊಂದಿಗೆ ಇದರ ವಿರುದ್ಧ ಧೋರಣೆಯ ದಾಳಿಗಳು ಆರಂಭವಾದವು, ಆಗಿನ ಕಾಂಗ್ರೆಸ್ ಸರಕಾರ ಅದನ್ನು ಆರಂಭಿಸಿತು. ಆದರೆ ಸಾರ್ವಜನಿಕ ವಲಯದ ಘಟಕಗಳ ಶೇರು ಮಾರಾಟಕ್ಕೆಂದೇ 'ಹೂಡಿಕೆ ಹಿಂಪಡಿಕೆ' ವಿಭಾಗವನ್ನೇ ತೆರೆದದ್ದು ಡಿಸೆಂಬರ್ 1999ರಲ್ಲಿ ವಾಜಪೇಯಿ ನೇತೃತ್ವದ ಮೊದಲ ಎನ್‌ಡಿಎ ಸರಕಾರದ ಅಡಿಯಲ್ಲಿ, ಮುಂದೆ ಇದನ್ನು ಅದೇ ಸರಕಾರ 'ಹೂಡಿಕೆ ಹಿಂಪಡಿಕೆ' ಮಂತ್ರಾಲಯದ ಮಟ್ಟಕ್ಕೂ ಏರಿಸಿತು. ಸಾರ್ವಜನಿಕ ವಲಯದ ಘಟಕಗಳ ಶೇರುಗಳ ಬೆಲೆಗಳನ್ನು ಅತ್ಯಂತ ಕಡಿಮೆ ಮಟ್ಟದಲ್ಲಿ ಮೌಲ್ಯಮಾಪನ ಮಾಡಿ ಖಾಸಗಿ ಕಬಳಿಕೆದಾರರಿಗೆ ಆ ಸರಕಾರ ಅನಗತ್ಯ ಅನುಕೂಲ ಕಲ್ಪಿಸಿ ಕೊಟ್ಟಿತು.

ಮೊದಲ ಬಾರಿಗೆ ಗರಿಷ್ಟ ಶೇರು ಮಾರಾಟಗಳು ನಡೆದದ್ದು 2001–02 ಮತ್ತು 2003–04ರ ಅವಧಿಯಲ್ಲಿ, ಅದೇ ಸರಕಾರದ ಅಡಿಯಲ್ಲಿ. ನಂತರ ಬಂದ ಯುಪಿಎ–1 ಸರಕಾರದ ಅಡಿಯಲ್ಲಿ, ಎಡಪಕ್ಷಗಳ ಒತ್ತಡದಿಂದಾಗಿ 'ಹೂಡಿಕೆ ಹಿಂಪಡಿಕೆ' ಇಲಾಖೆಯನ್ನು ಮುಚ್ಚಲಾಯಿತು. ಅದನ್ನು ಹಣಕಾಸು ಮಂತ್ರಾಲಯದ ಒಂದು ವಿಭಾಗವಾಗಿ ಮಾಡಲಾಯಿತು. ಈ ಅವಧಿಯಲ್ಲಿ ಶೇರು ಮಾರಾಟ ಸುಮಾರಾಗಿ ನಿಂತು ಹೋಯಿತು. ಇದಕ್ಕೆ ಕಾರಣ ಆಗ ಸಂಸತ್ತಿನಲ್ಲಿ ಎಡಪಕ್ಷಗಳು ಹೊಂದಿದ್ದ ಬಲ.

ಈ ಮೇಲಿನ ಕೋಷ್ಟಕ ವಾಜಪೇಯಿ ನೇತೃತ್ವದ ಎನ್‌ಡಿಎ ಸರಕಾರ ವಹಿಸಿದ ವಿನಾಶಕಾರಿ ಪಾತ್ರವನ್ನು ತೋರಿಸಿದರೆ, ನರೇಂದ್ರ ಮೋದಿ ಸರಕಾರ ಸಾರ್ವಜನಿಕ ವಲಯವನ್ನು ನಿರ್ಮೂಲಗೊಳಿಸುವ ಗುರಿಯೊಂದಿಗೆ ಕೆಲಸ ಮಾಡಿರುವುದನ್ನು ತೋರಿಸುತ್ತದೆ. ಇದುವರೆಗೆ, 28 ವರ್ಷಗಳ ಕಾಲ ನಡೆದಿರುವ ಒಟ್ಟು ಹೂಡಿಕೆ ಹಿಂಪಡಿಕೆಯಲ್ಲಿ ಮೋದಿ ಸರಕಾರದ ನಾಲ್ಕೂವರೆ ವರ್ಷದ ಪಾಲು 60.24ಶೇ. ಎರಡೂ ಎನ್‌ಡಿಎ ಸರಕಾರಗಳ ಹತ್ತುವರ್ಷಗಳ ಆಳ್ವಿಕೆಯಲ್ಲಿ ಒಟ್ಟಾಗಿ 68.67ಶೇ. ಆಗುತ್ತದೆ. ಈ ಮೂಲಕ ಮೋದಿ ಸರಕಾರ ತಾನು ಕೇವಲ ಖಾಸಗೀವಲಯದ ಪರವಾಗಿದ್ದೇನೆ, ಸಾರ್ವಜನಿಕ ವಲಯಕ್ಕೆ ಸಂಪೂರ್ಣ ವಿರುದ್ಧವಾಗಿದ್ದೇನೆ ಎಂದು ಖಾಸಗಿಯವರಿಗೆ ಸಂಕೇತ ನೀಡುತ್ತ ಬಂದಿದೆ.

ಸಾರ್ವಜನಿಕ ವಲಯ ನಿರ್ಮೂಲನಾ 'ಮಿಶನ್'ನ ಮೋದಿ ಸರಕಾರದ ದಿವಾಳಿಕೋರ ಧೋರಣೆ ರಾಷ್ಟ್ರಕ್ಕೆ ಬಗೆದ ವಿಶ್ವಾಸಘಾತ, ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಮತ್ತು ಸಾಮ್ರಾಜ್ಯಶಾಹಿ ಶಕ್ತಿಗಳ ಆಧಿಪತ್ಯದ ಒತ್ತಡಗಳಿಗೆ ಅದರ ಶರಣಾಗತಿಯ ದುಷ್ಫಲವಾಗಿದೆ. ತನ್ನ ಈ 'ಮಿಶನ್' ಈಡೇರಿಸಿಕೊಳ್ಳಲು ಅದು ಹಿಡಿದ ದಾರಿಗಳು ಹಲವು. ಹೂಡಿಕೆಯನ್ನು ಕಡಿಮೆ ಮಾಡಲು ತನ್ನ ಶೇರುಗಳನ್ನು ಮಾರುವುದು, ಸಾರ್ವಜನಿಕ ವಲಯದ ಘಟಕವೇ ಸರಕಾರದ ಶೇರನ್ನು ಖರೀದಿಸುವಂತೆ ಮಾಡುವುದು, ಹರಾಜಿನ ಮೂಲಕ ಘಟಕವನ್ನು ಮಾರುವುದು, ಘಟಕವು ಕಡ್ಡಾಯವಾಗಿ ಸಾಲ ಎತ್ತುವಂತೆ ಮಾಡುವುದು, ಆಡಳಿತವನ್ನು ಖಾಸಗಿಯವರಿಗೆ ವಹಿಸಿಕೊಡುವುದು, ವಾಣಿಜ್ಯ ದೃಷ್ಟಿಯಿಂದ ಸೂಕ್ತವಲ್ಲದ ಘಟಕಗಳನ್ನು ವಹಿಸಿಕೊಳ್ಳುವಂತೆ, ವಿಲೀನಗೊಳಿಸಿಕೊಳ್ಳುವಂತೆ ಮಾಡುವುದು, ಹೆಚ್ಚು ಡಿವಿಡೆಂಡ್‌ಗಳನ್ನು ಆಗ್ರಹಿಸುವುದು ಇತ್ಯಾದಿ ಹಣಕಾಸು ವಿಧಾನಗಳಲ್ಲದೆ, ಬಿಜೆಪಿಯ ಆರಿಸಿದ ಕಾರ್ಯಕರ್ತರನ್ನು ಈ ಸಾರ್ವಜನಿಕ ವಲಯದ ಘಟಕಗಳ ನಿರ್ದೇಶಕ ಮಂಡಳಿಗಳಿಗೆ ನೇಮಿಸುವುದೂ ಕೂಡ ಇಂತಹ ದಾರಿಗಳಲ್ಲಿ ಸೇರಿದೆ. ಒಎನ್‌ಜಿಸಿ, ಹೆಚ್‌ಪಿಸಿಎಲ್, ಬಿಪಿಸಿಎಲ್, ಬಿಹೆಚ್‌ಇಎಲ್, ಇಐಎಲ್, ಎಸ್‌ಟಿಸಿ ಗಳಲ್ಲಿ ಬಿಜೆಪಿ ನಿರ್ದೇಶಕರನ್ನು ತುಂಬಿಸಲಾಗಿದೆ. ಒಎನ್‌ಜಿಸಿ ಮತ್ತು ಎನ್‌ಟಿಪಿಸಿ ವ್ಯಾಪಾರೀ ದೃಷ್ಟಿಯಿಂದ ಲಾಭದಾಯಕವಲ್ಲದ ಕಂಪನಿಗಳನ್ನು ವಹಿಸಿಕೊಳ್ಳುವಂತೆ ಅಥವ ವಿಲೀನ ಗೊಳಿಕೊಳ್ಳುವಂತೆ ಮಾಡಲಾಗಿದೆ.

2016–17ರಲ್ಲಿ ಮಾಡಿದ ಹೂಡಿಕೆ ಹಿಂಪಡಿಕೆಯ ರೂ. 46246.58 ಕೋಟಿ ರೂ.ಗಳಲ್ಲಿ ರೂ.18,963.47 ಕೋಟಿಯನ್ನು ಸರಕಾರ ಕೇಂದ್ರೀಯ ಸಾರ್ವಜನಿಕ ವಲಯದ 7 ಘಟಕಗಳು ತನ್ನ ಶೇರುಗಳನ್ನು ಖರೀದಿಸುವಂತೆ (ಬೈ ಬ್ಯಾಕ್) ಮಾಡುವ ಮೂಲಕ ಬಂದಿದೆ. ತಮಾಷೆಯೆಂದರೆ, ಇಂತಹ ಶೇರು ಮಾರಾಟದ ಮೇಲೆ ತೆರಬೇಕಾದ ತೆರಿಗೆಗಳನ್ನೂ ಅವೇ ಘಟಕಗಳಿಂದ ವಸೂಲಿ ಮಾಡಲಾಗಿದೆ. ಇವೆಲ್ಲದರ ಒಂದು ಗಂಭೀರ ಪರಿಣಾಮವೆಂದರೆ, ಇದುವರೆಗೆ ಹಣಕಾಸು ಕೊರತೆಯೇ ಇಲ್ಲದ, ನಗದು ಹರಿದಾಡುತ್ತಿದ್ದ ಈ ಘಟಕಗಳು ಈಗ ತೀವ್ರ ಹಣಕಾಸು ಕೊರತೆಯಿಂದಾಗಿ ಹೊಸ ಪ್ರಾಜೆಕ್ಟ್‌ಗಳನ್ನು ಕೈಗೆತ್ತಿಕೊಳ್ಳಲಾರದಂತೆ ಆಗಿದೆ, ಕಾರ್ಮಿಕರ ಮತ್ತು ನೌಕರರ ಸಂಬಳ ಪಾವತಿ ಮಾಡಲೂ ಬ್ಯಾಂಕುಗಳಿಂದ ಸಾಲಕ್ಕೆ ಮೊರೆ ಹೋಗುವಂತಾಗಿದೆ.

ಒಎಫ್‌ಎಸ್ ವಿಧಾನದಲ್ಲಿ ಕೆಲವು ಸಾರ್ವಜನಿಕ ವಲಯದ ಘಟಕಗಳು ತಮ್ಮ ನೌಕರರಿಗೆ ಶೇರುಗಳನ್ನು ಮಾರಾಟ ಮಾಡುವಂತೆ ಮಾಡಲಾಗಿದೆ. ಈ ಮೂಲಕ ಸರಕಾರ 2016–17ರಲ್ಲಿ ರೂ.529.19 ಕೋಟಿ ಸಂಗ್ರಹಿಸಿದೆ. ಆಘಾತಕಾರಿ ಸಂಗತಿಯೆಂದರೆ, ಹೀಗೆ ಮಾರಾಟ ಮಾಡಿದ ಕೆಲವೇ ತಿಂಗಳಲ್ಲಿ ಶೇರು ಬೆಲೆಗಳು ಕುಸಿದು ನೌಕರರು ತಾವು ಶ್ರಮಪಟ್ಟು ಗಳಿಸಿದ ಹಣವನ್ನು ಕಳಕೊಳ್ಳುವಂತಾಗಿದೆ.

2017–18ರಲ್ಲಿ ಈ ರೀತಿಯ ಬೈಬ್ಯಾಕ್‌ಗಳ ಮೂಲಕ ನಗದು ಹರಿದಾಡುತ್ತಿದ್ದ ಸಾರ್ವಜನಿಕ ವಲಯದ ಘಟಕಗಳನನು ದಿವಾಳಿಯತ್ತ ತಳ್ಳುವ ಕೆಲಸ ಮುಂದುವರೆದಿದೆ. ಇದರ ದುಷ್ಫಲವೆಂದರೆ ಘಟಕದ ಆಧುನೀಕರಣಕ್ಕೆ, ವಿಸ್ತರಣೆಗೆ, ಹೊಸ ಫ್ಯಕ್ಟರಿಗಳನ್ನು ತೆರೆಯಲು, ಹೊಸ ಉದ್ಯೋಗಗಳನ್ನು, ಉತ್ಪನ್ನಗಳನ್ನು ಸೃಷ್ಟಿಸುವುದಕ್ಕೆ ಉಪಯೋಗವಾಗಬಹುದಿದ್ದ ಒಟ್ಟು ರೂ.31,369.56 ಕೋಟಿ ರೂ.ಗಳನ್ನು ಕಳಕೊಳ್ಳುವಂತಾಗಿದೆ. ಈ ವಿನಾಶಕಾರ್ಯ 2018–19ರಲ್ಲಿಯೂ ಮುಂದುವರೆದಿದೆ.

ಕೇಂದ್ರೀಯ ಸಾರ್ವಜನಿಕ ವಲಯದ ಉದ್ದಿಮೆಗ 2016–17ರಲ್ಲಿ ವಿವಿಧ ವಿಧಾನಗಳಿಂದ ಹೂಡಿಕೆ ಹಿಂಪಡಿಕೆಯ 'ಗಳಿಕೆ'–ಕೋಟಿ ರೂ.ಗಳಲ್ಲಿ

	ಧ್ವಂಸದ ದಾರಿಗಳು	ಕಿತ್ತುಕೊಂಡ ಮೊತ್ತ
7 ಉದ್ದಿಮೆಗಳು	ಬೈಬ್ಯಾಕ್	18963.47
6 ಉದ್ದಿಮೆಗಳು	ನೌಕರರ ಒಎಫ್‌ಎಸ್	529.19
ಹಲವು ಉದ್ದಿಮೆಗಳು	ಇ.ಟಿ.ಎಫ್.ಗಳು	8499.98
5 ಉದ್ದಿಮೆಗಳು	ಒಎಫ್‌ಎಸ್	7475.23
	ಆಯಕಟ್ಟಿನ ಮಾರಾಟ	10,778.71
	ಒಟ್ಟು	46246.58

ಇನ್ನು, ಸಾರ್ವಜನಿಕ ವಲಯುದಿಂದ ಬಲವಂತದಿಂದ ಸರಕಾರ ಕಿತ್ತುಕೊಂಡ ಡಿವಿಡೆಂಡುಗಳ ಪ್ರಮಾಣವನ್ನು ನೋಡಿ:

ಹಣಕಾಸುವರ್ಷ	ಮೊತ್ತ(ಮಿಲಿಯ ರೂ.)	ಶೇಕಡಾ
2011	24,634	23
2012	63,164	43
2013	88,429	51
2014	1,83,175	121
2015	1,30,749	95
2016	1,73,068	121
2017	1,23,528	133

ಈ ಬೈಬ್ಯಾಕ್‌ಗಳು ಮತ್ತು ಸಾಮಾನ್ಯವಲ್ಲದ ಡಿವಿಡೆಂಡ್ ಪಾವತಿಗಳಿಂದಾಗಿ ಸಾರ್ವಜನಿಕ ವಲಯದ ಘಟಕಗಳು ಹೂಡಿಕೆಗಳಿಗೆ ಹೊಂದಿದ್ದ ಹಣ ಹಣಕಾಸು ವರ್ಷ 2014ರಲ್ಲಿ ರೂ. 2.64 ಲಕ್ಷ ಕೋಟಿ ಇದ್ದದ್ದು 2017ರಲ್ಲಿ 1.95 ಲಕ್ಷ ಕೋಟಿಗೆ , ನಂತರ 2018ರಲ್ಲಿ 1.7 ಲಕ್ಷ ಕೋಟಿಗೆ ಇಳಿದಿದೆ. ಒಎನ್‌ಜಿಸಿಯ ನಗದು ಮಟ್ಟ 2016–17ರಿಂದ 2018–19 ರಲ್ಲಿ 92ಶೇ,ದಷ್ಟು ತೀವ್ರವಾಗಿ ಇಳಿಯಿತು.

ಮೇ 27, 2016ರಲ್ಲಿ ಹಣಕಾಸು ಮಂತ್ರಾಲಯ ಕೇಂದ್ರೀಯ ಸಾರ್ವಜನಿಕ ವಲಯದ ಘಟಕಗಳಿಗೆ ಬಂಡವಾಳ ಪುನರ್‍ರಚನೆಯೆಂಬುದಕ್ಕೆ ನಿರ್ದೇಶನಗಳನ್ನು ಕುರಿತಂತೆ ಒಂದು ಆಫೀಸ್ ಮೆಮೊ ಕಳಿಸಿತು. ಇದರೊಂದಿಗಿದ್ದ ಹಿನ್ನೆಲೆ ಟಿಪ್ಪಣಿಯಲ್ಲಿ ಇದರ ಅನ್ವಯ, ಡಿವಿಡೆಂಡ್ ಪಾವತಿ, ಶೇರು ಬೈಬ್ಯಾಕ್, ಬೋನಸ್ ಶೇರುಗಳು, ಶೇರುಗಳ ವಿಭಜನೆ ಮತ್ತಿತರ ಅಂಶಗಳನ್ನು ಕೊಡಲಾಗಿತ್ತು. ಇವೆಲ್ಲ ಸಾರ್ವಜನಿಕ ವಲಯವನ್ನು ಕುರಿತಂತೆ ಪ್ರಸಕ್ತ ಸರಕಾರದ ಧೋರಣೆಯನ್ನು ಆಧರಿಸಿದೆ ಎಂದು ಈ ಟಿಪ್ಪಣಿಯಲ್ಲಿ ಸ್ಪಷ್ಟವಾಗಿ ಹೇಳಲಾಗಿತ್ತು.

ಈ ರೀತಿ ಸಾರ್ವಜನಿಕ ವಲಯದ ವ್ಯವಸ್ಥಿತ ವಿಘಟನೆ, ಕಳಚಿ ಹಾಕುವುದು, ಮತ್ತು ಧ್ವಂಸ ಹಾಗೂ ಅವುಗಳ ಸಾರ್ವಜನಿಕ ಪ್ರತಿಷ್ಠೆಗೆ ಧಕ್ಕೆ ತರುವುದರ ಹಿಂದೆ ಒಂದು ಸಾಮಾಜಿಕ ಮೇಲ್‌ಸ್ತರದ ಮಂದಿಗೆ ಸಾರ್ವಜನಿಕ ವಲಯವು ಸಾಮಾಜಿಕ ನ್ಯಾಯದ ವಾಹಕವಾಗಿರುವುದರಿಂದ ಕಿರಿಕಿರಿಯೆನಿಸುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ.

2019–20 ರ ಮಧ್ಯಂತರ ಬಜೆಟಿನಲ್ಲಿ ಕೂಡ ಮೋದಿ ಸರಕಾರ 90,000 ಕೋಟಿ ರೂ.ಗಳ 'ಹೂಡಿಕೆ ಹಿಂಪಡಿಕೆ'ಯ ಗುರಿ ಇಟ್ಟಿದೆ ಎಂಬುದನ್ನೂ ಗಮನಿಸಬೇಕು. 'ಆಸ್ತಿ ನಗದೀಕರಣ ಚೌಕಟ್ಟು' ಎಂಬ ಹೆಸರಲ್ಲಿ ಸಾರ್ವಜನಿಕ ವಲಯದ ಘಟಕಗಳ ಭೂಮಿ ಮತ್ತಿತರ ಆಸ್ತಿಗಳನ್ನೂ ಮಾರಾಟ ಮಾಡುವ ಪ್ರಕ್ರಿಯೆಯನ್ನು ಆರಂಭಿಸಲಾಗಿದೆ. ಒಎನ್‌ಜಿಸಿ, ಕೋಲ್ ಇಂಡಿಯ ಮತ್ತು ಐಒಸಿಗಳಿಗೆ ಇನ್ನಷ್ಟು ಬೈಬ್ಯಾಕ್ ನಡೆಸುವಂತೆ ಹೇಳಲಾಗಿದೆ.

ಹೀಗೆ ಲೋಕಸಭಾ ಚುನಾವಣೆ ಎದುರಿನಲ್ಲಿರುವಾಗಲೂ ಸಾರ್ವಜನಿಕ ವಲಯುದ ಮೇಲಿನ ದಾಳಿಗಳನ್ನು ಮುಂದುವರೆಸುತ್ತಿರುವ 'ಮೋದಿ ಸರಕಾರ'ವೇ ಮತ್ತೆ ಬಂದರೆ ಏನಾಗಬಹುದು ಎಂಬುದು ಊಹೆಗೆ ಬಿಟ್ಟದ್ದು. 2019ರ ಲೋಕಸಭಾ ಚುನಾವಣೆಯ ಫಲಿತಾಂಶ ದೇಶದಲ್ಲಿ ಸಾರ್ವಜನಿಕ ವಲಯದ ಭವಿಷ್ಯವನ್ನು ನಿರ್ಧರಿಸಲಿದೆ. ●

ರಫೆಲ್ ವ್ಯವಹಾರದಲ್ಲ ಈ ಸರಕಾರವೇ ಹೊರದಬ್ಬಿದ ಸಾರ್ವಜನಿಕ ವಲಯದ ಹೆಚ್.ಎ.ಎಲ್. ನಂತರ ಈಗ ಬಿ.ಎಸ್.ಎನ್.ಎಲ್. ತನ್ನ 1.68 ಲಕ್ಷ ನೌಕರರಿಗೆ ಫೆಬ್ರುವರಿ ತಿಂಗಳಲ್ಲ ಸಂಬಳ ಕೊಡಲಾರದಂತಹ ಪರಿಸ್ಥಿತಿ ಸೃಷ್ಟಿಯಾಗಿದೆ. ಉಳಿದ ಖಾಸಗಿ ಕಂಪನಿಗಳಿಗೆ 2016ರಲ್ಲೇ 4ಜಿ ತರಂಗಾಂತರ ಕೊಟ್ಟಿದ್ದರೂ, ತನ್ನದೇ ಒಡೆತನದ ಬಿ.ಎಸ್.ಎನ್.ಎಲ್.ಗೆ ಇದುವರೆಗೂ ಅದನ್ನು ಕೊಡದಿರುವುದು ಇದು ಸ್ಪರ್ಧೆಯಲ್ಲಿ ಹಿಂದೆ ಬೀಳಲು ಒಂದು ಕಾರಣವಾದರೆ, ಆಳುವವರ ಆಪ್ತ ಅಂಬಾನಿಯ ಜಿಯೋ ಕಂಪನಿ ಹುಟ್ಟುಹಾಕಿದ ದರ–ಸಮರ ಖಾಸಗಿ ಟೆಲಿಕಾಂ ಕಂಪನಿಗಳೂ ಸೇರಿದಂತೆ ಎಲ್ಲವೂ ಹಣಕಾಸು ಸಮಸ್ಯೆಗಳನ್ನು ಎದುರಿಸುವಂತೆ ಮಾಡಿದೆ. ಬಿಎಸ್‌ಎನ್‌ಎಲ್ 13900 ಕೋಟಿರೂ. ಸಾಲದ ಹೊರೆ ಹೊಂದಿದೆ. ಆದರೆ ಖಾಸಗಿ ಟೆಲಿಕಾಂ ಕಂಪನಿಗಳು ಇದಕ್ಕಿಂತ ಎಷ್ಟೋ ಹೆಚ್ಚು ಸಾಲದ ಹೊರೆಗಳನ್ನು ಹೊಂದಿವೆ ಎಂಬುದು ಗಮನಾರ್ಹ. ಏರ್‌ಟೆಲ್ ಸಾಲ ಹೊರೆ 1.13ಲಕ್ಷ ಕೊಟಿರೂ.ಗಳಾದರೆ, ವೊಡಾಫೋನ್‌ನದ್ದು 1.2ಲಕ್ಷ ಕೋಟಿ ರೂ. ಮತ್ತು ಸ್ವತಃ ಮುಕೇಶ್ ಅಂಬಾನಿಯ ಜಿಯೋದ ಸಾಲದ ಹೊರೆಯಂತೂ 2ಲಕ್ಷ ಕೋಟಿ ರೂ. ಆದರೂ ಅವುಗಳಿಗೆ ಬ್ಯಾಂಕ್‌ನಿಂದ ಸಾಲ ಪಡೆಯುವ ಅವಕಾಶ ಇದೆ, ಬಿಎಸ್‌ಎನ್‌ಎಲ್‌ಗೆ ಅದನ್ನು ನಿರಾಕರಿಸಲಾಗಿದೆ.

ನಷ್ಟದ ಹೆಸರಲ್ಲಿ ಬಿಎಸ್‌ಎನ್‌ಎಲ್‌ನಲ್ಲಿ 'ಹೂಡಿಕೆ ಹಿಂಪಡಿಕೆ' ಮಾಡಿದಾಗ ಭೂಮಿಗಳು, ಟವರ್‌ಗಳ ಮೂಲರಚನೆಗಳ ಸ್ವರೂಪದಲ್ಲಿರುವ ಅದರ ಆಸ್ತಿಗಳನ್ನು ಕಬಳಿಸಲು ಖಾಸಗಿ ಕಂಪನಿಗಳು ಕಾಯುತ್ತಿವೆ, ಹಿಂದಿನ ಎನ್.ಡಿ.ಎ. ಸರಕಾರ ಸಾರ್ವಜನಿಕ ವಲಯದ ವಿಎಸ್‌ಎನ್‌ಎಲ್‌ನ್ನು ಟಾಟಾಗಳಿಗೆ ಮಾರಿದ್ದನ್ನು ಮತ್ತು ಅದೀಗ ಹೇಳಹೆಸರಿಲ್ಲದಂತಾಗಿರುವುದನ್ನು ಇಲ್ಲಿ ನೆನಪಿಸಿ.ಕೊಳ್ಳಬಹುದು.

ಜಾತ್ಯತೀತ–ಪ್ರಜಾಸತ್ತಾತ್ಮಕ–ಗಣತಂತ್ರ ಭಾರತವನ್ನು... ಪುಟ 16 ರಿಂದ

ಹೀಗೆ ಹತ್ತು ಹಲವು ಕಾರ್ಯಕ್ರಮಗಳಿಗೆ ಅವರ ಮೇಲೆ ಅವಲಂಬಿತ ರಾಗಿರುತ್ತೇವೆ. ಹಾಗಾಗಿ, ಮನುವಾದ ಮುಕ್ತ ಭಾರತ ನಿರ್ಮಾಣ ನಮ್ಮ ನಮ್ಮ ಮನೆಗಳಿಂದಲೇ ಮೊದಲು ಆರಂಭಿಸ ಬೇಕೆಂದರು.

ಪ್ರಸ್ತುತ, ಬಿಜೆಪಿ ಸರ್ಕಾರದ ನೀತಿಗಳು ಸಂವಿಧಾನ ವಿರೋಧಿ ಯಾಗಿವೆ ಮಾತ್ರವಲ್ಲದೆ, ದಲಿತ ವಿರೋಧಿ ಯಾಗಿವೆ ಇದರಲ್ಲಿ ಯಾವುದೇ ಸಂಶಯವಿಲ್ಲ. ಇವರ ಆಡಳಿತ ದಲ್ಲಿ ಅಸಹಿಂಷ್ಣುತೆ ಹೆಚ್ಚಾಗಿದೆ. ಇವರ ವಿರುದ್ಧ ಮಾತನಾಡಿದವರನ್ನು ದೇಶ ದ್ರೋಹಿಗಳು ಮತ್ತು ಹಿಂದು ಧರ್ಮ ದ್ರೋಹಿಗಳೆಂದು ಅಥವಾ ನಗರ ನಕ್ಸಲ್ ಎಂದು ಹಣೆಪಟ್ಟಿ ಕಟ್ಟಿ ಅವರ ಮೇಲೆ ಕಾನೂನು ಕ್ರಮ ಗಳನ್ನು ಹೇರಿ, ಬಂದಿಸುತ್ತಾರೆ. ನಾವು ಅಧಿಕಾರಕ್ಕೆ ಬಂಧಿರುವುದೆ ಸಂವಿಧಾನ ವನ್ನು ಬದಲಾವಣೆ ಮಾಡವುದಕ್ಕೆ ಎಂದು ಘೋಷಿಸುತ್ತಾರೆ. ಆದ್ದರಿಂದ , ಇಂತಹ ವರನ್ನು ಅಧಿಕಾರದಿಂದ ಕೆಳಗೆ ಇಳಿಸಬೇಕೆಂದರು. ಒಕ್ಕೂಟ ವ್ಯವಸ್ಥೆಗೆ ಗೌರವ ಸೂಚಿಸಿ, ಸಂವಿಧಾನದ ಆಶಯಗಳನ್ನು ಅನುಷ್ಠಾನಕ್ಕೆ ತರುವವರನ್ನು ಜನ ಪ್ರತಿನಿಧಿಗಳಾಗಿ ಆಯ್ಕೆಮಾಡಬೇಕೆಂದು ವಿಚಾರ ಸಂಕಿರಣದಲ್ಲಿ ಜನರಿಗೆ ಕರೆ ನೀಡಿದರು.

ವಿಚಾರ ಸಂಕಿರಣ ದಲ್ಲಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರು ಹಾಗೂ ಸಾಹಿತಿಗಳಾದ ಶ್ರೀ ಬಂಜಗೆರೆ ಜಯಪ್ರಕಾಶ್ ರವರು, ಮುಖ್ಯ ಅತಿಥಿಯಾಗಿ ಮಾತನಾಡುತ್ತಾ, ' ಮನುವಾದ ಮುಕ್ತ ಭಾರತ, ವೆಂದರೆ, ಸರಳವಾಗಿ ಅರ್ಥದಲ್ಲಿ "ನಮ್ಮ ದೇಶದ ಆಡಳಿತವನ್ನು ಸಂವಿಧಾನ ಬದ್ಧಗೊಳಿಸುವುದು, ಅಂದರೆ, ನಮ್ಮ ಸಂವಿಧಾನದಲ್ಲಿ ನ " ಸಾಮಾಜಿಕ ನ್ಯಾಯ ಮತ್ತು ಸಮಾನತೆ" ಯನ್ನು ಗೌರವದಿಂದ ಜಾರಿಗಳಿಸುವುದು ಎಂದರ್ಥ ಎಂದರು, ವಿಚಾರ ಸಂಕಿರಣದ ಆಶಯಗಳು ಕೂಡ ಸ್ಪಷ್ಟವಾಗಿ ಇದನ್ನೆ ಪ್ರತಿಬಿಂಬಿಸಿದೆ. ಇದಕ್ಕಾಗಿ ಆಯೋಜಕರಿಗೆ ನನ್ನ ಅಭಿನಂದನೆಗಳು ಎಂದು ತಮ್ಮ ವಿಚಾರಗಳನ್ನು ಮಂಡಿಸಿದರು.

ಮನುವಾದ ಸಂವಿಧಾನ ವಿರೋಧಿ ಎಂಬುದು ಘಂಟಾ ಘೋಷವಾಗಿ ಹೇಳುವಂತಾಗಬೇಕು. ಏಕೆಂದರೆ, ನಮ್ಮ ಸಂವಿಧಾನ ಮನುವಾದವನ್ನು ಚೆನ್ನಾಗಿ ವಿಮರ್ಶಿಸಿದೆ. ಆದ್ದರಿಂದ ಲೇ ಅವರು ಸಂವಿಧಾನವನ್ನು ಸುಡಲು ಬಯಸುತ್ತಾರೆ. ಮನುವಾದಿಗಳು ಇದೀಗ ಎಲ್ಲಾ ಜಾತಿಗಳಲ್ಲಿ ತುಂಬಿ ಹೋಗಿದ್ದಾರೆ. ಮನುವಾದ ವೇ ಅಸ್ಪೃಶ್ಯತೆ ಯ ಹುಟ್ಟಿಗೆ ಮೂಲ ಕಾರಣ. ಚಾತುರ್ವರ್ಣ ಇದರ ಮೂಲವಾದ. ಇದೇ ಜಾತಿ ಪದ್ಧತಿಯನ್ನು ಬೆಳೆಸುತ್ತಿದೆ ಮತ್ತು ಪ್ರೋತ್ಸಾಹಿಸುತ್ತಿದೆ. ಈ ಜಾತಿ ಯಿಂದಲೇ ಕೀಳು ಮೇಲು, ಶ್ರೇಷ್ಠ ಎಂಬ ಭಾವನೆಗಳು, ಅವಮಾನಕರ ಅಸ್ಪೃಶ್ಯತೆ ಆಚರಣೆಗಳು ಇನ್ನೂ ಜೀವಂತವಾಗಿವೆ. ಹಿಂದಿನ ಕಾಲದಲ್ಲಿ ಬುಡಕಟ್ಟು ಜನಾಂಗದಲ್ಲಿ ಜಾತಿಗಳಿದ್ದವು ಆದರೆ, ಭೇದ–ಭಾವಗಳು ಇರಲಿಲ್ಲ ವೆಂದರು. ಮೇಲು ಕೀಳು ಎಂಬ ಇವತ್ತಿನ ವಾದಗಳಿಗೆ ಯಾವುದೇ ತಾರ್ಕಿಕ ತೆ ಅಥವಾ ಭೌತಿಕವಾದ ಆದಾರಗಳು ಖಂಡಿತ ಇಲ್ಲ.

ಮನುವಾದವು ಸಾಮಾಜಿಕ ಅಭಿವೃದ್ಧಿ ಯನ್ನು ಅಸಾಧ್ಯಗೊಳಿಸುತ್ತದೆ. ಮನು ವಾದವೇ ಅಸ್ಪೃಶ್ಯತೆ ಯನ್ನು ಪೋಷಣೆ ಮಾಡುತ್ತದೆ. ಇವರಿಗೆ ಇದು ಮುಂದುವರಿಯಬೇಕು.ಆದರೆ, ಸಂವಿಧಾನವು ಇಂತಹ ಅನಾಗರಿಕ, ಅಮಾನವೀಯ ಆಚರಣೆಯನ್ನು ರದ್ದು ಮಾಡಿರುವುದು ಇವರಿಗೆ ಇಷ್ಟವಿಲ್ಲದ ಕಾರಣ, ಇವರೇ ಮೂಲತಃ ಸಂವಿಧಾನ ವಿರೋಧಿಗಳು. ಆದ್ದರಿಂದ ಮನುವಾದ ಮುಕ್ತ ಭಾರತ ನಿರ್ಮಾಣ ಮಾಡುವ ನಿಟ್ಟನಲ್ಲಿ ಜನರನ್ನು ಸಂವಿಧಾನ ಬದ್ಧತೆಗೆ ಅಣಿನೆರಸ ಬೇಕೆಂದರು, ಈ ದಿಸೆಯಲ್ಲಿ ಇಂತಹ ವಿಚಾರ ಸಂಕಿರಣಗಳ ಮೂಲಕ ದಲಿತರ ನಡುವೆ ಮಾತ್ರವಲ್ಲದೆ, ಇಡೀ ದೇಶದ ಜನ ಸಮೂಹವನ್ನು ಸಂವಿಧಾನ ಆಶಯಗಳ ಕುರಿತಂತೆ ಜಾಗೃತ ಗೊಳಿಸ ಬೇಕಾದ ತುರ್ತು ಅಗತ್ಯವಿದೆ ಎಂದರು.

ವಿಚಾರ ಸಂಕಿರಣದಲ್ಲಿ, ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರ ಸಂಘಟನೆಯ ಅಧ್ಯಕ್ಷ ರಾದ ನಿತ್ಯಾನಂದ ಸ್ವಾಮಿಯವರು ಮಾತನಾಡುತ್ತಾ, ಪ್ರಸ್ತುತ ಬಿಜೆಪಿ ಆಡಳಿತದಲ್ಲಿ ದಲಿತ ವಿರೋಧಿ ನೀತಿಗಳು ಹೆಚ್ಚಾಗಲು, ಇವರು ಮನುಸ್ಮೃತಿ ಯ ಆರಾಧಕರು, ಈ ಮನುಸ್ಮೃತಿ ಯೇ ಅಸ್ಪೃಶ್ಯತೆ ಗೆ ಮೂಲ ಕಾರಣ ಆದರಿಂದ ಪ್ರಸ್ತುತ ಚುನಾವಣೆಯ ಸಮಯದಲ್ಲಿ, ಇಂತಹ ವಿಚಾರ ಕುರಿತು ಚರ್ಚೆ ನಡೆಸುತ್ತಿರುವ ಆಯೋಜಕರನ್ನು ಶ್ಲಾಘಿಸುತ್ತಾ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು, ಕೇಂದ್ರ ದಲ್ಲಿನ ಬಿಜೆಪಿ ಸರ್ಕಾರ ಮನುವಾದಿ ನೀತಿಯ ಸರ್ಕಾರ ವಾದ್ದರಿಂದ ಅದನ್ನು ಮುಂಬರುವ ಮಹಾ ಚುನಾವಣೆಯಲ್ಲಿ ಸೋಲಿಸ ಬೇಕೆಂದು ಮನವಿ ಮಾಡಿದರು. ದಲಿತೇತರರ ನಡುವೆಯೂ ಹೆಚ್ಚು ಇಂತಹ ಕಾರ್ಯಕ್ರಮ ಗಳನ್ನು ಕೊಂಡಯ್ಯ ಬೇಕಾದ ಅಗತ್ಯವಿದೆ ಎಂದರು.ಮನುವಾದ ಎಂದರೆ ಜಾತಿ ಪದ್ಧತಿಯ ಸಮರ್ಥನೆ. ಮನುವಾದ ನಮ್ಮ ಮನಸ್ಸುಗಳಲ್ಲಿ ಬಿತ್ತಿ ಬೆಳಸಲಾಗಿದೆ. ಹೊಸ ಮನಸ್ಸುಗಳ ಸೃಷ್ಠಿಯೊಂದಿಗೆ ಮನುವಾದ ತೊಲಗಬಹುದು.

ಕರ್ನಾಟಕ ರಾಜ್ಯ ಎಸ್.ಸಿ ಮತ್ತು ಎಸ್.ಟಿ ನೌಕರರ ಸಮನ್ವಯ ಸಮಿತಿಯ ಅಧ್ಯಕ್ಷರಾದ, ಡಿ.ಶಿವ ಶಂಕರ್ ಮಾತನಾಡುತ್ತಾ, ನಮ್ಮ ಮನಗಳಿಂದ, ನಮ್ಮ ಮನೆಗಳಿಂದ ಮನುವಾದವನ್ನ ಮುಕ್ತ ಗೊಳಿಸು ಮೂಲಕ ಆರಂಭಿಸೋಣ. ಹೌದು ಖಂಡಿತ ಪ್ರಸಕ್ತ ಭಾರತ ದೇಶದ ಸಂವಿಧಾನ ಕ್ಕೆ ಹಿಂದೆಂದಿಗಿಂತಲೂ ಹೆಚ್ಚು ಅಪಾಯ ಬಂದಿದೆ. ಮೀಸಲಾತಿಯನ್ನು ಕಿತ್ತು ಹಾಕುವ ಹುನ್ನಾರ ನಡೆದಿದೆ. ಅಸ್ಪೃಶ್ಯತೆ ಯನ್ನು ಬೆಳೆಸುತ್ತಿರುವ ಮನುವಾದಿಗಳನ್ನು ಭಾರತದ ನೆಲದಿಂದ ಮುಕ್ತ ಗೊಳಿಸಲೇ ಬೇಕಾಗಿದೆ. ಇಲ್ಲವಾದರೆ ಇವರು ಸಂವಿಧಾನಕ್ಕೆ ಧಕ್ಕೆ ತರುತ್ತಾರೆ. ಸಂವಿಧಾನ ವಿಲ್ಲದೆ ದೇಶವು ಅರಾಜಕತೆ ಯಾಗುತ್ತದೆ. ನಾವೆಲ್ಲರೂ, ಒಟ್ಟಾಗಿ ಅಂಬೇಡ್ಕರ್ ರವರ ಕನಸಿನ ಸಮಾನತೆಯ ಭಾರತದ ಪರಿಕಲ್ಪನೆ' ಯ ಅನುಷ್ಟಾನಕ್ಕೆ ಹೋರಾಟ ಅನಿವಾರ್ಯ ವೆಂದರು. ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಹರಳ ಹಳ್ಳಿ, ಮಾತನಾಡಿ ಕೇಂದ್ರ ದಲ್ಲಿನ ಬಿಜೆಪಿ ಆಡಳಿತದ ದಲಿತ ವಿರೋಧಿ ನೀತಿಗಳನ್ನು ಜನರ ಮದ್ಯೆ ಕೊಂಡೊಯ್ಯಲು ಕರೆ ನೀಡಿದರು. ದಲಿತ್ ಶೋಷಣ್ ಮುಕ್ಕಿ ಮಂಚ್ ರಾಷ್ಟ್ರೀಯ ಸದಸ್ಯರಾದ ನಾಗರಾಜ ನಂಜುಂಡಯ್ಯ ನವರು ಈ ವಿಚಾರ ಸಂಕಿರಣದ ಅದ್ಯಕ್ಷತೆಯನ್ನು ವಹಿಸಿದ್ದರು. ಎನ್. ರಾಜಣ್ಣ ನವರು, ಪ್ರಸ್ತಾವಿಕ ನುಡಿಗಳನ್ನು ನುಡಿದರು. ಆರಂಭದಲ್ಲಿ, ಹೆಚ್.ಜಿ.ನಾಗಣ್ಣ ಸ್ವಾಗತ ಕೋರಿದರು. ಕೊನೆಯಲ್ಲಿ ಶರಣಪ್ಪ.ಟಿ.ವಾಲಿ ಯವರು ವಂದಿಸಿದರು. ಮಾಯುಶ್ರೀ ಯವರು ಕಾರ್ಯಕ್ರಮ ವನ್ನು ಅಚ್ಚುಕಟ್ಟಾಗಿ ನಿರೂಪಣೆ ಮಾಡಿದರು.

–ನಾಗರಾಜ ನಂಜುಂಡಯ್ಯ

ಡಿಜಿಟಲ್ ವೇದಿಕೆಗಳಿಂದ ಚುನಾವಣೆಯ ವಿಕೃತಿಯ ತಡೆ ಹೇಗೆ?... ಪುಟ 16 ರಿಂದ

ವಾಸಸ್ಥಳ, ಆಸಕ್ತಿ, ಮಿತ್ರರ ಸ್ವರೂಪ, ಖರೀದಿ ಮಾಡಿರುವ ಮಾಡಲಿಚ್ಛಿಸುವ ವಸ್ತು/ಸೇವೆಗಳು, ಇಷ್ಟದ ಜಾಲತಾಣಗಳು, ಧಾರ್ಮಿಕ–ಸಾಮಾಜಿಕ–ರಾಜಕೀಯ ಧೋರಣೆಗಳು ಇತ್ಯಾದಿ ಎಲ್ಲಾ ಮಾಹಿತಿಗಳನ್ನು ಹೊಂದಿರುತ್ತವೆ. ಇವನ್ನು ಅದು ಒದಗಿಸುವ 'ಉಚಿತ ಸೇವೆ' (ಗೂಗಲ್ ನಿಂದ ಮೈಲ್ ಮತ್ತು ಹುಡುಕಾಟ ಫೇಸ್ ಬುಕ್ ನಿಂದ 'ಗೆಳೆತನ' 'ಅಭಿಮಾನಿ/ಮಿತ್ರ ಬಳಗ') ಗೆ ಬದಲಿಯಾಗಿ ಬಳಕೆದಾರರಿಂದ ನೇರವಾಗಿ ಅಥವಾ ಅವರ ಜತೆ ವೇದಿಕೆಯ ಒಡನಾಟದಿಂದ ಪಡೆಯುತ್ತದೆ. ಇವನ್ನು ಅದು ಜಾಹೀರಾತುದಾರರಿಗೆ 'ಮಾರುತ್ತದೆ' ಅಥವಾ 'ಸೂಕ್ತ' ಜಾಹೀರಾತನ್ನು ಬಳಕೆದಾರರಿಗೆ ತಲುಪಿಸಲು ಬಳಸುತ್ತದೆ. ಜಾಹೀರಾತುದಾರರ ಉತ್ಪನ್ನ/ಸೇವೆಗೆ 'ಗುರಿ'ಯಾಗುವ ನಿರ್ದಿಷ್ಟ ವಯೋಮಾನ (25–30), ಆದಾಯ (30–40 ಮಾಸಿಕ ಆದಾಯ) ಇತ್ಯಾದಿ ಮಾನದಂಡಗಳ ಆಧಾರದ ಮೇಲೆ 'ಮೈಕ್ರೊ ಟಾರ್ಗೆಟಿಂಗ್' ನ ಸಾಧ್ಯತೆಯಿರುವುದರಿಂದ ಹೆಚ್ಚೆಚ್ಚು ಜಾಹೀರಾತುದಾರರು ಈ ವೇದಿಕೆಗಳನ್ನು ಹೆಚ್ಚೆಚ್ಚು ಬಳಸುತ್ತಿದ್ದಾರೆ. ಇಂದು ಈ ಡಿಜಿಟಲ್ ವೇದಿಕೆಗಳು ಇತರ ಯಾವುದೇ ಸಾಮೂಹಿಕ ಮಾಧ್ಯಮಕ್ಕಿಂತ (ಪತ್ರಿಕೆ, ರೇಡಿಯೋ, ಈಗ ಟಿವಿ ಯನ್ನು ಮೀರಿಸಿ) ಹೆಚ್ಚಿನ ಜಾಹೀರಾತು ಆದಾಯ ಗಳಿಸುತ್ತಿವೆ. 2025ರ ಹೊತ್ತಿಗೆ ಇತರ ಎಲ್ಲಾ ಜಾಹೀರಾತು ಮಾಧ್ಯಮಗಳ ಒಟ್ಟು ಆದಾಯವನ್ನು ಮೀರಲಿವೆ ಎಂದು ಅಂದಾಜು ಮಾಡಲಾಗಿದೆ.

ಡಿಜಿಟಲ್ ವೇದಿಕೆಗಳ ಬಲ ಹೆಚ್ಚುತ್ತಿದೆ ಮಾತ್ರವಲ್ಲ, ಅವುಗಳೊಳಗೆ ಏಕಸ್ವಾಮ್ಯವೂ ಹೆಚ್ಚುತ್ತಿದೆ. ಎಲ್ಲಾ ಡಿಜಿಟಲ್ ವೇದಿಕೆಗಳ ಜಾಹೀರಾತಿನ ಸಿಂಹಪಾಲು (ಶೇ. 60 ಈಗ) – ಗೂಗಲ್ ಮತ್ತು ಫೇಸ್ ಬುಕ್) – ಎರಡೇ ಕಂಪನಿಗಳಿಗೆ ಹೋಗುತ್ತಿದೆ. ಇಂಟರ್‌ನೆಟ್ ಟ್ರಾಫಿಕ್ ನಲ್ಲಿ ಶೇ.70 ಈ ಎರಡು ವೇದಿಕೆಗಳ ಸೇವೆಗಳ ಪಾಲಾಗಿದೆ. ಈ ಎರಡು ಕಂಪನಿಗಳು ಭಾರೀ ಮಾರುಕಟ್ಟೆ ಮೌಲ್ಯ ಮತ್ತು ಹಣಬಲ ಹೊಂದಿದ್ದು ಪೈಪೋಟಿ ನೀಡುವ ಯಾವುದೇ ಕಂಪನಿಯನ್ನು ನುಂಗಿ ಹಾಕುವ ಸಾಮರ್ಥ್ಯ ಹೊಂದಿವೆ.

ಡಿಜಿಟಲ್ ವೇದಿಕೆಗಳ ಈ ಎಲ್ಲಾ ಗುಣಲಕ್ಷಣಗಳ ಪರಿಣಾಮ ಚುನಾವಣಾ ಪ್ರಚಾರದ ಮೇಲೆ ಏನು? ಅವನ್ನು ಚುನಾವಣಾ ಪ್ರಚಾರದ ಮಾಧ್ಯಮವಾಗಿ ಬಳಸಿದಾಗ ಅಥವಾ 'ರಾಜಕೀಯ ಪಕ್ಷ' ಮತ್ತು 'ಅಭ್ಯರ್ಥಿ'ಗಳನ್ನು 'ಮಾರಲು' (ಅಥವಾ ಅವರ ಮಾರ್ಕೆಟಿಂಗ್ ಗೆ) ಬಳಸುವುದರ ಪರಿಣಾಮ ಏನು? ಅವು ಏಕೆ ನಮ್ಮ ಚುನಾವಣಾ ವ್ಯವಸ್ಥೆಗೆ ಅಪಾಯ ತಂದೊಡ್ಡಬಹುದು? ಮೊದಲನೆಯದಾಗಿ ಈ ವೇದಿಕೆಗಳಲ್ಲಿ ಪ್ರಚಾರದ ಸಾಧ್ಯತೆ ಅಗಾಧವಾದ್ದು, ಅನಂತವಾದ್ದು. ಫೇಸ್ ಬುಕ್ ಪುಟಗಳು, ಯೂ ಟ್ಯೂಬ್ ಚಾನೆಲುಗಳು, ಪ್ರಚಾರದ ಲೈವ್ ಪ್ರಸಾರ, ಫೋಸ್ಟರುಗಳು, ವಿಡಿಯೊಗಳು, ವೆಬ್ ಸೈಟು ಇತ್ಯಾದಿ. ಆದ್ದರಿಂದ ಹೆಚ್ಚು ಹಣ ಇರುವ ಪಕ್ಷ/ಅಭ್ಯರ್ಥಿ ಅನಂತ ಅಗಾಧ ಪ್ರಚಾರ ಮಾಡಬಲ್ಲದು. ನಿರ್ದಿಷ್ಟ ಸಣ್ಣ ಜನವಿಭಾಗಗಳಿಗೆ ನಿರ್ದಿಷ್ಟ ಪ್ರಚಾರ ಸಾಮಗ್ರಿಗಳನ್ನು ತಲುಪಿಸುವ ಮೈಕ್ರೊ ಟಾರ್ಗೆಟಿಂಗ್ ನ ಅದರ ವಿಶಿಷ್ಟ ಸಾಮರ್ಥ್ಯ ಚುನಾವಣಾ ಪ್ರಚಾರದ ಚಹರೆಯನ್ನೇ ಬದಲಿಸಬಲ್ಲದು. ಇದಲ್ಲದೆ ಹಲವು ಹೊಸ ವಿಧಗಳಲ್ಲಿ ಒಂದು ಪಕ್ಷದ ಅಭ್ಯರ್ಥಿಯ 'ತಲುಪುವಿಕೆ'ಯನ್ನು ಪ್ರಭಾವಿಸಬಲ್ಲದು. ಉದಾ: ಫೇಸ್ ಬುಕ್ ಅವರ 'ಹಿಂಬಾಲಕ'ರ ಸಂಖ್ಯೆ ಹೆಚ್ಚಿಸಬಲ್ಲದು, ಪ್ರತಿಸ್ಪರ್ಧಿಗಳ 'ಹಿಂಬಾಲಕ'ರ ಸಂಖ್ಯೆ ಕಡಿತ ಮಾಡಬಲ್ಲದು, ಪೋಸ್ಟ್ ಗಳು 'ವೈರಲ್' ಆಗಲು ಸಹಾಯ ಮಾಡಬಲ್ಲದು. ಪ್ರಚಾರ ಸಾಮಗ್ರಿಗಳು, ಪೋಸ್ಟ್ ಗಳು ಜಾಹೀರಾತುಗಳೇ ಅಥವಾ ಸಹಜ ಪೋಸ್ಟ್ ಗಳೇ ಎಂಬುದನ್ನು ಮರೆಮಾಚಬಲ್ಲವು. ಇವೆಲ್ಲ ಬರಿಯ ಸಾಧ್ಯತೆಗಳು ಮಾತ್ರವಲ್ಲ, ಇವನ್ನು ಫೇಸ್‌ಬುಕ್ ಮತ್ತು ಕೆಂಬ್ರಿಜ್ ಅನಾಲಿಟಿಕಾ ಗಳು ಟ್ರಂಪ್ ಮತ್ತು ಬ್ರೆಕ್ಸಿಟ್ ಪ್ರಚಾರದಲ್ಲಿ ಬಳಸಿವೆ ಎನ್ನಲಾಗಿದೆ.

ಈ ಜಾಗತಿಕ ಡಿಜಿಟಲ್ ವೇದಿಕೆಗಳು ತಮ್ಮ ಜಾಹೀರಾತು ಆದಾಯದ ಮೊತ್ತ ಮತ್ತು ಜಾಹೀರಾತುದಾರರ ಬಗೆಗಿನ ಮಾಹಿತಿಯನ್ನು ಮುಚ್ಚಿಡುತ್ತವೆ. ಅವು ಹಲವು ವಿದೇಶೀ ಜಾಹೀರಾತು ಏಜೆನ್ಸಿಗಳನ್ನು ಬಳಸಿ ಮೂಲ ಜಾಹೀರಾತುದಾರರ ಗುರುತು ಮರೆಮಾಚಬಲ್ಲವು. ಈ ಕಂಪನಿಗಳು ಮತ್ತು ಏಜೆನ್ಸಿಗಳು ಯಾವುದೇ ದೇಶದ ಕಾನೂನು ಕಟ್ಟಳೆಗಳಿಗೆ ಬದ್ಧವಾಗದೆ ಇರುವುದರಿಂದಲೂ ಮತ್ತು ಲೆಕ್ಕಪತ್ರದಲ್ಲಿ ಅವುಗಳು ಅನುಸರಿಸುವ ತಂತ್ರಗಳಿಂದಲೂ ಇವು ಯಾವುದೇ ನಿಬಂಧನೆಗಳಿಗೆ ಒಳಪಡುವ ಸಾಧ್ಯತೆ ಇಲ್ಲವೇ ಇಲ್ಲ ಎನ್ನುವಷ್ಟು ಬಹಳ ಕಡಿಮೆ. ಚುನಾವಣಾ ನಿಬಂಧನೆಗಳ ಸಂದರ್ಭದಲ್ಲಿ ಇವು ಅಪಾಯಕಾರಿ.

ಸುಳ್ಳು ಸುದ್ದಿ ಅಥವಾ ಫೇಕ್ ನ್ಯೂಸ್ ಈ ಡಿಜಿಟಲ್ ವೇದಿಕೆಗಳು ಚುನಾವಣೆಗೆ ಉಂಟು ಮಾಡಿರುವ ಇನ್ನೊಂದು ಅಪಾಯಕಾರಿ ಸಾಧ್ಯತೆ. ಇಂತಹ ಫೇಕ್ ನ್ಯೂಸ್ ಗಳು 'ವೈರಲ್' ಆಗುವ ಸಾಧ್ಯತೆ ಯಾವಾಗಲೂ ಹೆಚ್ಚು. 'ನಾಯಿ ಮನುಷ್ಯನನ್ನು ಕಚ್ಚಿತು ಎನ್ನುವುದಕ್ಕಿಂತ, ಮನುಷ್ಯ ನಾಯಿಯನ್ನು ಕಚ್ಚಿದ' ಎಂಬುದು ಜನರ ಅದರಲ್ಲೂ ಸಾಮಾಜಿಕ ಮಾಧ್ಯಮಗಳ ಬಳಕೆದಾರರ ಕುತೂಹಲ ಕೆರಳಿಸುವ ಮತ್ತು ಅಂತೆ–ಕಂತೆಗಳ ಮೂಲಕ ಕಾಡ್ಗಿಚ್ಚಿನಂತೆ ಹಬ್ಬುವ ಸಾಧ್ಯತೆ ಹೆಚ್ಚು. ಇಂತಹ ಫೇಕ್ ನ್ಯೂಸ್ ನ್ನು ಈ ಡಿಜಿಟಲ್ ವೇದಿಕೆಗಳು ನಿಯಂತ್ರಿಸಬೇಕು ಎಂದು ನಿರೀಕ್ಷಿಸುವುದಕ್ಕಿಂತ ಹಾಸ್ಯಾಸ್ಪದವಾದದ್ದು ಇನ್ನೊಂದು ಇರಲಿಕ್ಕಿಲ್ಲ. ಏಕೆಂದರೆ 'ವೈರಲ್' ಪೋಸ್ಟುಗಳು ಹೆಚ್ಚಿದಷ್ಟು ಈ ವೇದಿಕೆಗಳ ಲಾಭ, ಆದಾಯ ಹೆಚ್ಚುತ್ತದೆ. ಫೇಕ್ ನ್ಯೂಸ್ ವೈರಲ್ ಆಗುವ ಸಾಧ್ಯತೆ ಹೆಚ್ಚಿದ್ದು ಅವು ಫೇಕ್ ನ್ಯೂಸ್ ಗಳನ್ನು ನಿಯಂತ್ರಿಸುವ ಬದಲು ಆದಾಯ–ಲಾಭ ಹೆಚ್ಚಿಸಲು ಉತ್ತೇಜಿಸುವ ಸಾಧ್ಯತೆಯೇ ಹೆಚ್ಚು.

ಡಿಜಿಟಲ್ ವೇದಿಕೆಗಳಲ್ಲಿ ಚುನಾವಣೆ ಮತ್ತು ಪ್ರಜಾಪ್ರಭುತ್ವಕ್ಕೆ ಈ ಅಪಾಯಗಳನ್ನು ಎದುರಿಸಿ ಹೋಗಲಾಡಿಸುವುದು ಹೇಗೆ? ಇಲ್ಲಿ ಭಾರೀ ಜಾಹೀರಾತು, ಕಾಸಿಗಾಗಿ ಸುದ್ದಿ, ಫೇಕ್ ನ್ಯೂಸ್ ಇವೆಲ್ಲವನ್ನು ಹರಿಯ ಬಿಡುವವು ರಾಜಕೀಯ ಪಕ್ಷಗಳೇ, ಅಭ್ಯರ್ಥಿಗಳೇ. ಅವು ದೇಶದ ಕಾನೂನಿನ ಅಡಿಯಲ್ಲಿ ಇವೆ. ಆದ್ದರಿಂದ ಅವು ಈ ವೇದಿಕೆಗಳ ಮೇಲೆ ನೇರವಾಗಿ ಅಥವಾ ಇತರ ಏಜೆನ್ಸಿಗಳ ಮೂಲಕ ಮಾಡುವ ಪ್ರಚಾರವನ್ನು ಗುರುತಿಸುವ ಅದರ ಮೇಲೆ ಕಣ್ಣಿಡುವ ಮತ್ತು ಅದರ ಮೇಲೆ ಮಾಡುವ ವೆಚ್ಚದ ಮಾಹಿತಿ ಪಡೆಯುವತ್ತ ಕ್ರಮಗಳನ್ನು ಕೈಗೊಳ್ಳಬೇಕು. ಅದೇ ರೀತಿ ಈ ವೇದಿಕೆಗಳು ಚುನಾವಣಾ ಪ್ರಚಾರದ ಜಾಹೀರಾತುದಾರ ಗುರುತು ಮತ್ತು ವೆಚ್ಚದ ವಿವರಗಳನ್ನು ಕೊಡುವಂತೆ ಕಾನೂನು ಕ್ರಮ ಕೈಗೊಳ್ಳಬೇಕು. ಬಿಜೆಪಿ ಸರಕಾರ ಗುಪ್ತ ಚುನಾವಣಾ ಬಾಂಡುಗಳ ವ್ಯವಸ್ಥೆ ತರುವ ಮೂಲಕ ರಾಜಕೀಯ ಪಕ್ಷಗಳ ಮೇಲೆ ನಿಗಾ ವಹಿಸುವುದನ್ನು ಇನ್ನಷ್ಟು ಕಷ್ಟಗೊಳಿಸಿದೆ. ಅಭ್ಯರ್ಥಿಗಳ ವೆಚ್ಚದ ಮೇಲೆ ಮಾತ್ರ ಮಿತಿ ಹೇರಿ, ರಾಜಕೀಯ ಪಕ್ಷಗಳು ಚುನಾವಣೆಯ ಮೇಲೆ ಮಾಡುವ ಖರ್ಚಿನ ಮೇಲೆ ಯಾವುದೇ ಮಿತಿ ಹೇರದೆ ಡಿಜಿಟಲ್ ವೇದಿಕೆಗಳ ಮೇಲೆ ಖರ್ಚಿನ ಮೂಲ ಮತ್ತು ವಿವರ ಪಡೆಯುವುದನ್ನು ಕಷ್ಟಸಾಧ್ಯ ಮಾಡಿದೆ. ಆದ್ದರಿಂದ ಡಿಜಿಟಲ್ ವೇದಿಕೆಗಳ ಮೇಲೆ ನಡೆಯುವ ಚುನಾವಣಾ ಪ್ರಚಾರ ನಿಯಂತ್ರಿಸಬೇಕಾದರೆ, ರಾಜಕೀಯ ಪಕ್ಷಗಳು ಚುನಾವಣೆಯ ಮೇಲೆ ಮಾಡುವ ಖರ್ಚಿನ ಮೇಲೆ ಮಿತಿ ಹೇರುವುದು ಮೊದಲ ಅಗತ್ಯವಾಗುತ್ತದೆ.

ಡಿಜಿಟಲ್ ವೇದಿಕೆಗಳು ಭಾರತದ ಚುನಾವಣೆಯನ್ನು ವಿಕೃತ ಮತ್ತು ಭ್ರಷ್ಟಗೊಳಿಸುವುದನ್ನು ತಡೆಯುವುದು ಹೇಗೆ ಎಂಬುದರ ಕುರಿತು ಎಫ್.ಎಸ್.ಎಂ.ಐ.(ಮುಕ್ತ ತಂತ್ರಾಂಶ ಚಳುವಳಿ) ಮತ್ತು ಎ.ಡಿ.ಆರ್.(ಚುನಾವಣಾ ಸುಧಾರಣಾ ಸಂಘಟನೆ) ಮುಂತಾದ ಸಂಘಟನೆಗಳು 'ಟೆಕ್4ಡೆಮೊಕ್ರಸಿ' ಎಂಬ ಹೆಸರಲ್ಲಿ ದೇಶದಾದ್ಯಂತ ಚರ್ಚೆ, ಸಂವಾದ, ಪ್ರಚಾರಾಂದೋಲನ ಏರ್ಪಡಿಸುತ್ತಿವೆ. ಇದರ ಭಾಗವಾಗಿ ಬೆಂಗಳೂರಲ್ಲಿ ಮಾರ್ಚ್ 10 ರಂದು ಒಂದು ಸಭೆ ಏರ್ಪಡಿಸಲಾಗಿತ್ತು. ಎಫ್.ಎಸ್.ಎಂ.ಐ. ನಾಯಕ ಪ್ರೊಬಿರ್ ಪುರಕಾಯಸ್ಥ ಮತ್ತು ಹಿರಿಯ ಪತ್ರಕರ್ತ ಸುಗತ ಶ್ರೀನಿವಾಸರಾಜು ಮಾತನಾಡಿದರು. ಈ ಬಗ್ಗೆ ಜನರಲ್ಲಿ ಅರಿವು ಮೂಡಿಡೀ ಬಗ್ಗೆ ಕ್ರಮ ಕೈಗೊಳ್ಳಲು ಸರಕಾರದ ಮೇಲೆ ಒತ್ತಡ ಹೇರುವುದು ಪ್ರತಿಯೊಬ್ಬ ಪ್ರಜಾಪ್ರಭುತ್ವವಾದಿಯ ಕರ್ತವ್ಯ. ●

ವೆನೆಜುವೆಲಾ : ಜಲ ವಿದ್ಯುತ್ ಸ್ಥಾವರದ ಮೇಲೆ ವಿಧ್ವಂಸಕ ದಾಳಿ





ವೆನೆಜುವೆಲಾ ಅಧ್ಯಕ್ಷ ನಿಕೊಲಸ್ ಮಡೊರೊ ನೇತೃತ್ವದ ಕಾನೂನು ಬದ್ದವಾಗಿ ಚುನಾಯಿತವಾದ ಸರ್ಕಾರದ ವಿರುದ್ದ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೊಳಕು ಸಮರವನ್ನೇ ಸಾರಿದ್ದಾರೆ.

ಮಡೊರೊ ರವರು, ವೆನೆಜುವೆಲಾದ ರಾಷ್ಟ್ರೀಯ ಸಾರ್ವಭೌಮತ್ವ ಕ್ಕೆ ಎದುರಾಗಿರುವ ಹೊಸ ಗಂಭೀರ ಸ್ವರೂಪದ ಅಪಾಯವನ್ನು ದಿಟ್ಟವಾಗಿಯೇ ಎದುರಿಸಲು ತನ್ನ ದೇಶದ ಬೊಲಿವಿಯೀರಿಯನ್ ಕ್ರಾಂತಿಯ ಮೇಲೆ ನಂಬಿಕೆಯೊಂದಿರುವ ಜನತೆಯನ್ನು ಪರಿಸ್ಥಿತಿಯನ್ನು ಎದುರಿಸಲು ಸಜ್ಜುಗೊಳಿಸುತ್ತಿದ್ದಾರೆ. ಜಗತ್ತಿನ ಎಲ್ಲಾ ಪ್ರಜಾಸತ್ತಾತ್ಮಕ ಮತ್ತು ಸಾಮ್ರಾಜ್ಯಶಾಹಿ ವಿರೋಧಿ ಶಕ್ತಿಗಳು ಒಂದಾಗಿ ಹೋರಾಡಲು ಅಣಿಯಾಗಬೇಕೆಂದು ಕರೆ ನೀಡಿದ್ದಾರೆ.

ಸೈಬರ್ ಮೂಲಕ ಹೊಸ ರೀತಿಯ ವಿಧ್ವಂಸಕ ದಾಳಿ:

ಬೊಲಿವಿಯೀರಿಯನ್ ಕ್ರಾಂತಿಯಲ್ಲಿ ಅಪಾರ ನಂಬಿಕೆ ಹೊಂದಿರುವ ಚಾವೆಜ್ ಅನುಯಾಯಿ ವೆನೆಜುವೆಲಾ ಪ್ರಜೆಗಳ ವಿಶ್ವಾಸವನ್ನು ಕುಂದಿಸಲು, ಹೊಸ ರೀತಿಯ ಸೈಬರ್ ದಾಳಿಯನ್ನು ನಡೆಸಲಾಗಿದೆ. ಗುರಿ ಎಂಬ ಜಲ ವಿದ್ಯುತ್ ಸ್ಥಾವರದ ಮೇಲೆ ನಡೆದ ವಿಧ್ವಂಸಕ ದಾಳಿಯ ಪರಿಣಾಮದಿಂದಾಗಿ, ಮಾರ್ಚ್ 8 ರ ಮುಂಜಾನೆಯಿಂದ ಮಾರ್ಚ್ 10 ರ ಮುಂಜಾನೆಯ ವರೆವಿಗೆ, ಕನಿಷ್ಠ ಶೇ.80 ರಷ್ಟು ವೆನೆಜುವೆಲಾ ಭೂಪ್ರದೇಶದಲ್ಲಿ ಜನ ವಸತಿ ಮತ್ತು ವಾಣಿಜ್ಯ ಮಳಿಗೆಗಳು ಕತ್ತಲೆಯಲ್ಲಿ ಮುಳುಗಿದ್ದವು. ವೆನೆಜುವೆಲಾ ಇತಿಹಾಸದಲ್ಲಿಯೇ ಇದೊಂದು ಹೊಸ ದಾಳಿಯಾಗಿತ್ತು ಎನ್ನಲಾಗಿದೆ. ಇಂತಹ ದಾಳಿಗಳನ್ನು ಮೊದಲೇ ನಿರೀಕ್ಷೆ ಮಾಡಿದ್ದ ಮಡೊರೊ ಸರ್ಕಾರ ಪರಿಸ್ಥಿತಿಯನ್ನು ಸೂಕ್ತವಾಗಿ ಎದುರಿಸಲು ತಯಾರಾಗಿತ್ತು.

ಆರ್ಥಿಕ ಅಸ್ಥಿರತೆ ಮತ್ತು ಬಂಡಾಯದ ಯಾವುದೇ ಕ್ಲಿಷ್ಟ ಸನ್ನಿವೇಶವನ್ನು ನಿಗ್ರಹ ಮಾಡಲು ಮಡೊರೊ ನೇತೃತ್ವದ ಸರ್ಕಾರ ಕೈಗೊಂಡಿರುವ ಕ್ರಮಗಳನ್ನು ದುರ್ಬಲಗೊಳಿಸುವ ಸಲುವಾಗಿ ಅಮೆರಿಕ ತನ್ನ ಗುಲಾಮ ಹಂಗಾಮಿ ಅಧ್ಯಕ್ಷ ಜುವಾನ್ ಗುಯಾಡೊ ರ ನೇತೃತ್ವದಲ್ಲಿ ನಡೆಸಲಾಗಿರುವ ಘೋರ ವಿಧ್ವಂಸಕಾರಿ ದಾಳಿ ಇದು ಎಂದು ಕರೆಯಲಾಗಿದೆ. ಪೆಬ್ರವರಿ 23ರಂದು ಹೊಸ ಹಂಗಾಮಿ ಅಧ್ಯಕ್ಷರು 'ಮಿರಾ ಪ್ಲೋರ್' ಗೆ ಆಗಮಿಸಿ ಅಧಿಕಾರವನ್ನು ಹಿಡಿಯಲು ಪ್ರಯತ್ತಿಸಿದಾಗ, ಅದನ್ನು ವಿಫಲಗೊಳಿಸಿ, ಅವನನ್ನು ಕವಡೆ–ಕವಣೆಯಂತೆ ಕಡೆಗಣಿಸಿದರು. ಈ ಹಿನ್ನೆಲೆಯಲ್ಲಿ, ಸೈಬರ್ ದಾಳಿಯನ್ನು ನಡೆಸಿ ಜನರನ್ನು ವಿಚಲಿತಗೊಳಿಸಲು ಪ್ರಯತ್ನ ನಡೆಸಲಾಗಿದೆ. ಇದೊಂದು ರೀತಿಯ ಅಮೆರಿಕದ ಕೊಳಕು ನೀತಿಯ ಸಮರವಾಗಿದೆ ಎಂಬ ಅಭಿಪ್ರಾಯ ಮೂಡಿ ಬರುತ್ತಿದೆ.

ರಾಜಕೀಯ ವಿರೋಧಿ ಗುಂಪುಗಳು 2014 ರಿಂದ 2017 ರ ಅವಧಿಯಲ್ಲಿ ಇಂತಹ ಸಾಕಷ್ಟು ಹಿಂಸಾತ್ಮಕ ದಾಳಿಗಳನ್ನು ನಡೆಸಿದ್ದಾರೆ ಆದರೆ, ಯಶಸ್ವಿಯಾಗಿಲ್ಲ ಅಷ್ಟೇ. 2018ರ ಮೇ ನಲ್ಲಿ ನಡೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಮಡೊರೊ ರವರು ಶೇ 67 ರಷ್ಟು ಬಹುಮತ ದೊಂದಿಗೆ ವಿಜಯಿ ಶಾಲಿಯಾಗಿ ಹೊರಬಂದ ನಂತರವಂತೂ ಅಮೆರಿಕಾಕ್ಕೆ ನುಂಗಲಾರದ ತುರ್ತಾಗಿ ಪರಿಣಮಿಸಿತ್ತು. ಕೊಲಂಬಿಯಾದೊಂದಿಗೆ ಶಾಮೀಲಾಗಿ ಒಮ್ಮೆ ಮಡೊರೊ ರವರ ಹತ್ಯೆಗೆ ಪ್ರಯತ್ನ ನಡೆಸಿ ವಿಫಲವಾಗಿತ್ತು ಎಂಬುದನ್ನು ಮರೆಯಬಾರದು.

ಈ ಆಕ್ರಮಣಕಾರಿ ಗುಣಲಕ್ಷಣಗಳು 80 ರ ದಶಕದಲ್ಲಿ ಸ್ಯಾಂಡಿನಿಸ್ತಾ ನಿಕರಾಗುವಾ ವಿರುದ್ದ ಸಿಐಎ ವಿಧ್ವಂಸಕ ಕೈಪಿಡಿಗಳು ದಾಖಲೆಗಳಲ್ಲಿವೆ. ಆದರೆ, ಆ ಸಮಯದಲ್ಲಿ ವಿದ್ಯುತ್ ಪ್ರಸರಣ ಮಾರ್ಗಗಳ ಮೇಲೆ ಯಾವುದೇ ಇಂತಹ ದಾಳಿಗಳು ನಡೆದಿರಲಿಲ್ಲ ಎಂದು ರಾಜಕೀಯ ವಿಶ್ಲೇಷಕರು ಹೇಳುತ್ತಾರೆ.

ಹ್ಯೂಗೊ ಚಾವೆಜ್ 1999 ರಲ್ಲಿ, ವೆನೆಜುವೆಲಾ ದ ಅಧ್ಯಕ್ಷ ರಾಗಿ ಬೊಲಿವಿಯೀರಿಯನ್ ಕ್ರಾಂತಿಯ ಪ್ರಕ್ರಿಯೆಯನ್ನು ಮುಂದುವರಿಸಿಕೊಂಡು ಬಂದ ನಂತರದಿಂದಲೂ ಅಮೆರಿಕದ ಬೆಂಬಲದೊಂದಿಗೆ ಬಲಪಂಥೀಯ ಕೂಟದವರು ಬೊಲಿವಿಯೀರಿಯನ್ ಸರ್ಕಾರ ವನ್ನು ಉರುಳಿಸಲು ಪ್ರಯತ್ನ ಮಾಡುತ್ತಲೇ ಬಂದಿರುವುದು ವಿಶ್ವಕ್ಕೆ ಗೊತ್ತಿರುವ ಸಂಗತಿಯಾಗಿದೆ. 2002 ರಲ್ಲಿ ಚಾವೆಜ್ ವಿರುದ್ಧದ ಕ್ಷಿಪ್ರ ಕ್ರಾಂತಿಯ ಪ್ರಯತ್ನವನ್ನು ಅಲ್ಲಿನ ಜನರು ಒಗ್ಗಟ್ಟಿನಿಂದ ವಿಫಲ ಗೊಳಿಸಿದ್ದರು.

ಪ್ರಸಕ್ತ ಬಿಕ್ಕಟ್ಟಿನ ಮೂಲ ತಿರುಳೆಂದರೆ, ವೆನೆಜುವೆಲಾ ತೈಲ ಸಂಪನ್ಮೂಲ ರಾಷ್ಟಗಳಲ್ಲಿ ಅಗ್ರ ಸ್ಥಾನ ದಲ್ಲಿದೆ. ಇಲ್ಲಿಂದ ಅಮೆರಿಕ ಯಥೇಚ್ಛವಾಗಿ ತೈಲವನ್ನು ಖರೀದಿಸುತ್ತದೆ. 2014 ರ ನಂತರ, ತೈಲದ ಬೆಲೆಗಳ ಕುಸಿತದಿಂದ ವೆನೆಜುವೆಲಾ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದೆ. ಇದು ಜನತೆಯ ಜೀವನದ ಮೇಲೆ ಪರಿಣಾಮ ಬೀರಿದೆ. ಇದು ಅಲ್ಲಿನ ಆಡಳಿತದ ಮೇಲೆಯೂ ಒತ್ತಡ ಮೂಡಿಸಿದೆ. ಈ ಪರಿಸ್ಥಿತಿಯನ್ನು ತನ್ನ ಅನುಕೂಲಕ್ಕೆ ಬಳಸಿಕೊಳ್ಳಲು ಅಮೆರಿಕ ಪ್ರಯತ್ನವನ್ನು ಮಾಡುತ್ತಲೇ ಬಂದಿದೆ. ಆದರೆ, ಬೊಲಿವಿಯೇರನ್ ಕ್ರಾಂತಿಯ ಆ ಜನ ಸಮೂಹವನ್ನು ಸೋಲಿಸಲು ಸಾಧ್ಯವಾಗದೆ ಅಮೆರಿಕಾ ಹತಾಶೆಯಿಂದ ಇಂತಹ ಕ್ರೂರ ಹಸ್ತಕ್ಷೇಪವನ್ನು ನಡೆಸುತ್ತಿದೆ. ಇದನ್ನು ಸೋಲಿಸಲು ಇಡೀ ಜಗತ್ತಿನ ಪ್ರಜಾಸತ್ತಾತ್ಮಕ ಸರಕಾರಗಳು ಒಕ್ಕೊರಲಿನಿಂದ ಅಮೆರಕಾದ ಅಂದರೆ ಸಾಮ್ರಾಜ್ಯ ಶಾಹಿಯ ಈ ಆಕ್ರಮಣಕಾರಿ ಸಮರವನ್ನು ನಿಲ್ಲಿಸುವಂತೆ ಒತ್ತಡ ಹೇರಬೇಕಾದ ಸಮಯವಿದಾಗಿದೆ. ಭಾರತವು ತನ್ನ ಮೌನವನ್ನು ಮುರಿದು ವೆನೆಜುವೆಲಾ ಸರಕಾರದ ಪರ ದ್ವನಿ ಎತ್ತಬೇಕಾಗಿದೆ. ●

ಗ್ರೀಸ್: ಇಂಧನ ಕ್ಷೇತ್ರದ ಖಾಸಗಿ ಕರಣದ ವಿರುದ್ಧ ಕಾರ್ಮಿರ ಮುಷ್ಕರ



ಕಳೆದ ವಾರ ಗ್ರೀಸ್ ಸರ್ಕಾರದ ಇಂಧನ ಕ್ಷೇತ್ರದ ಖಾಸಗೀಕರಣ ಯೋಜನೆಯ ಹೊಸ ಕಾನೂನಿನ ವಿರುದ್ಧ ಅಲ್ಲಿನ ಕಾರ್ಮಿಕರು ಬೃಹತ್ ಮುಷ್ಕರವನ್ನು ನಡೆಸಿದ್ದಾರೆ. ಗ್ರೀಕ್ ಪಾರ್ಲಿಮೆಂಟಿನ ಬೀದಿಯ ಕಡೆ ಮೆರವಣಿಗೆ ನಡೆದು ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದ್ದಾರೆ. ಈ ಮುಷ್ಕರಕ್ಕೆ ಗ್ರೀಸ್ ನ "ಸಾರ್ವಜನಿಕ ಗ್ಯಾಸ್ ಕಾರ್ಪೋರೇಷನ್ (ಡಿ.ಇ.ಪಿ.ಎ–ದೀಪಾ) ಮತ್ತು ಸರ್ಕಾರಿ ಗ್ಯಾಸ್ ಫೆಡರೇಶನ್ (ಎಸ್.ಇ.ಎಫ್.ಎ– ಸೇಫಾ) ಈ ಎರಡು ಕಾರ್ಮಿಕ ಯೂನಿಯನ್ ಗಳು ಜಂಟಿಯಾಗಿ ಕರೆ ನೀಡಿದ್ದವು. ಇದರೊಂದಿಗೆ, ಡಿ.ಇ.ಎಫ್.ಎ. ನೌಕರರ ಸಂಘ ಮತ್ತು ಇನ್ಸಿಟ್ಯೂಟ್ ಆಫ್ ಜೀಯಾಲಜಿ ಅಂಡ್ ಮಿನರಲ್ ಎಕ್ಸೋಪ್ಲೋರೇಷನ್ಸ್ (ಐ.ಜಿ.ಎಮ್.ಇ) ನೌಕರರ ಒಕ್ಕೂಟ ಸೇರಿದಂತೆ ಗ್ರೀಸಿನ ಬಹುತೇಕ ಎಲ್ಲಾ ಸಂಘಟನೆಗಳು ಈ ಮುಷ್ಕರ ದಲ್ಲಿ ಭಾಗವಹಿಸಿದ್ದವು.

ಗ್ರೀಸ್ ನ ಸಾರ್ವಜನಿಕ ಗ್ಯಾಸ್ ಕಾರ್ಪೋರೇಷನ್ (ದೀಪಾ), ಅದರ ಅಂಗ ಸಂಸ್ಥೆ ಗಳೊಂದಿಗೆ ಈ ದೇಶದಲ್ಲಿ ಪ್ರಸರಣ, ವಿತರಣೆ ಮತ್ತು ನೈಸರ್ಗಿಕ ಅನಿಲದ ಮಾರಾಟದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿದೆ. ಆದರೆ, ಈ ಹೊಸ ಮಸೂದೆಯ ಪ್ರಕಾರ, ದೀಪಾ ಟ್ರೇಡಿಂಗ್ ಮತ್ತು ದೀಪಾ ಮೂಲಸೌಕರ್ಯಗಳ ಅಂಗಸಂಸ್ಥೆ ಗಳನ್ನು ವಿಲೀನ ಗೊಳಿಸಲು ಪ್ರಸ್ತಾಪಿಸಲಾಗಿದೆ. ಇದರ ಜೊತೆಗೆ, ದೀಪಾ ವಾಣಿಜ್ಯ ದ ಶೇ 51.1 ರಷ್ಟು ಮತ್ತು ಮೂಲಸೌಕರ್ಯ ದ ಶೇ. 14 ರಷ್ಟು ಪ್ರಸರಣವನ್ನು ವಿಭಜಿಸಲಾಗಿದೆ ಮತ್ತು ಇದರ ಮೇಲ್ವಿಚಾರಣೆಯನ್ನು ಖಾಸಗಿ ಯವರಿಗೆ ವಹಿಸಿಕೊಡುವ ಪ್ರಸ್ತಾವನೆಗಳು ಈ ಹೊಸ ಮಸೂದೆಯಲ್ಲಿ ಒಳಗೊಂಡಿವೆ. ಈ ಕರಡು ಮಸೂದೆಯು ಐ.ಜಿ.ಎಮ್.ಇ ಯನ್ನು ಬದಲಾಯಿಸಿ, ಅದರ ಬದಲಿಗೆ ಖಾಸಗಿ ಹತೋಟಿಯ ಬೇರೆ ಸಂಸ್ಥೆಗೆ ಮಂಜೂರು ಮಾಡಿ, ಇದರ ಪ್ರಸರಣ, ವಿತರಣೆ ಮತ್ತು ನೈಸರ್ಗಿಕ ಅನಿಲದ ಮಾರಾಟವನ್ನು ಖಾಸಗಿಯವರಿಗೆ ವಹಿಸಿಕೊಡುವ ಅಂದಾಜು ಮಾಡಲಾಗಿದೆ. ಇದರಿಂದ ದೇಶದ ಪ್ರಮುಖ ಸಂಪನ್ಮೂಲಗಳು ಖಾಸಗಿಯವರ ಪಾಲಾಗುತ್ತವೆ ಎಂದು ಮುಷ್ಕರ ನಡೆಸುತ್ತಿರುವ ಪ್ರತಿಭಟನೆಕಾರರು ಆತಂಕವನ್ನು ವ್ಯಕ್ತಪಡಿಸಿದ್ದಾರೆ.

ಈ ಮಸೂದೆಯನ್ನು ಸಿರಿಜಾ ಆಳ್ವಿಕೆಯ ನೇತೃತ್ವದ ರಾಡಿಕಲ್ಲ್ ಎಡ ಮೈತ್ರಿ ಕೂಟದ ಸರ್ಕಾರ ವು ಕಳೆದ ವಾರ ಸಂಸತ್ತಿನಲ್ಲಿ ಅಂಗೀಕಾರ ಮಾಡಿದೆ. ಆದರೆ, ಪ್ರಮುಖ ವಿರೋಧ ಪಕ್ಷಗಳಾದ ನ್ಯೂ ಡೆಮಾಕ್ರಟಿಕ್ (ಎನ್.ಡಿ) ಮತ್ತು ಡೆಮಾಕ್ರಟಿಕ್ ಕಾಂಪ್ಯಾಟ್ರಿಯೇನ್ (ಡಿ.ಸಿ) ಗಳು ಈ ಮಸೂದೆ ಯನ್ನು ತಮ್ಮದೇ ಕಾರಣಕ್ಕೆ ವಿರೋಧಿಸಿ ಮಸೂದೆಯ ವಿರುದ್ಧ ತಮ್ಮ ಮತ ಚಲಾಯಿಸಿದ್ದಾರೆ. ಹಾಗೆಯೇ, ಖಾಸಗೀಕರಣದ ಬಗ್ಗೆ ತಮ್ಮದೇ ಆದ, ಪ್ರತ್ಯೇಕ ವಾದ ಮಾದರಿ ಮಸೂದೆಯನ್ನು ಮಂಡಿಸಿದ್ದಾರೆ. ಅಂದರೆ ಇವರು ಸಹಾ, ಖಾಸಗೀ ಕರಣದ ಪರವಾಗಿಯೇ ಇರುವುದು ಸ್ಪಷ್ಟಗೊಂಡಂತ್ತಾಗಿದೆ.

ಆದರೆ, ಗ್ರೀಸ್ ನ ಕಮ್ಯೂನಿಸ್ಟ್ ಪಕ್ಷ (ಕೆಕೆಇ) ಈ ಎರಡೂ ಮಸೂದೆಗಳನ್ನು ವಿರೋದಿಸಿದೆ. ಗ್ರೀಸ್ ನ ಆರ್ಥಿಕ ಸಂಪನ್ಮೂಲಗಳ ಖಾಸಗೀಕರಣಕ್ಕೆ ಸಿರಿಜಾ ಸರ್ಕಾರ ಈ ಮಸೂದೆಯ ಮೂಲಕ ಅನುವು ಮಾಡಿಕೊಡಲು ಹೊರಟಿದೆ ಎಂದ ಕೆಕೆಇ, ಇಂಧನ ಕ್ಷೇತ್ರದ ಖಾಸಗಿ ಕರಣವನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ ಎಂದು ಸಾರಾಸಗಟಾಗಿ ತಿರಸ್ಕರಿಸಿದೆ. ಏಕೆಂದರೆ, ಈ ಮಸೂದೆಯು ದೊಡ್ಡ ವ್ಯಾಪಾರ ಗುಂಪುಗಳ ಪ್ರಯೋಜನಕ್ಕಾಗಿ, ನವ ಉದಾರವಾದ ನೀತಿಯ ಭಾಗವಾಗಿ, ಇಂಧನ ಕ್ಷೇತ್ರದ ಖಾಸಗೀಕರಣ ವನ್ನು ವೇಗಗೊಳಿಸುವ ಉದ್ದೇಶವನ್ನು ಹೊಂದಿದೆ ಮಾತ್ರವಲ್ಲದೆ, "ಇದೊಂದು, ಕ್ರಿಮಿನಲ್ ಚಟುವಟಿಕೆ" ಯಾಗಿದ್ದು, ' ದೇಶದಲ್ಲಿ ಭೂವೈಜ್ಞಾನಿಕ ಸಂಶೋಧನೆಯಲ್ಲಿ ಸುಧೀರ್ಘ ಇತಿಹಾಸವನ್ನು ಹೊಂದಿರುವ ಏಕೈಕ ಸಂಸ್ಥೆಯಾದ ಐ.ಜಿ.ಎಂ.ಇ.' ಅನ್ನು "ಸಮಾದಿ" ಮಾಡುವ ಹುನ್ನಾರವನ್ನು ಸಿರಿಜಾ ಸರ್ಕಾರ ಮಾಡುತ್ತಿದೆ ಎಂದು ಕಮ್ಯೂನಿಸ್ಟ್ ಪಕ್ಷದ ಸಂಸದರಾದ, ಡೆಮಾಂಟೊ ಮನೋಲ್ ಕೋವ್ ರವರು ಮಸೂದೆಯ ವಿರುದ್ಧ ಸಂಸತ್ ನಲ್ಲಿ ಮತ ಚಲಾಯಿಸುವ ಸಂದರ್ಭದಲ್ಲಿ ಸರ್ಕಾರದ ಖಾಸಗೀಕರಣ ನೀತಿಯನ್ನು ಕಟುವಾಗಿ ಖಂಡಿಸಿ, ಕಾರ್ಮಿಕರ ಮುಷ್ಕರವನ್ನು ಬೆಂಬಲಿಸಿದ್ದಾರೆ.

ದೀಪಾ ಮತ್ತು ಸೀಪಾ ಕಾರ್ಮಿಕರ ಒಕ್ಕೂಟವು ಸಿರಿಜಾ ಸರ್ಕಾರದ ಖಾಸಗೀಕರಣ ಯೋಜನೆಯನ್ನು ಉಗ್ರವಾಗಿ ಖಂಡಿಸುತ್ತಾ, ಇಂಧನ ಮಾರುಕಟ್ಟೆಯ ಖಾಸಗೀಕರಣದ ಪ್ರಕ್ರಿಯೆಯು, ನವ ಉದಾರವಾದ ನೀತಿಗಳ ಭಾಗವಾಗಿದ್ದು, ಇದು ಕಾರ್ಮಿಕರ ಚೌಕಾಶಿ ಮತ್ತು ಸಂಬಂಧಗಳ ಹಕ್ಕುಗಳನ್ನು ಮೊಟಕುಗೊಳಿಸುವ ಸಂಚು ಎಂದಿವೆ. ಇದರಿಂದ ಇಂಧನದ ಬೆಲೆಗಳು ತೀವ್ರವಾಗಿ ಹೆಚ್ಚಳಗೊಳ್ಳುತ್ತದೆ, ಜನರ ಗೃಹ ಉಳಿತಾಯ ಕಡಿಮೆಗೊಂಡು, ಆರ್ಥಿಕ ಹಾಗೂ ಸಾಮಾಜಿಕ ಅಸಮಾನತೆ ಹೆಚ್ಚಾಗಿ, ಇಂಧನವು ಸಾಮಾಜಿಕ ಸರಕಿನಿಂದ ಮತ್ತೊಂದು ದುಬಾರಿ ಸರಕಾಗಿ, ಕಾರ್ಪೊರೇಟ್ ಹಾಗು ಏಕಸ್ವಾಮ್ಯ ಬಂಡವಾಳದಾರರ ಪಾಲಾಗುತ್ತದೆ ಎಂಬ ಆತಂಕವನ್ನು ಎಡ ಕಾರ್ಮಿಕ ಸಂಘಟನೆಗಳು ವ್ಯಕ್ತಪಡಿಸಿವೆ. ಹೀಗಾಗಿ, ಸಿರಿಜಾ ಸರ್ಕಾರದ ಇಂಧನ ಕ್ಷೇತ್ರದ ಖಾಸಗೀಕರಣ ಯೋಜನೆಯನ್ನು ತಡೆಹಿಡಿಯಲು ಅಲ್ಲಿನ ಕಾರ್ಮಿಕರು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿರುವುದು ನವ–ಉದಾರವಾದಿ ನೀತಿಗಳ ಪರವಾಗಿರುವವರಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ●

JANASHAKTHI KANNADA VARA PATRIKE MARCH 18-24, 2019 Price: Rs. 10/- Date of Publication: 15 MARCH 2019 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2019-21 Posted at Bangalore PSO, BG - 560026 Licensed to Post without prepayment License No. WPP-283



ಡಿಜಿಟಲ್ ವೇದಿಕೆಗಳಿಂದ ಚುನಾವಣೆಯ ವಿಕೃತಿಯ ತಡೆ ಹೇಗೆ?

ಡಿಜಿಟಲ್ ವೇದಿಕೆಗಳ ಈ ಎಲ್ಲಾ ಗುಣಲಕ್ಷಣಗಳ ಪರಿಣಾಮ ಚುನಾವಣಾ ಪ್ರಚಾರದ ಮೇಲೆ ಏನು? ಅವನ್ನು ಚುನಾವಣಾ ಪ್ರಚಾರದ ಮಾಧ್ಯಮವಾಗಿ ಬಳಸಿದಾಗ ಅಥವಾ 'ರಾಜಕೀಯ ಪಕ್ಷ' ಮತ್ತು 'ಅಭ್ಯರ್ಥಿ'ಗಳನ್ನು 'ಮಾರಲು' (ಅಥವಾ ಅವರ ಮಾರ್ಕೆಟಿಂಗ್ ಗೆ) ಬಳಸುವುದರ ಪರಿಣಾಮ ಏನು? ಅವು ಏಕೆ ನಮ್ಮ ಚುನಾವಣಾ ವ್ಯವಸ್ಥೆಗೆ ಅಪಾಯ ತಂದೊಡ್ಡಬಹುದು? ಅದನ್ನು ಹೇಗ ವಿಕೃತಗೊಳಿಸಬಹುದು? ಈ ಕುರಿತು ಎಫ್.ಎಸ್.ಎಂ.ಐ.(ಮುಕ್ತ ತಂತ್ರಾಂಶ ಚಳುವಳಿ) ಮತ್ತು ಎ.ಡಿ.ಆರ್.(ಚುನಾವಣಾ ಸುಧಾರಣಾ ಸಂಘಟನೆ) ಮುಂತಾದ ಸಂಘಟನೆಗಳು 'ಟೆಕ್ ಡೆಮೊಕ್ರಸಿ' ಎಂಬ ಹೆಸರಲ್ಲಿ ಚರ್ಚೆ, ಸಂವಾದ, ಪ್ರಚಾರಾಂದೋಲನ ಏರ್ಪಡಿಸುತ್ತಿವೆ. ಆ ಪ್ರಚಾರಾಂದೋಲನದ ಪ್ರಮುಖ ಅಂಶಗಳು.

ವಸಂತರಾಜ ಎನ್.ಕೆ.

2014ರ ಚುನಾವಣೆಗಳಲ್ಲಿ ಬಿಜೆಪಿಯ ಭಾರೀ ಗೆಲುವಿನಲ್ಲಿ ಸಾಮಾಜಿಕ ಮಾಧ್ಯಮಗಳ ವ್ಯಾಪಕ ಬಳಕೆಯ ಪಾತ್ರ ಸರ್ವವಿದಿತ. ಅದೇ ರೀತಿ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಟ್ರಂಪ್ ಪರವಾಗಿ ಮತ್ತು ಬ್ರೆಕ್ಸಿಟ್ ಜನಮತಸಂಗ್ರಹದಲ್ಲಿ 'ಪರ' ಮತದ ಪರವಾಗಿ ಮಿಲಿಯಾಂತರ ಮತದಾರರ ಫೇಸ್‌ಬುಕ್ ದತ್ತಾಂಶ ಬಳಸಿ ಕೆಂಬ್ರಿಜ್ ಅನಾಲಿಟಿಕಾ ಕಾನೂನುಬಾಹಿರವಾಗಿ ಪ್ರಭಾವಿಸಿದ್ದು ಹಗರಣವಾಗಿದೆ. ಫೇಸ್‌ಬುಕ್ ಮತ್ತು ಕೆಂಬ್ರಿಜ್ ಅನಾಲಿಟಿಕಾ ವಿರುದ್ಧ ಈ ಕುರಿತು ತನಿಖೆ ನಡೆಯುತ್ತಿದೆ. ಕೆಂಬ್ರಿಜ್ ಅನಾಲಿಟಿಕಾ ಬಿಜೆಪಿ ಪರ ಸಹ ಕೆಲಸ ಮಾಡಿದೆ ಎಂಬ ಆಪಾದನೆಗಳೂ ಕೇಳಿ ಬಂದಿವೆ. 2019 ಲೋಕಸಭಾ ಚುನಾವಣೆಗಳ ಸಂಧರ್ಭದಲ್ಲಿ ಈ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಡಿಜಿಟಲ್ ವೇದಿಕೆಗಳ ಪಾತ್ರದ ಕುರಿತು ವಿಶ್ಲೇಷಿಸುವ ಅಗತ್ಯವಿದೆ.

ಇಲ್ಲಿ 'ಡಿಜಿಟಲ್ ವೇದಿಕೆಗಳ ಪಾತ್ರ' ಎನ್ನುವಾಗ ಫೇಸ್ ಬುಕ್, ವಾಟ್ಸಪ್ ಮುಂತಾದ ಸಾಮಾಜಿಕ ಮಾಧ್ಯಮಗಳ ಮೂಲಕ ಪಕ್ಷಗಳು ಅಭ್ಯರ್ಥಿಗಳು ಕೈಗೊಳ್ಳುವ ಪ್ರಚಾರ ಮಾತ್ರ ಅಲ್ಲ. ಗೂಗಲ್, ಫೇಸ್ ಬುಕ್ ಮುಂತಾದ ಡಿಜಿಟಲ್ ವೇದಿಕೆಗಳು ಅದರಲ್ಲಿ ವಹಿಸುವ ವಿಶಿಷ್ಟ ಪಾತ್ರ, ಮತದಾರರ ಮೇಲೆ ಪ್ರಭಾವ ಬೀರುವ ಹಲವು ತಂತ್ರಗಳ ಮತ್ತು ಚುನಾವಣೆಗಳ ಮೇಲೆ ಅವುಗಳ ಪರಿಣಾಮದ ಬಗೆಗೂ ವಿಶ್ಲೇಷಿಸಬೇಕಾಗಿದೆ. ಇದಕ್ಕಾಗಿ ಮೊದಲು ಪತ್ರಿಕೆ, ರೇಡಿಯೋ, ಟಿವಿ ಮುಂತಾದ ಸಾಮೂಹಿಕ ಮಾಧ್ಯಮಗಳಿಗೂ; ಗೂಗಲ್, ಫೇಸ್ ಬುಕ್ ಮುಂತಾದ ಡಿಜಿಟಲ್ ವೇದಿಕೆಗಳಿಗೂ ಇರುವ ವ್ಯತ್ಯಾಸಗಳೇನು ಎಂದು ತಿಳಿದುಕೊಳ್ಳುವುದು ಅವಶ್ಯಕ. ಇವೆರಡರ ನಡುವೆ ಕೆಲವು ಪ್ರಮುಖ ವ್ಯತ್ಯಾಸಗಳಿವೆ. ಪತ್ರಿಕೆ, ರೇಡಿಯೋ, ಟಿವಿ ಮುಂತಾದ ಸಾಮೂಹಿಕ ಮಾಧ್ಯಮಗಳ ಮೇಲೆ ಈಗಿನ ಚುನಾವಣಾ ಕಮಿಶನ್ ನಿಯಮಗಳ ಪ್ರಕಾರ ಅವುಗಳ ಪ್ರಕಟಣೆಗಳಲ್ಲಿ ಯಾವುದು ಜಾಹೀರಾತು, ಯಾವುದು ಕಾಸಿಗಾಗಿ ಸುದ್ದಿ ಹಾಗೂ ಅದರ ಬೆಲೆ ಎಷ್ಟು ಎಂದು ತಿಳಿಸಬೇಕು. ಈ ಎಲ್ಲಾ ಮಾಧ್ಯಮಗಳಲ್ಲಿ ವಿವಿಧ ಪಕ್ಷಗಳಿಗೆ ಸಮಾನ ಅವಕಾಶ ಕೊಡುವ ನಿಯಮಗಳನ್ನು ಕಮಿಶನ್ ರೂಪಿಸಬಹುದು. ಉದಾಹರಣೆಗೆ ಆಕಾಶವಾಣಿ, ದೂರದರ್ಶನ ಗಳಲ್ಲಿ ಎಲ್ಲಾ ರಾಜಕೀಯ ಪಕ್ಷಗಳಿಗೆ ಪ್ರಚಾರಕ್ಕೆ ಸಮಾನ ಸಮಯ ಕೊಡುವ ವ್ಯವಸ್ಥೆಯಿದೆ. ಇವೆಲ್ಲ ಸಾಧ್ಯತೆಗಳನ್ನು ಪೂರ್ಣವಾಗಿ ಬಳಸಿಕೊಂಡು ಜಾರಿ ಮಾಡಲಾಗಿಲ್ಲ ಎಂಬುದು ನಿಜ. ಆದರೆ ಈ ಬಗ್ಗೆ ಹೆಚ್ಚಿನ ಅರಿವು ಮತ್ತು ರಾಜಕೀಯ ಇಚ್ಛೆಯಿದ್ದರೆ ಇದನ್ನು ಪೂರ್ಣವಾಗಿ ಜಾರಿ ಮಾಡುವ ಸಾಧ್ಯತೆಯಂತೂ ಇದೆ. ಆದರೆ ಪ್ರತಿ ಮತದಾರನಿಗೆ ಗುರಿಯಿಡುವ ವೈಯಕ್ತಿಕ ಪ್ರಚಾರ ಮಾಡುವ ಸಾಮರ್ಥ್ಯ ಇರುವ ಗೂಗಲ್, ಫೇಸ್‌ಬುಕ್ ನಂತಹ ಜಾಗತಿಕ ದೈತ್ಯ ಗಾತ್ರದ ಡಿಜಿಟಲ್ ವೇದಿಕೆಗಳಿಗೆ ಕಡಿವಾಣ ಹಾಕುವುದು ಸುಲಭ ಸಾಧ್ಯವಲ್ಲ. ಈ ವೇದಿಕೆಗಳ ಸ್ವರೂಪಕ್ಕೆ ಅನುಗುಣವಾದ ವಿಧಾನಗಳನ್ನು ರೂಪಿಸಬೇಕಾಗಿದೆ.

ಸಾಮೂಹಿಕ ಮಾಧ್ಯಮಗಳು ಮತ್ತು ಡಿಜಿಟಲ್ ವೇದಿಕೆಗಳು ಎರಡೂ ಜಾಹೀರಾತುಗಳ ಮೇಲೆ ಅವಲಂಬಿತವಾಗಿವೆ. ಆದರೆ ಜಾಹೀರಾತುದಾರರಿಗೆ ಬೇಕಾದ ಜನವಿಭಾಗಗಳನ್ನು ತಲುಪುವ ಅವುಗಳ ಸಾಮರ್ಥ್ಯದಲ್ಲಿ ಅಜಗಜಾಂತರವಿದೆ. ಸಾಮೂಹಿಕ ಮಾಧ್ಯಮಗಳು ಬಹಳ ಸ್ಥೂಲವಾದ ಜನವಿಭಾಗಗಳನ್ನಷ್ಟೇ ಜಾಹೀರಾತುದಾರರಿಗೆ ಒದಗಿಸಬಲ್ಲವು. ಉದಾಹರಣೆಗೆ, ಪತ್ರಿಕೆಗಳು ಕ್ರೀಡಾ ಪುಟವನ್ನು ಯುವಜನರು, ಮಹಿಳಾ ಪುಟವನ್ನು ಮಹಿಳೆಯರು ಓದುತ್ತಾರೆ ಎಂದಷ್ಟೇ ಹೇಳಬಲ್ಲವು. ರೇಡಿಯೋ, ಟಿವಿಗಳಲ್ಲಿ ಕಾರ್ಯಕ್ರಮದ ಸ್ವರೂಪ (ಸೀರಿಯಲ್, ಹಾಡು, ನೃತ್ಯ, ಕಾರ್ಟೂನ್ ಇತ್ಯಾದಿ) ಮತ್ತು ಸಮಯಗಳ ಆಧಾರದ ಮೇಲೆ, ಮಧ್ಯಾಹ್ನ ಹೆಚ್ಚಾಗಿ ಗೃಹಿಣಿಯರು, ಕಾರ್ಟೂನು ಕಾರ್ಯಕ್ರಮಕ್ಕೆ ಮಕ್ಕಳು ಇತ್ಯಾದಿ ಸ್ಥೂಲವಾಗಷ್ಟೇ ಹೇಳಬಲ್ಲರು.

ಇದಕ್ಕೆ ಬದಲಾಗಿ ಡಿಜಿಟಲ್ ವೇದಿಕೆಗಳು ಒಬ್ಬ ಬಳಕೆದಾರನ ಪೂರ್ಣ 'ಜಾತಕ'ವನ್ನೇ ಹೊಂದಿರುತ್ತದೆ. ಬಳಕೆದಾರನ/ಳ ವಯಸ್ಸು, ಲಿಂಗ, ಆದಾಯ, ವಿದ್ಯಾರ್ಹತೆ, ಉದ್ಯೋಗ,

ಪುಟ 14 ಕ್ಕೆ





ಕಲಬುರಗಿ ರಾಜಕೀಯ ಸಮಾವೇಶ

ಭಾರತಿಯ ಸೈನ್ಯೆವನ್ನ ರಾಜಕಿಯ ಲಾಭಕ್ಕಾಗಿ ಬಳಸುವದನ್ನು ವಿರೋಧಿಸಿ. ರೈತರ ಸಂಕಷ್ಟಗಳನ್ನು ಪರಿಹರಿಸದ ಬಿಜೆಪಿ ಸರ್ಕಾರದ ನೀತಿ ವಿರೋಧಿಸಿ ಯುವ ಜನರಿಗೆ 10 ಕೋಟಿ ಉದ್ಯೋಗ ನೀಡದ, ಕಾರ್ಮಿಕ ಕಾನೂನುಗಳ ತಿದ್ದುಪಡಿಯನ್ನು ವಿರೋಧಿಸಿ ರೈತರು – ಕಾರ್ಮಿಕರು 5000 ಪೇನ್ಷನ್ ನೀಡದ ಹಾಗೂ ಕನಿಷ್ಟ ವೇತನ 18000 ರೂ. ನಿರಾಕರಿಸಿದ, ದೇಶದ ಐಕ್ಯತೆ ಸಮಗ್ರತೆ, ಸೌಹಾರ್ಧತೆಗೆ ಧಕ್ಕೆ ತರುತ್ತಿರುವ ಬಿಜೆಪಿ ನೇತ್ರತ್ವದ ಮೋದಿ ಸರ್ಕಾರದ ನೀತಿ ವಿರೋಧಿಸಿ ಸಿಪಿಐ(ಎಂ) ಕಲ್ಬುರ್ಗಿಯಲ್ಲಿ ರಾಜಕೀಯ ಸಮಾವೇಶ ನಡೆಸಿತು. ಉದ್ಘಾಟನೆಯನ್ನು ಸಿಪಿಐ(ಎಂ) ಪೋಲಿಟ್ ಬ್ಯೂರೊ ಸದಸ್ಯರಾದ ಕಾಮ್ರೇಡ್ ಎಂ.ಎ. ಬೇಬಿ ನೆರವೇರಿಸಿದರು.



JANASHAKTHI KANNADA VARA PATRIKE: Printed, Published by **G.N.NAGARAJ**, No. 12, 18th Cross, Sampangirama Nagar, Bangalore 560027, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**